

4. ಸಾಹಿತ್ಯಿಕ-ಸಾಂಸ್ಕೃತಿಕ ದ್ವೈಮಾಸಿಕ ಪತ್ರಿಕೆ

ಈ ಸಂಚಿಕೆಯಲ್ಲಿ

(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

*ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಹೊಸ ದಿಕ್ಕು ಸಾಹಿತ್ಯಿಕ-ಸಾಂಸ್ಕೃತಿಕ ದ್ವೈಮಾಸಿಕ

ಸಂಪುಟ-1 ಸಂಚಿಕೆ-4 (ನವಂಬರ-ಡಿಸೆಂಬರ1992)

ಸಂಪಾದಕತಿಮ್ಮಯ್ಯ ಪುರ್ಲೆ

ಸಲಹೆ : ಚಂದ್ರಕಾಂತ ಕರದಳ್ಳಿ, ಎಸ್. ಬಿ. ಹೊನ್ನಕಲ್, ಸೂಗಯ್ಯ ಹಿರೇಮಠ

ನೀವು ಕಳಿಸುವ ಚಂದಾ "ಹೊಸದಿಕ್ಕು" ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : ರೂ. 50-00 + ಅಜೀವ ಚಂದಾ : ರೂ. 500-00

ಹೈದರಾಬಾದ ಕರ್ನಾಟಕ ಹಾಗು ಸುತ್ತಲಿನ ಬಿಜಾಪುರ, ಬಳ್ಳಾರಿ ಜಿಲ್ಲೆಗಳ ಲೇಖಕರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಮೂಲಕ ಕನ್ನಡ ನಾಡಿನಾದ್ಯಂತ ತಲುಪಲು ಇಚ್ಛಿಸುವ 'ಹೊಸದಿಕ್ಕು'ಗೆ ದಯವಿಟ್ಟು ನೀವು ಚಂದಾದಾರರಾಗಿ. ನಿಮ್ಮ ಸ್ನೇಹಿತರನ್ನು ಆಸಕ್ತರನ್ನು ಚಂದಾದಾರರಾಗಿಸಿರಿ. ಲೇಖನ, ಕವನ, ಕಥೆ, ಇತ್ಯಾದಿ ಕಳಿಸುವವರು ಸ್ವೀಕೃತಿ ಬಗ್ಗೆ ತಿಳಿಯಲು ಸ್ವವಿಳಾಸದ ಕಾರ್ಡು ಇಡಿ.

...○...

ಸಂಪಾದಕರು :

'ಹೊಸದಿಕ್ಕು'
ಗೀತಾಂಜಲಿ ಬಿಲ್ಡಿಂಗ್
(ದಿಗ್ಗಿ ಬಿಲ್ಡಿಂಗ್ ಹತ್ತಿರ)
ಅಂಚೆ : ಶಹಾಪುರ-೫೮೫೨೨೩

ಚಂದಾ ಕಳಿಸುವ ವಿಳಾಸ :

ಚಂದ್ರಕಾಂತ ಕರದಳ್ಳಿ
ಶಹಾಪುರ ಪೇಟ,
ಶಹಾಪುರ-೫೮೫೨೨೩
ಕಲ್ಬುರ್ಗಿ ಜಿಲ್ಲೆ (ಕರ್ನಾಟಕ)

ಪತ್ರಿಕೆಯ ಅಂತರಂಗದಿಂದ ನಿಮ್ಮ ಅಂತರಂಗಕ್ಕೆ

ರಾಯಚೂರಿನಲ್ಲಿಯ ಕಥಾ ಕಮ್ಮಟ ಹಾಗು ಶಾಂತರಸರು ಇತ್ಯಾದಿ...

ನಿನ್ನೆ ತಾನೇ ಕಥಾ ಕಮ್ಮಟದಿಂದ ಹಿಂದಿರುಗಿರುವೆ, ಕೊಪ್ಪಳದಲ್ಲಿ ನಡೆಯಲಿರುವ ಅಖಿಲ ಭಾರತ ೬೨ನೆಯ ಕ. ಸಾ. ಸಮ್ಮೇಳನದ ಮುಂಚೆ ಈ ೪ನೇ ಸಂಚಿಕೆ ಹೊರಬರಬೇಕಾಗಿದೆ. ಬೇಗ ಸಂಪಾದಕೀಯ ಬರೆದು ಎಲ್ಲಾ 'ವಸ್ತು'ವಿನೊಂದಿಗೆ ಪತ್ರಿಕೆಯನ್ನು ಅಚ್ಚಿಗೆ ಕೊಟ್ಟು ಬನ್ನಿ ಎಂದು ಗೆಳೆಯರು ಹೇಳಿದಾಗ ಸ್ವಲ್ಪ ಗೊಂದಲವಾಯಿತು, ಅದು ಈ ಸಲ ಏನು ? ಬರೆಯಬೇಕೆಂಬುದರ ಬಗ್ಗೆ ಮಾತ್ರ ಗೊಂದಲ.

ಕಳೆದ ೩ ಸಂಚಿಕೆಯಿಂದಲೂ 'ಚಂದಾ' ಬಗ್ಗೆ ಬರೆದದ್ದೆ ಆಯಿತು. ಈ ಮಧ್ಯೆ ಪ್ರೊ. ಚಂಪಾ 'ಚಂದಾಯಣ' ವನ್ನೆ ಬರೆದು ಡಾ. ಬಿಳಿಮಲೆಯವರಿಂದ ಸಂಪಾದರಾಯಣವನ್ನು ಬರೆಸಿಕೊಂಡರು. ಈ ಎರಡನ್ನೂ ಬಹುತೇಕವಾಗಿ ಓದಿಬಲ್ಲ ನಮ್ಮ 'ಹೊಸದಿಕ್ಕು' ಓದುಗರಿಗೆ ಚಂದಾಯಣಕ್ಕಿಂತ ಸಂಪಾದರಾಯಣವೇ ಹೆಚ್ಚು ಸ್ಪಂದಿಸಿದಂತೆ ಕಾಣುತ್ತದೆ. ಹಾಗಾಗಿ ಚಂದಾ ಕಳಿಸುವದು ಬರುತ್ತದೆಂದು ಹಲವು ನೂರು ಜನ ಪತ್ರಿಕೆ ತಲುಪಿಲ್ಲವೆಂದು ಕಾರ್ಡು ಬರೆಯಬಹುದೆಂದು ನಿರೀಕ್ಷಿಸಿದ್ದೆ. ನಿರೀಕ್ಷೆ ಬಹುಪಾಲು ಸುಳ್ಳಾಗಿಲ್ಲ.

ಇರಲಿ ನನಗೆ ವಿಶ್ವಾಸವಿದೆ, 'ಹೊಸದಿಕ್ಕು' ಬದುಕಲಿ ಎಂದು ಬಯಸುವವರು ವರ್ಷ ತುಂಬುವ ಒಳಗೆ ಖಂಡಿತ ಚಂದಾಹಣ ಕಳಿಸುತ್ತಾರೆಂದುಕೊಂಡಿರುವೆ. ಹಾಗಾಗಿ ಇದೀಗ ಸ್ವಲ್ಪ ರಾಯಚೂರಿನ ಕಥಾ ಕಮ್ಮಟದ ಕಡೆಗೆ ಯೋಚಿಸಬಹುದು.

ಭೂತಕಾಲದ ಗ್ರಹಿಕೆ, ವರ್ತಮಾನದ ತಳಮಳ ಈ ಎರಡನ್ನು ಒಳಗೊಂಡು ಭವಿಷ್ಯದ ಬೆಳಕನ್ನು ದಕ್ಕಿಸಿಕೊಳ್ಳುವ ಕ್ರಿಯೆ ನಡೆಯಬೇಕೆಂದು ತಮ್ಮ ಎಂದಿನ ಸ್ವೀಟ್ ಆದ ಸ್ಪಷ್ಟ ಮಾತುಗಳಲ್ಲಿ ಶ್ರೀ ಬರಗೂರರು ಕಥಾ ಕಮ್ಮಟದ ಪ್ರಸ್ತಾವನೆಯಲ್ಲಿ ತಿಳಿಸಿದಾಗ ಒಂದು ಕ್ಷಣ ಮನಸ್ಸು ರೋಮಾಂಚನಗೊಂಡಿತು. ಸಾಂಸ್ಕೃತಿಕ ಕ್ಷೇತ್ರಕ್ಕೆ ರಾಜಕೀಯ ಪ್ರಜ್ಞೆ. ರಾಜಕೀಯಕ್ಕೆ ಸಾಂಸ್ಕೃತಿಕ ಪ್ರಜ್ಞೆ ಬಂದಾಗ ಅರ್ಥಪೂರ್ಣವಾದ ಸಂವಾದ ಬರುವದು ಮತ್ತು ಪರಸ್ಪರ ಕ್ಷೇತ್ರಕ್ಕೆ ಜನ ಸಂವೇದನೆ ದೊರಕಿಸಿಕೊಡುತ್ತದೆ" ಎಂದು ಮುಂದುವರಿದು ಶ್ರೀ ಬರಗೂರರು ತಿಳಿಸಿದಾಗ ಹೌದಲ್ಲವೆ ? ಅನಿಸಿತು.

ಉದ್ಘಾಟನೆ ಮಾಡಿದ ಶಾಂತರಸರು ತಮ್ಮ ಎಂದಿನ ಕಳಕಳಿಯಲ್ಲಿ ಈ ಭಾಗಕ್ಕಾದ ಅಸಮತೋಲನವನ್ನು ತಿಳಿಸಿ ಸಾಹಿತ್ಯದಲ್ಲಿ ನಮಗೆಲ್ಲ ಇಷ್ಟವಾಗುವ 'ಮೀಸಲಾತಿ' ಯನ್ನು ಕೋರಿದ್ದು ಯೋಚನೆಗೆ ಯೋಗ್ಯ. "ಇದು 'ಕಥೆ' ಬರೆಯುವದನ್ನೇ ಕಲಿಸುವದಿಲ್ಲ. ಬರೆಯಬಲ್ಲವರಿಗೆ ಹಲವು ಹೊಳಹು ನೀಡಬಲ್ಲ ನೆಲೆಗಳನ್ನು ತೋರಿಸುವದಷ್ಟೆ" ಎಂಬ ನಿರ್ದೇಶಕರೀರ್ವರಾದ ಡಾ. ಕರಿಗೌಡ ಬೀಚನಳ್ಳಿ, ಡಾ. ರಾಜಶೇಖರ ನೀರಮಾನ್ವಿಯವರ ಮಾತುಗಳಂತೆ ಈ ಕಮ್ಮಟ ಅಷ್ಟು ಕೆಲಸ ಮಾತ್ರ ಮಾಡಿತು.

ನಾನು ಇಂತಹ ಕಮ್ಮಟಗಳಿಗೆ, ಸಭೆ-ಸಮಾರಂಭಗಳಿಗೆ ಏನಾದರು ಕಲಿಯಬಹುದೆಂದು ಖಂಡಿತವಾಗಿಯು ಭಾವಿಸಿಕೊಂಡು ಹೋಗುವದಿಲ್ಲ. ದೊಡ್ಡ ದೊಡ್ಡ ಸಮ್ಮೇಳನಗಳಲ್ಲಿ ನೂರಾರು ಮೆಚ್ಚಿನ ಲೇಖಕರು ಗೆಳೆಯರು ಕಾಣ ಸಿಗುತ್ತಾರೆ. ಆ ಖುಷಿಗೆ ಹಾಗು ಒಂದೆರಡು ಮಾತುಗಳು ನೆನಪಿನಲ್ಲಿ ಉಳಿದರೆ ಉಳಿಯಲಿ ಎಂದುಕೊಂಡು ಹೋಗುವಂತೆ ಇಲ್ಲಿಯು ಹೋಗಿದ್ದೆ. ಮೆಚ್ಚಿನ ಹೆಸರಾಂತ ಲೇಖಕರಾದ ಕುಂ. ವೀರಭದ್ರಪ್ಪನವರು ಹಾಗು ನಮ್ಮವರಾದ ಡಾ. ವಾಲೀಕಾರರು, ಗೀತಾ ನಾಗಭೂಷಣರವರ ಮಾತುಗಳನ್ನು ಮತ್ತೊಮ್ಮೆ ಕೇಳಿದಂತಾಯಿತು. 'ಕುಂ ವೀ' ಯವರಂತು ತಮ್ಮ ಕಥನ ಕಲೆಯ ನೆಲೆಗಳನ್ನು ಸಹಜವಾಗಿ ಬಿಚ್ಚಿಕೊಂಡರು. ಇದು ಖಂಡಿತ ನನ್ನೊಳಗೆ ಕೆಲ ಕಥೆಗಳ ಹುಟ್ಟಿಗೆ ಬೀಜವಾಗಬಹುದು. ಅಷ್ಟೆ ಉಪಯುಕ್ತ ವಿಷಯ ಮಂಡಿಸಿದ್ದು ಗೆಳೆಯ ನುಗಡೋಣಿಯವರು.

ದೂರದಿಂದ ನೋಡಬಲ್ಲ ಓದಿಬಲ್ಲ ಶಾಂತರಸರನ್ನು ಕಂಡು ಮಾತಾಡಬೇಕೆಂಬ ಬಯಕೆ ಇತ್ತು. ನನ್ನ ಸಂಕೋಚ ಕಾಣಗೊಟ್ಟಿರಲಿಲ್ಲ, ಕೆಲಗೆಳೆಯರು ಬಂದು ಶಾಂತರಸರು ಹೊನ್ಕಲ್ ಕಮ್ಮಟಕ್ಕೆ ಬಂದಿದ್ದಾರೋ ಇಲ್ಲವೊ ? ಎಂದು ವಿಚಾರಿಸಿದರೆಂದು ತಿಳಿಸಿದರು, ಉದ್ಘಾಟನೆ ದಿನವೇ ನಮಸ್ಕಾರ ಅರ್ಪಿಸಿ ದೂರ ಸರಿದಿದ್ದೆ. ಗೆಳೆಯ ಬಸು ಬೇವಿನಗಿಡದ, ಅಮರೇಶ ಕುಂಬಾರ, ರಾಜಶೇಖರ ಹತಗುಂದಿಯನ್ನು ಕಟ್ಟಿಕೊಂಡು ಸುಡು ಸುಡು ಬಿಸಿಲಲ್ಲಿ ಶಾಂತರಸರ ಅಜಾದ ನಗರದ ಮನೆಬಾಗಿಲು ತಟ್ಟಿದೆ, ಅವರಿರಲಿಲ್ಲ. ಅಂದೇ ರಾಜ್ಯೋತ್ಸವ ಪ್ರಶಸ್ತಿ ಬಂದಿದ್ದರಿಂದ ಅವರು ಅದನ್ನು ಸ್ವೀಕರಿಸಬೇಕೊ ? ಬಿಡಬೇಕೋ ಎಂಬ ಗೊಂದಲದಲ್ಲಿ ಚರ್ಚಿಸಲು ಹೋಗಿದ್ದರು, ಅವರ ಶ್ರೀಮತಿಯವರು ನನ್ನ ಹೆಸರು ಕೇಳಿ ತುಂಬಾ ಖುಷಿಯಿಂದ ಪ್ರೀತಿ ತೋರಿ ನಮ್ಮನ್ನೆಲ್ಲಾ ಕೂಡಿಸಿ ಅದು ಇದು ಮಾತಾಡುತ್ತಿರುವಂತೆ ಶಾಂತರಸರು ಬಂದೇ ಬಿಟ್ಟರು. ಪ್ರಶಸ್ತಿ ಬಂದಿದ್ದಕ್ಕೆ ಹೂ...ಗೊಂಚಲು ಅರ್ಪಿಸಿದೆವು. ಶಾಂತರಸರ ಬಗ್ಗೆ..

ಚಾಳೀಸಿನ ನಂಬರು ಹೆಚ್ಚಾದಂತೆ ದೃಷ್ಟಿಯ ಕ್ಷಿತಿಜ ವಿಸ್ತಾರವಾಗುತ್ತದೆ ಎಂದು ನನ್ನ ಮೆಚ್ಚಿನ ಕವಿ ಚಂಪಾ ಬರೆದದ್ದು ನಿಜ ಅನಿಸಿತು. ನನ್ನ ಕುರಿತು ನನ್ನ ಎಲ್ಲಾ ಸಂಕಲನಗಳ ಕುರಿತು, ಹೊಸದಿಕ್ಕು ಕುರಿತು, ಗೆಳೆಯರ ಕುರಿತು ಹಾಗೆ ತುಂಬಾ ಆತ್ಮೀಯವಾಗಿ ಮಾತಾಡಿದರು, ಪ್ರೋತ್ಸಾಹಿಸಿದರು. ಗೆಳೆಯ ಪುರ್ಲೆಯವರ ಬಗ್ಗೆ. ವಾರ ಪತ್ರಿಕೆಯಲ್ಲಿನ ವಿವಾದ ಬಗ್ಗೆ ಪ್ರಸ್ತಾಪಿಸಿ. ಆಗ ಅವರು ಬರೆದದ್ದು ಸತ್ಯ. ನಂತರ ನನಗೆ ಅದು ಗೊತ್ತಾಯಿತು, ಹಾಗಾಗಿ ಕನಸಿನಲ್ಲಿ ನನ್ನ ಕಣ್ಣೀರು ಒರಸಿದೆ ಎಂದು ಪತ್ರ ಹಾಕಿದ್ದ ವ್ಯಕ್ತಿಯೊಬ್ಬನಿಗೆ ನೀನು ನಿನ್ನ ಜೀವನದಲ್ಲಿ ಯಾರ ಕಣ್ಣೀರನ್ನು ಒರೆಸಿಲ್ಲ. ನನ್ನನ್ನು ಕಾಣಲು ಬರಬೇಡ" ಎಂದು ದೂರವಿಟ್ಟ ಬಗ್ಗೆ ತಿಳಿಸಿದರು. ಆಗ ನಾನು ಅಂಥ ಕ್ಷುದ್ರ ಜಂತುವನ್ನು ನಾವು ಯಾವ ಲೆಕ್ಕಕ್ಕೂ ಹಿಡಿದಿಲ್ಲ. ಅಂತ ನೂರಾರು ಹುಳಗಳನ್ನು ದಾಟಿ ಮೀರಿ ಮುಂದೆ ಬಂದಾಗಿದೆ. ಈಗ ಅವೆಲ್ಲಾ ಲೆಕ್ಕಕ್ಕಿಲ್ಲ ವೆಂದು ನಮ್ಮಷ್ಟಕ್ಕೆ ನಾವು ನಮ್ಮ ಕ್ರಿಯೆಗಳಲ್ಲಿ ತೊಡಗಿರುವ ಬಗ್ಗೆ ತಿಳಿಸಿ ಈಗ ಅವನ ಬಗ್ಗೆ ಪ್ರೀತಿಯು ಇಲ್ಲ. ದ್ವೇಷವು ಇಲ್ಲ. ಹಾಗಾಗಿ ಅದರ ಪಾಡಿಗೆ ಅದನ್ನು ಬಿಟ್ಟಿರುವೆ ನಿಲುವು ತಿಳಿಸಿದಾಗ ಮೆಚ್ಚಿಕೊಂಡರು.

ನಂತರ ವಿಷಯ ಪ್ರಶಸ್ತಿಯ ಕಡೆಗೆ ಹೊರಳಿದಾಗ ಅವರಿನ್ನು ಸ್ಪಷ್ಟ ನಿರ್ಧಾರ ತೆಗೆದುಕೊಂಡಿರಲಿಲ್ಲ. ಬಿಸಿಲಲ್ಲಿ ಬೆಂದುಹೋಗಿದ್ದ ನಮಗೆಲ್ಲಾ ಅವರ ಚಿಕ್ಕ ಮಗಳು (ಇರಬಹುದು) ಕೊಟ್ಟ ತಂಪು ಪಾನಕ ತುಂಬ ಇಷ್ಟವಾಯಿತು. ಅವರ ಮಾತು ಕಳಕಳಿ ನಿಜಕ್ಕೂ ಹೈದ್ರಾಬಾದ ಕರ್ನಾಟಕದ ಬಗೆಗಿನ ನನ್ನ ಅಭಿಮಾನಕ್ಕೆ ಇನ್ನಷ್ಟು ರೆಕ್ಕೆ-ಪುಕ್ಕ ಮೂಡಿಸಿದವು.

ನೀವು ಸುಮ್ಮನಿದ್ದರೆ ಸಮ್ಮೇಳನದ ಅಧ್ಯಕ್ಷರಾಗುತ್ತಿದ್ದಿರಿ. ಯಾಕೆ ? ಎಲ್ಲಾ ಜಿಲ್ಲಾ ಅಧ್ಯಕ್ಷರಿಗೆ ಪತ್ರ ಬರೆದು ಡಾ. ಸಿಂಪಿ ಲಿಂಗಣ್ಣನವರನ್ನು ಅಧ್ಯಕ್ಷರನ್ನಾಗಿಸಲು ಒತ್ತಾಯಿಸಿದೀರಿ ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ನಿಜಕ್ಕೂ ಅವರ ವ್ಯಕ್ತಿತ್ವದ ಎತ್ತರವನ್ನು ಪರಿಚಯಿಸಿತು,

ಹತ್ತಾರು ವರ್ಷಗಳಿಂದಲೂ ಡಾ. ಸಿಂಪಿ ಲಿಂಗಣ್ಣನವರು ಅಧ್ಯಕ್ಷರಾಗಲಿ ಎಂದು ನಾನು ಒತ್ತಾಯಿಸುತ್ತಾ ಬಂದಿದ್ದೆ, ಎಷ್ಟೊ ಸಲ ಜಗಳವು ಆಡಿದ್ದೆ. (ಒಮ್ಮೆ ಜಿ. ಎಸ್. ಶಿವರುದ್ರಪ್ಪನವರೊಂದಿಗೆ ಜಗಳವಾಡಿದ್ದರ ನೆನಪು ಹಂಚಿಕೊಂಡರು) ಈಗ ನನ್ನ ಹೆಸರು ಬಂದಾಗ ನಾನು ಮೌನವಾಗಿ ಕುಂತರೆ ಸ್ವಾರ್ಥಿಯಾಗುವದಿಲ್ಲವೆ ? ಹಾಗಾಗಿ ನಾನು ಕಣವಿಯವರು ಮಾತಾಡಿಕೊಂಡು ಹಿಂದೆ ಸರಿದು ಡಾ. ಸಿಂಪಿ

ಲಿಂಗಣ್ಣನವರಿಗೆ ಬೆಂಬಲಿಸಿದೆವು. ಎಂದು ತಿಳಿಸಿದಾಗ ನನಗಂತು ಹೃದಯ ತುಂಬಿ ಬಂತು, ಡಾ. ಸಿಂಪಿ ಲಿಂಗಣ್ಣನವರು ಅಧ್ಯಕ್ಷರಾಗಲು ಶಾಂತರಸರ ತ್ಯಾಗ ಅನ್ನುವದು ಇಡೀ ನಾಡಿಗೆ ಗೊತ್ತಾದಿದೆ.

ಒಮ್ಮ 'ಹೊಸದಿಕ್ಕು' ಬಳಗಕ್ಕೆ ಡಾ. ಸಿಂಪಿ ಲಿಂಗಣ್ಣನವರು ಅಧ್ಯಕ್ಷರಾದುದು ಇಷ್ಟವಿಲ್ಲ ಎಂಬ ಅನಿಸಿಕೆ ಯಾರಿಗೂ ಬರಬೇಕಿಲ್ಲ. ಅವರ ಬಗ್ಗೆ ನಮಗೆ ತುಂಬಾ ಅಭಿಮಾನವಿದೆ. ಹತ್ತಾರು ವರ್ಷಗಳಷ್ಟು ಹಿಂದೆಯೇ ಈ ಗೌರವ ಅವರಿಗೆ ಸಿಗಬೇಕಾಗಿತ್ತು, ಆದರೆ ಇಲ್ಲಿಯುವರೆಗೆ ಮರೆತು ಈಗ ಶಾಂತರಸರಂತವರಿಗೆ ಆ ಗೌರವ ಸಿಗಬೇಕಾದ ಸ್ಥಳದಲ್ಲಿ–ಸಂದರ್ಭದಲ್ಲಿ ಆ ಸ್ಥಾನ ಅವರಿಗೆ ಸಿಗಲಿ ಎಂಬುದಾಗಿತ್ತೆ ಹೊರತು ಬೇರೇನು ಅಲ್ಲ. ನಾಡಿನ ಪ್ರತಿಯೊಬ್ಬರು ಹೆಮ್ಮ ಪಡಬೇಕಾದ ವ್ಯಕ್ತಿ ಡಾ. ಸಿಂಪಿ ಲಿಂಗಣ್ಣನವರು.

ರಾಯಚೂರಿಗೆ ಬಂದಾಗಲೆಲ್ಲಾ ಮನೆಗೆ ಬನ್ನಿ ಎಂದು ಅತ್ಮೀಯವಾಗಿ ಬಿಳ್ಕೊಟ್ಟ ಶಾಂತರಸರವರ ಮನೆಯಿಂದ ಹೊರಬಂದ ನಮಗೆ ಮತ್ತೆ ಕಥಾ ಕಮ್ಮಟದ್ದೆ ನೆನಪು. ನಾವು ಕಮ್ಮಟಕ್ಕೆ ಬಂದಿರುವದೇ ಊಟಕ್ಕೇನೋ... ಎಂಬ ಕಾಳಜಿಯಿಂದ ಎಲ್ಲರಿಗೂ ಪ್ರೀತಿಯಿಂದ "ಊಟ ಹೇಗಿದೆ ? ಸಂಜೆ ಸ್ಪೇಷಲ್ ಮಾಡಿಸುವಾ" ಎಂದು ಯೋಗ ಕ್ಷೇಮ ವಿಚಾರಿಸುವ ಜಂಬಣ್ಣ ಅಮರ ಚಿಂತರನ್ನು, ಅವರ ಮಗನ ವ್ಯವಸ್ಥೆಯನ್ನು ಆಗಾಗ ಕಂಡು ಸ್ನೇಹ ತೋರಿದ ಎಸ್. ಜಿ. ಸ್ವಾಮಿಯವರನ್ನು ಮತ್ತು ಕಮ್ಮಟದಲ್ಲಿ ಬಹುಪಾಲು ಪ್ರೀತಿ ತೋರಿ ತಮ್ಮ ಬೌದ್ಧಿಕತೆಯಿಂದ ಪ್ರಭಾವ ಬೀರಿದ ಗೆಳೆಯ ಕೆ. ಸೋಮಶೇಖರ ಹಾಗು ಹಂಚಿನಮನಿ ವೀರಭದ್ರಪ್ಪನವರು ಸದಾ ನೆನಪಿನಲ್ಲಿ ಉಳಿಯುವಂತರು. ಇಪ್ಪತ್ತೈದು ವಯಸ್ಸಿಗೆ ಇಪ್ಪತ್ತು ಪುಸ್ತಕ ಹೊರತಂದ ಗೆಳೆಯ ಕಥೆಗಾರ ಶೇಖರ ಕತ್ತಿಗೆ ನನ್ನ ಜೀವಗಳು ಮಾರಾಟಕ್ಕಿವೆ!." ಕವನಕ್ಕೆ ರಾಗ ಸಂಯೋಜನೆ ಮಾಡಿ ಕಮ್ಮಟದಲ್ಲೆ ಹಾಡಿ ತೋರಿಸಿದ ಗೆಳೆಯ ಶರಣಪ್ಪ ವಡಿಗೇರಿ ಹೀಗೆ ಎಲ್ಲರನ್ನು ನೆನೆಯುತ್ತ ಆ ರೈತ ಭವನದ ವಾಸ್ತವದಲ್ಲಿ ಕಚ್ಚಿದ ಸೊಳ್ಳೆಗಳು ಮಲೇರಿಯಾ ತಂದು ಹತ್ತು ದಿನ ಮಲಗಿಸಿ ಹಲವಾರು ನೆನಪುಗಳನ್ನು ಮಾಸಿಸಿದರು ಸಹ ಎರಡು ಸಂಜೆಗಳಲ್ಲಿಯ ಚರ್ಚೆಗಳನ್ನು ಮರೆಯಲಾಗುವುದಿಲ್ಲ.

ಡಾ॥ ನಿರವಾನ್ನಿ, ಕುಂವಿ. ನಿತ್ಯ ನೂತನದ ಪಾಟೀಲರು ಹಾಗು ಹಂಚಿನ ಮನೆ ವೀರಭದ್ರಪ್ಪ ಖ್ಯಾತಕೊಳಲು ವಾದಕ (ಹೆಸರು ನೆನಪಾಗುತ್ತಿಲ್ಲ ಕ್ಷಮಿಸಿ) ರೊಂದಿಗಿನ ಸಂಜೆಯಲ್ಲಿ ರಂಗೇರಿ ಚರ್ಚೆ ನಡೆಯುತ್ತಿದ್ದಾಗ ಡಾ॥ ನಿರವಾನ್ನಿಯವರು ಮಂಡಿಸಿದ

ವಿಚಾರ 'ದ್ರೌಪದಿಯ ಮೇಲೆ ಕೃಷ್ಣನಿಗೆ ಮನಸ್ಸಿತ್ತು. ಹಾಗಾದಿಯೇ ಸದಾ ಅವಳು ಆಪತ್ತಿನಲ್ಲಿದ್ದಾಗ ಸಹಾಯ ಮಾಡಲು ಸಮೀಪದಲ್ಲೆ ಇಂದಿನ ಸಿನೆಮಾಗಳ ಹೀರೋಗಳಂತೆ ಪ್ರತ್ಯಕ್ಷವಾಗುತ್ತಿದ್ದ" ಎಂಬ ಮಾತುಗಳು ಆ ಹೊತ್ತಿನಲ್ಲಂತು ನನಗೆ ಸರಿ ಅನ್ನಿಸಿತ್ತು. ಆದರೆ ಈಗ ಯೋಚಿಸುತ್ತಿರುವೆ. ನೀವು ಬೇಕಾದರೂ ಯೋಚಿಸಿ, ಇದ್ದರೂ ಇದ್ದಿರಬಹುದೆಂದು ನಿಮಗನಿಸಿದರೆ ನನ್ನದೇನೂ ಅಭ್ಯಂತರವಿಲ್ಲ.

ನಾಲ್ಕುದಿನ ನಡೆದ ಈ ಕಮ್ಮಟದಲ್ಲಿ ಕರ್ನಾಟಕ ಸಾಹಿತ್ಯ ಅಕಾದೆಮಿಯ ಕೃಪೆಯಿಂದ ಹತ್ತಾರು ಗೆಳೆಯರನ್ನು ಕಂಡೆ, ಪ್ರೀತಿ-ಸ್ನೇಹ ಬೆಳೆಸಿದೆ. ಅಕಾದೆಮಿ ಸದಸ್ಯರಾದ ಹಿರಿಯಗೆಳೆಯ ಶ್ರೀ ಬಳ್ಳಾರಿಯವರು ಕೊಪ್ಪಳಕ್ಕೆ ಬನ್ನಿ ಮಾರಾಯರೆ,ಎಂದು ತಿಳಿಸಿ ಅಲ್ಲಿಯ ಸಿದ್ಧತೆಯಲ್ಲಿ ತೊಡಗಿದವರೆಲ್ಲರ ಕುರಿತು ಆಗಾಗ ತಿಳಿಸಿದ್ದು ನೆನಪಿನಲ್ಲಿ ಉಳಿದಿದೆ. ಈ ಮಧ್ಯೆ "ಹೊಸದಿಕ್ಕು"ಗಾಗಿ ಒಂದು ಕವಿಗೋಷ್ಠಿ ನಡೆದಿದೆ. ಅಲ್ಲಿಯ ಕನ್ನೆಯರ ಕುರಿತ ಶೇಖರ ಕತ್ತಿಗೆಯ ಕವನ ಒಂದು ಈ ಸಂಚಿಕೆಯಲ್ಲಿದೆ. ನಿಮಗೆ ಕೆಲವರಿಗಾದರೂ ಅದು ಖುಷಿ ಕೊಟ್ಟೀತೆಂದು ಪ್ರಕಟಿಸಿರುವೆ.

** ** **

ಪತ್ರಿಕೆಗೆ ಸದಸ್ಯರಾದಿ ಲೇಖನ, ಕವನ, ಇತ್ಯಾದಿ ಕಳಿಸಿರಿ.
ಸುಂದರವಾಗಿ ಬರೆದು ಅಥವಾ ಟೈಪ ಮಾಡಿ ಕಳಿಸಲು ಕೋರಿ ಮುಗಿಸುತ್ತೆನೆ.

— ಹೊನ್ಕಲ್

○○

ಕನ್ನಡ ಸಾಹಿತ್ಯಕ್ಕೆ ಕಲಬುರ್ಗಿ ಜಿಲ್ಲೆಯ ಕೊಡುಗೆ

[ಹಿಂದಿನ ಸಂಚಿಕೆಯಿಂದ]

ಡಾ॥ ಮಲ್ಲಿಕಾ ಘಂಟಿ

ಗಾಂಧಿ, ಗಾಂಧಿವಾದದ ಬಗ್ಗೆ ಇನ್ನೂ ವ್ಯಾಮೋಹ ಉಳಿಸಿಕೊಂಡು ಬಂದವರು. ಭಾರತದ ನೆಲಜಲದ ಬಗ್ಗೆ, ಧರ್ಮ ಕರ್ಮದ ಬಗ್ಗೆ ಸನಾತನ ಕಣ್ಣಾದರೂ ಹೊಸ ದೃಷ್ಟಿಯಿಂದ ನೋಡಿದವರು. ಚಳುವಳಿಯ ಪಂಥಗಳಲ್ಲಿ ಸೇರಿಕೊಳ್ಳದಿದ್ದರೂ ಅದರ ಸಾರ ಹೀರಿ ಕೊಂಡವರು. ಭಾವ ದೀಪ್ತಿಯನ್ನು ಬೆಳಗಿಸಿಕೊಂಡು, "ಹೊಸ ಹೆಜ್ಜೆ" ಇಡುತ್ತ ಗಾಂಧಾರಿಯ ಕರುಣೆಯ ಪೂರೆ ಹರಿಯುವವರೆಗೂ ಕಾವ್ಯದ ಹೆಜ್ಜೆಗಳನಿಟ್ಟವರು. ಗಾಂಧಿವಾದಿಗಳಾಗಿದ್ದರೂ, ಗಾಂಧಿ ಕಾಲದ ಹಳಹಳಿಕೆಯನ್ನು ಬಿಡದ ಕವಿಮನಸ್ಸು ಇವತ್ತಿನ ದ್ವಂದ್ವ ನೀತಿಯನ್ನು ರಾಷ್ಟ್ರೀಯ ಮುಖಂಡರ ಹೆಸರುಗಳನ್ನು–

ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ತತ್ವರಹಿತ ರಾಜಕೀಯ, ಸಾಮಾಜಿಕ ಜೀವನದ ಬಗ್ಗೆ ಚಿಂತನ ಪರತೆಯನ್ನು ಆದರ್ಶದ ತೆಕ್ಕೆಯಲ್ಲಿಟ್ಟುಕೊಂಡು ವಾಸ್ತವವನ್ನು ಬಿಚ್ಚಿ ಬಿಚ್ಚಿ ನೋಡಲು ಪ್ರಯತ್ನಿಸಿದವರು - ಗಾಂಧಿ ಸ್ಮೃತಿಯಲ್ಲಿ ಕವಿ

" ನಿನ್ನ ಕಳೆದುಕೊಂಡು ನಿನ್ನ ಹೆಸರಿಗಷ್ಟೇ ಜೋತು ಬಿದ್ದಿದ್ದೇವೆ " ಎನ್ನುವಲ್ಲಿ ಮೇಲಿನ ಅಂಶಗಳನ್ನು ಗಮನಿಸಬಹುದು. ಇಂದು ಗಾಂಧಿ, ಬುದ್ಧ ಬಸವರ ಹೆಸರುಗಳು ಹೆಂಡದ ಅಂಗಡಿಯ ಮೇಲೆ ವಿಜೃಂಭಿಸುತ್ತಿವೆ. ಕಾಲದ ವ್ಯಕ್ತಿಯ ತತ್ವಗಳೆಲ್ಲಾ ಇಂದು ಸ್ವಾರ್ಥದ ಸಬರಿಕೆಯಿಂದ ಗುಡಿಸಲ್ಪಡುತ್ತಿರುವುದು ಸಾಮಾಜಿಕ ದುರಂತಗಳನ್ನು ಸೂಚಿಸುತ್ತದೆ.

" ಕಣ್ಣಿದ್ದ ಇವಳು
ತನ್ನ ಕಣ್ಣುಗಳನ್ನೇ ಬಳಸಿದ್ದರೆ
ಕುರುಭೂಮಿಯಲ್ಲಿ
ತೀವ್ರವೇ ಘಸ್ಪಿಏಡ ದೊರೆತು
ಭಾರತ ಮಹಾಭಾರತವಾಗದೆ
ಸಮೃದ್ಧ ಭಾರತವಾಗುತ್ತಿತ್ತೇನೊ ! "   1

ಪುರಾಣ ಪರಂಪರೆಯ ಭಾರತೀಯರು ವೈಚಾರಿಕತೆಗಿಂತಲೂ ಅಂಧ ಶ್ರದ್ಧೆಗೆ, ವೈಜ್ಞಾನಿಕತೆಗಿಂತಲೂ ಮೂಢ ನಂಬಿಕೆಗಳಿಗೆ ವಾಸ್ತವತೆಗಿಂತಲೂ ಕನಸಿನ, ಭಾವನಾತ್ಮಕತೆಗೆ ಹೆಚ್ಚು ಒತ್ತು ಕೊಟ್ಟಿರುವ ಕಾರಣವೇ ಈ ನೆಲದಲ್ಲಿ ನಡೆಯಬಾರದೆಲ್ಲ ನಡೆದಿವೆ ಎಂಬುದನ್ನು ಆಧುನಿಕ ಕವಿಗಳು ಕಳವಳಗೊಂಡು ಹೇಳಿದ್ದನ್ನು ಗಮನಿಸಬಹುದು. 'ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ' ಎಂದು ಸೌಜನ್ಯದ ನುಡಿಮುತ್ತನ್ನು ಈ ನೆಲದಲ್ಲಿ ಎದುರಿಸಿದ ಬಸವಣ್ಣನಂಥವರ ವ್ಯಕ್ತಿತ್ವ. ಸೌಜನ್ಯತೆಯನ್ನು ಅದರ ಒಳತೋಟಿಯನ್ನು ಅರಿಯದೆ ಇಂದು ಬರೀ ಆರಾಧಿಸುವುದು ಎಲ್ಲೆಡೆಯಲ್ಲಿಯೂ ಕಂಡು ಬರುತ್ತಿದೆ. ಇಂತಹ ವಸ್ತು ಸಂಗತಿಗಳು ಕವಿಯ ಕಕ್ಷೆಯಲ್ಲಿ ಬರದೇ ಹೋಗಲು ಸಾಧ್ಯವೆ ?

" ಕಿಂಚಿತ್ ಮಾನ ಸನ್ಮಾನಗಳು
ಬಳಸಿರಲು ನಿನ್ನನ್ನು
ನೀನಾಗಬೇಕೆ ಹುಚ್ಚು ಖೋಡಿ "   2

ಪ್ರಾದೇಶಿಕ ಭಾಷೆಯ ಸೊಗಡು. ವ್ಯಂಗ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವ ವಿಧಾನ ಇವರ ಕಾವ್ಯದ ವೈಶಿಷ್ಟ್ಯವೆನ್ನಬಹುದು.

ದಲಿತ ಬಂಡಾಯದ ಸಂದರ್ಭದಲ್ಲಿಯೇ ನವ್ಯದ ಪ್ರಯೋಗಾತ್ಮಕಗುಣ ಉಳಿಸಿಕೊಂಡು ಬಂದ ಆತ್ಮ ರತಿಗಳು ಇಂದಿಗೂ ಕನ್ನಡ ಕಾವ್ಯ ಕ್ಷೇತ್ರದಲ್ಲುಂಟು. ನವ್ಯ ಕಾವ್ಯದ ಅಭಿವ್ಯಕ್ತಿಯು ಜಟಿಲವಾದ ತಂತ್ರ ಕೌಶಲ್ಯವನ್ನು ವ್ಯೈಗೂಡಿಸಿಕೊಂಡು ಹೋಗುವಲ್ಲಿ ಸೋತ ಕವಿಗಳು ಅವರ ಆಸೆ ಬಿಡದೆ ತ್ರಿವಿಕ್ರಮನಂತೆ ಮರು ಪ್ರಯತ್ನ ಮಾಡುತ್ತಲೆ ಇದ್ದಾರೆ. ಆತ್ಮರತಿ, ಅಂತರಮುಖತೆ, ವ್ಯಕ್ತಿಗತ ಕಕ್ಷೆ

ಯಲ್ಲಿಯೇ ಗಿರಕಿ ಹೊಡೆಯುವ ಪ್ರಯೋಗಶೀಲ ಮನಸ್ಸು ಸಮಾಜಮುಖಿಯಾಗದೆ, ಸಮೂಹ, ಸಾಂಘಿಕ ಜೀವನವನ್ನು ಬಿಚ್ಚುಗಣ್ಣಿನಿಂದ ನೋಡಬಯಸದ ಮನಸ್ಸು ವರ್ತಮಾನದ ಸಂದರ್ಭದಲ್ಲಿಯೂ ಭೂತದಲ್ಲಿ ಹೂತ ಭವಿಷ್ಯತ್ತಿನ ಬಗ್ಗೆ ಲೊಚಗುಟ್ಟುತ್ತಿರುತ್ತದೆ. ಇದು ನವ್ಯದ ಬಾಲಕ್ಕೆ ಹಾತೊರೆಯುವವರ ಇಂದಿನವರ ಪಾಡು. ಶಿವಶರಣ ಜಾವಳಿಯವರು ಈ ಜಾಡಿನಲ್ಲಿರುವವರು.

ಇಂದು ಕಥಕಥ ಕುದಿಯುತ್ತಿರುವ ಸಾಮಾಜಿಕ, ಸಾಹಿತ್ಯಿಕ ವಾತಾವರಣದಲ್ಲಿಯೂ ಇವರು ಪ್ರಯೋಗಶೀಲತೆಗಾಗಿ ಹಾತೊರೆಯುತ್ತಿರುವುದನ್ನು ಗಮನಿಸಬಹುದು. ಸುಮಾರು ಏಳು ಕವನ ಸಂಕಲನವನ್ನು ಹೊರ ತಂದಿರುವ ಜಾವಳಿಯವರ ಕಾವ್ಯ ನವ್ಯದ ಬಾಲಕ್ಕೆ ಹಾತೊರೆಯುವ ಆತ್ಮರತಿಯನ್ನು ಉಳಿಸಿಕೊಂಡಿದೆ.

" ಸುಸ್ವಾಗತ ಸುಸ್ವಾಗತ
ಇಷ್ಟಗಲ ತೆರೆದ ಬಾಯಿ
ಕೈ ಕಾಲಿಗೆ
ಅರ್ಘ್ಯಪಾದ್ಯ
ವಿಶ್ರಾಂತಿಗೆ
ಜಗುಲಿಯ ಮೇಲೆ ಹಾಸಿರುವ ವೇತ್ರಾಸನ " 3

ಜಾವಳಿಯವರು ನವ್ಯಕಾವ್ಯದ ಸ್ವರೂಪವನ್ನು ಗಟ್ಟಿಯಾಗಿ ಹಿಡಿದುಕೊಂಡಷ್ಟಕ್ಕೆ ತೃಪ್ತರಾಗದೆ ಭಾಷೆಯ ಕಸುವಿಗೆ ಮೂರ್ತಿ ಚಮತ್ಕಾರಗಳನ್ನು ಪ್ರತಿಮಾ ವಿಧಾನದಲ್ಲಿ ತಂದಿಡುವಲ್ಲಿ ಆಸಕ್ತರು.

ಇತ್ತೀಚಿನ ದಿನಗಳಲ್ಲಿ ಅತ್ಯಂತ ಜನಪ್ರಿಯವಾಗುತ್ತಿರುವ ಮತ್ತು ಪತ್ರಿಕೆಗಳಲ್ಲಿ ಸಿಕ್ಕಷ್ಟು ಜಾಗದಲ್ಲಿ ಕಾಲು ಚಾಚಿ ಓದುಗನ ಕಣ್ಣಿಗೆ ರಾಚುತ್ತಿರುವ ಚುಟುಕು ಪದ್ಯದ ತೊರೆ ಹೆದ್ದಾರಿಯಾಗಿ ಹರಿದು ಬರುತ್ತಿವೆ ಅದರಲ್ಲಿಯೂ ಜಾವಳಿಯವರು ಕೈಯಿಟ್ಟು "ಕಾಮಧೇನುವಿನ ಧಾರೆಗಳು" ಹರಿಸಿದ್ದಾರೆ.

" ಕಾಮಧೇನು
ಮನೆಯಲ್ಲಿ ಈ ಹೆಣ್ಣು
ಕಾಮಧೇನು,
ಹಗಲಿರುಳು ಕರೆಯುವುದು
ಹಾಲು ಜೇನು " 4

ಹೀಗೆ ಬರೆಯುತ್ತಿರುವ ಕವಿಗೆ ಕನ್ನಡ ಸಾಹಿತ್ಯದ. ಕಾವ್ಯದ ಸಂದರ್ಭದಲ್ಲುಂಟಾದ ಸ್ಥಿತ್ಯಂತರಗಳಾಗಲಿ, ಯಾವುದೇ ಚಳುವಳಿಯ ಸೈದ್ಧಾಂತಿಕತೆ ಸ್ಥಾಯಿಯಾಗದಂತೆ ಹೋಗಿದ್ದರೂ, ಪ್ರಾಥಮಿಕ ಕಾಳಜಿ, ಒಲವು ಇರದೇ ಹೋಗಿರುವುದರಿಂದಲೇ ಇವರು ಹತ್ತರ ಕೂಡ ಹನ್ನೊಂದಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಹಿಂದೂ ಹೆಣ್ಣುಮಕ್ಕಳು ಸಹ ಮುಸ್ಲಿಂ ಮಹಿಳೆಯರ ಹಾಗೆ ಬುರಕಾ ಹಾಕಿಕೊಳ್ಳುವುದು ತಮ್ಮ ಸಂಸ್ಕೃತಿ ಎನ್ನುವಂತಹ ಪರಿಸರದಲ್ಲಿ ಮಹಿಳೆಯರು ಓದುವುದು, ಬರೆಯುವುದು ಮಹಾ ಅಪರಾಧ. ಅಂಥಲ್ಲಿ ಶೈಲಜಾ ಉಡಚಣ ರಂಥವರು ಕರ್ನಾಟಕದ ಕವಿತ್ರಿಯರ ಸಾಲಿನಲ್ಲಿ ನಿಲ್ಲುವಂತವರು. "ಕಾದು ನೋಡು" "ಸೊಕ್ಕಿದ ಸೂರ್ಯ ಕಪ್ಪು ನೆಲ" "ಒಂದು ಗಳಿಗೆ", "ಸ್ವಗತ" ಸಂಕಲನ ತಂದಿದ್ದಾರೆ.

ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಎಲ್ಲ ಮಹಿಳೆಯರು ಉಸಿರುಗಟ್ಟಿ ದಿನ ಕಳೆಯುತ್ತಿರುವಾಗ ಕವಿತ್ರಿಯರು ಇದರಿಂದ ಹೊರಗುಳಿದು ಬರೆಯಲು-ಬದುಕಲು ಹೇಗೆ ಸಾಧ್ಯ? ಪರಂಪರೆಯನ್ನು ಪ್ರಶ್ನಿಸುತ್ತ, ಮೀರುತ್ತ ಹೊಸ ಪರಂಪರೆಯ ಹರಿಕಾರರ ಜೊತೆಯಲ್ಲಿ ಸಮ ಸಮ ಹೆಜ್ಜೆ ಹಾಕುವ ಕಾಲವಿಲ್ಲದ ಗಳಿಗೆಯಲ್ಲಿ ಸಾಹಿತ್ಯ ಲೋಕ ಪ್ರವೇಶ ಮಾಡಿದ ಬಹುಪಾಲು ಮಹಿಳೆಯರಿಗೆ ಸಂಸ್ಕೃತಿಯ ಭವ್ಯ-ದಿವ್ಯದ ಸೋಗಿನಲ್ಲಿಯ ಹಡಬೇತನವನ್ನು ಬಿಚ್ಚಿ ನೋಡುವುದು ಸಾಧ್ಯವಾಗದೆ ಹೋಗಿರುವ ಕಾರಣ. ಹೆಂಡತಿಯನ್ನು ಕಾಡಿಗಟ್ಟಿದ ರಾಮನ ಬಗ್ಗೆ ಸಿಡಿಯು ಬೇಕಾದವರೆ, ರಾಮಭಕ್ತರಾಗುತ್ತಾರೆ. ಹೆಂಡತಿಯನ್ನು ಮಾರಿದ ಗಂಡ ಧರ್ಮರಾಯನ ಬಗ್ಗೆ ಬಂಡೇಳಬೇಕಾದವರು, ಧರ್ಮರಾಯನ ಧರ್ಮ ಪರಿಪಾಲನೆಯನ್ನು ವೈಭವೀಕರಿಸುತ್ತ ಧರ್ಮ ಪರಿಪಾಲಕನೆನ್ನುತ್ತಾರೆ. ಈ ದ್ವಂದ್ವವನ್ನು ಸಂಪೂರ್ಣವಾಗಿ ಮೀರುವ ಸಾಮರ್ಥ್ಯ ನಮ್ಮ ಪ್ರಾರಂಭದ ಲೇಖಕಿಯರಲ್ಲಿ ಕಾಣದೇ ಹೋದರೂ ನಂತರದ ದಿನಗಳಲ್ಲಿ ಅಲ್ಲಷ್ಟು ಇಲ್ಲಷ್ಟು ಕಾಣಿಸಿಕೊಳ್ಳುತ್ತಿರುವುದೇ ಬದಲಾವಣೆಯನ್ನು ಸೂಚಿಸುತ್ತದೆ.

"ನಿನ್ನ ಬಿಡುಗಡೆಗಾಗಿ ನೀನು
ದಿನ ರಾತ್ರಿ ಕುಡಿಯುವ ಕಷಾಯಿ
ನೀನು ಬಿಟ್ಟ ಲೆಟ್ಟಗಳೇ ಅಧಿಕವಾಗಿ
ಲೆಖ್ಖದಲ್ಲಿ ನಾನಿಲ್ಲ ಎಂಬ ಪರಕೀಯತೆ" 5

ಇಂತಹ ಪರಕೀಯತೆ,ಅನಾಥತೆ, ಅಸಹಾಯಕತೆಗಳೆಲ್ಲ ಮಹಿಳೆಯರ ಸ್ಥಿರಾಸ್ತಿ, ಸ್ಫೋಟಿಸುವ ಗುಣಕ್ಕೆ ತಾಳ್ಮೆಯು ಕಡಿವಾಣ ಹಾಕಿದ ಸಮಾಜದಲ್ಲಿ ಒಂದಲ್ಲ ಒಂದು ದಿನ ಸ್ಫೋಟಿಸುತ್ತೇನೆ ಎನ್ನುವುದೆ ಹೊಸ ಬದುಕಿನ ಆಶಾಕಿರಣ ಈ ರೀತಿಯಾಗಿದೆ.

> "ನಾನು ಕುದಿಯಬೇಕು ಕಾಯಬೇಕು
> ಸಹನೆಯ ಕಟ್ಟೆ ಕಟ್ಟಿ ಆಣೆಕಟ್ಟು ಎತ್ತರಿಸಿದ್ದು ಏರುತ್ತ
> ಏರುತ್ತ ಮುಗಿಲು ಮುಟ್ಟಬೇಕು
> ಸೂರ್ಯನನ್ನು ಹಿಮ್ಮೆಟ್ಟಬೇಕು" 6

ಈ ತಲೆಮಾರಿನಲ್ಲಿ ಸರಿಸುಮಾರಾಗಿ ಕಾವ್ಯ ಕ್ಷೇತ್ರಕ್ಕೆ ಕಾಲಿಟ್ಟರುವ ಸ್ನೇಹ ಸೂಕ್ತಿ; ಹೇಮಂತ "ಅಮೃತ ಬಿಂದುವಿನ" ಇಂದರೇಶ ಕ್ಷಿತಿಜ ಕೋದಂಡದ ಇಟಗಿ ರಾಘವೇಂದ್ರ, ಶುಭೋದಯದ" ಎಚ್ ಜಿ. ಉಪಾಧ್ಯಾಯರು, ಚಿನ್ಮಯಿಯ ದೇವಿಂದ್ರಕುಮಾರ ಹಕಾರಿಯವರು ನೆನಪಿನಲ್ಲುಳಿಯುವಂಥವರು.

ಸುಮಾರು ೨೦ ರ ದಶಕದ ವರೆಗೂ ಇಲ್ಲಿ ಪರಂಪರೆಯು ಹರಿಕಾರರಾಗಲಿ, ಚಳುವಳಿಯ ನೇತಾರರಾಗಲಿ ಈ ನೆಲದಲ್ಲಿ ಹುಟ್ಟಿ ಗಮನ ಸೆಳೆಯದೆ ಹೋದ ಕಾಲವಾದರೆ ನಂತರದ ದಶಕವಲ್ಲಿ ದಲಿತ ಬಂಡಾಯದ ಗುಟುರು ಹೊರಡಿಸಿದ ದೈತ್ಯ ಶಕ್ತಿಯ ಚೆನ್ನಣ್ಣ ಈ ನೆಲದ ಸೊಗಡು, ಸತ್ವವನ್ನೆಲ್ಲಾ ಎತ್ತಿ ಕುಡಿದವರು "ನಮ್ಮ ಗ್ರಹಿಕೆ ಮತ್ತು ಅನುಭವಗಳು ಗಂಟಲಿನ ಗುಟುರಾಗುವದಕ್ಕೆ ಮುಂಚೆ ತಿರಗುತ್ತ, ಕೊರಗುತ್ತ, ಸಪ್ತಸ್ವರದಲ್ಲಿ ಸಂಯೋಜಿತವಾಗಬೇಕು; ಆ ಮೇಲೆ ಅದು ಸ್ವರವಾಗಿ ಸ್ಫೋಟಗೊಳ್ಳಬೇಕು."7 ಎನ್ನುವ ಅಭಿವ್ಯಕ್ತಿಯು ವ್ಯವಧಾನವಿಲ್ಲದೆ ಹೋಗಿರುವ ಕಾರಣ ಈ ಪರಂಪರೆಯಲ್ಲಿ ಹೆಚ್ಚು ಗುಟುರು ಕಂಡು ಬಂದಿದೆ.

ಬಂಡಾಯದ ಬಗ್ಗೆ ಮೂಗುಮುರಿಯುವವರು, ಬಂಡಾಯ ಕಾವ್ಯದ ಬಗ್ಗೆ ಹಗುರವಾಗಿ ಮಾತನಾಡುವ ಮಡಿವಂತ ಮನಸ್ಸಿಗೆ ಬಂಡಾಯ ಕಾವ್ಯದ ಆಕ್ರೋಶ, ಅಬ್ಬರವಷ್ಟೇ ಕೇಳಿವೆ ಆದರೆ ಒಟ್ಟು ಬಂಡಾಯದ ಅಂತರಗತ ಆಶಯವನ್ನು ಹೇಳುವದಾದರೆ "ಬಂಡಾಯ ಕಾವ್ಯ ಕೇವಲ ಮೆರವಣಿಗೆಯ ಮಾತಲ್ಲ ಆಬ್ಬರದ ಮೆರೆವಣಿಗೆಯ ಮಧ್ಯೆ ಮಿಡಿಯುವ ಮನಸ್ಸಿನ ಮಾತು, ಬಂಡಾಯ ಕಾವ್ಯವೆಂದರೆ ಕೇವಲ ಸಿಟ್ಟಿನ ಸ್ಫೋಟವಲ್ಲ, ಸಂಕಟ-ಸಿಟ್ಟುಗಳೊಂದಾಗಿ

ಸ್ಫೋಟಗೊಳ್ಳುವ ಮಾನವೀಯ ಮಿಡಿತ; ಬಂಡಾಯ ಕಾವ್ಯವೆಂದರೆ ಸಮಾಜ ಬದಲಾವಣೆಗಾಗಿ ಕರೆಕೊಡುವ ಒಂದು ಭಾಷಣವಲ್ಲ; ಬದಲಾವಣೆಯ ಪ್ರಕ್ರಿಯೆಯನ್ನು ಹಿನ್ನೋಟ-ಮುನ್ನೋಟಗಳುಳ್ಳ ಒಳನೋಟದ ಉರಿಯಲ್ಲಿ ಬೇಯಿಸುತ್ತ ಬಹಿರಂಗಗೊಳ್ಳುವ ಭಾಷೆ" 8 ಈ ಭಾಷೆ ಸಂಸ್ಕೃತ ಜನ್ಯವಾಗಿರುವುದಿಲ್ಲ, ಜನವಿರೋಧಿಯಾಗಿರುವುದಿಲ್ಲ, ಪ್ರತಿಗಾಮಿಯಾಗಿರುವುದಿಲ್ಲ; ಸ್ತ್ರೀ ವಿರೋಧಿಯಾಗಿರುವುದಿಲ್ಲ, ತನ್ನನ್ನೊಳಗೊಂಡು ಎಲ್ಲ ದಂಡಿಯುಂವರ್ಗ ಶೋಷಿತರ ದಮನಕೊಳ್ಳಗಾದವರ ಭಾಷೆಯಾಗುತ್ತದೆ., ಧ್ವನಿಯಾಗುತ್ತದೆ.

"ಕರಿತಲಿ ಮಾನವನ ಜೀವದ"ದ ಮೂಲಕ ಗಮನ ಸೆಳೆವ ಚೆನ್ನಣ್ಣವಾಲೀಕಾರ ಅವರ "ಹಾಡಕ್ಕಿ ಹಾಗೂ ಇತರ ಪದಗಳು, "ಪ್ಯಾಂಥರ್ ಪದ್ಯಗಳು; ಬಂಡೆದ್ದ ದಲಿತರ ಹಾಡು ಬೀದಿ ಹಾಡುಗಳು ಧಿಕ್ಕಾರದ ಹಾಡುಗಳು; ಕಗ್ಗತ್ತಲೆ ಖಂಡದ ಹಾಡುಗಳು:-ಸಂಕಲನದ ಮೂಲಕ ಕನ್ನಡ ಕಾವ್ಯಕ್ಕೆ ಸಮಗ್ರ ಕಲಬುರ್ಗಿ ಅಷ್ಟೇ ಅಲ್ಲ ಹೈದರಾಬಾದ ಕರ್ನಾಟಕವನ್ನೇ ಪರಿಚಯಿಸಿದ್ದಾರೆ.

ಕೆಳಜಾತಿ, ಕೆಳವರ್ಗದ ಬಿಸಿಯನ್ನೆಲ್ಲ ಕಂಡುಂಡ ಕವಿಗೆ ಜನಪದ ಭಾಷೆ ಕಾವ್ಯಕ್ಕೆ ಬೇಕಾಗಿದೆ. ಸಮಕಾಲೀನ ಸಮಸ್ಯೆಗಳನ್ನು ಜನಪದ ಮಟ್ಟುಗಳಲ್ಲಿ ಅಭಿವ್ಯಕ್ತಿಸುವ ರೀತಿ ಹೊಸಗನ್ನಡ ಕಾವ್ಯ ಸತ್ವಕ್ಕೆ ದಕ್ಕಿದ ಇತ್ತೀಚಿನ ಕೂಸು. ತ್ರಿಪದಿ. ಬಯಲಾಟದ ಪದಗಳು, ಡಪ್ಪಿನಾಟದ, ಪದಗಳು ಲಾವಣಿ, ಗೀಗಿಪದ ಕೋಲಿನ ಪದ-ಹೀಗೆ ವಿವಿಧ ಜಾನಪದ ಛಂದಸ್ಸಿನ ಮಟ್ಟುಗಳನ್ನು ಸಮರ್ಥವಾಗಿ ಬಳಸಿ ಸಮಕಾಲೀನ ಶಿಷ್ಟಕಾವ್ಯವನ್ನು ಜನಪದರ ಬಳಿಗೆ ಕೊಂಡೊಯ್ದು ಸಾಮಾಜಿಕ ಚಿಂತನೆಗೆ ತೊಡಗಿಸಿದ್ದಾರೆ.

ಜಮೀನ್ದಾರಿಕೆಯ ಮುಂದ್ದು ಮರಿಗಳಾದ ಕ್ರೌರ್ಯ, ಹಿಂಸೆ, ಅತ್ಯಾಚಾರ, ಅನ್ಯಾಯಗಳನ್ನೆಲ್ಲಾ ಮುಖಾಮುಖಿಯಾಗಿ ಎದುರಿಸಿದ್ದು ದಲಿತ-ಬಂಡಾಯದ ಸಂದರ್ಭದಲ್ಲಿ.

"ಕುಂತ ಸಭೆದಾಗ ಕೈಜೋಡ್ಸಿ ಹೇಳ್ತಿನಿ
ಕರಿತಲಿ ಮಾನವನ ಕಥಿಸಾರ್ಯ' ಗ 9

ಎನ್ನುತ್ತಲೆ ಗೌಡ, ಪಾಟೀಲ ಕುಲಕರ್ಣಿ, ಜಮೀನ್ದಾರಿಕೆಯ ಅಸ್ತಂಗತ ಬದುಕಿನ ಪಳಿಯುಳಿಕೆಯ ಬಗ್ಗೆ ಜನಪದರಿಗೆ ತಿಳಿಯುವ ಹಾಗೆ ಹೇಳುವಲ್ಲಿ

ನಿಜವಾದ ಜನಪರ ಕಾವ್ಯದ ಕಾಳಜಿ ಕಂಡು ಬರುತ್ತದೆ ಹುಸಿ ಸಂಸ್ಕೃತಿಯು ಸೋಗಲಾಡಿತನವನ್ನೆಲ್ಲಾ ಇಂದು ಬಿಚ್ಚಿತೋರಿಸಬೇಕಾಗಿದೆ. ಆ ಸಂಸ್ಕೃತಿಯಿಂದ ಹೊರತರಬೇಕಾಗಿದೆ.

"ನೀ ಹೋದ ಮರುದಿನ ಮೊದಲಂಗ ನಮ ಬದುಕು
ಆಗ್ಯಾದೂ ಬಾಬಾಸಾಹೇಬs
ನಿನ್ನಂಗ ದುಡಿದವರು ಕಳಕಳಿಯು ಪಡುವವರು
ಇನ್ನುತನ ಬರಲಿಲ್ಲ ಒಬ್ಬs" 10

ಕಾಲಾಂತರದಲ್ಲಿ ದಲಿತರ ಸ್ಥಿತಿಗತಿಗಳು ಹಾಗೇ ಮುಂದುವರೆದದ್ದು ವಿಷಾದ ನೀಯು ಆದರೆ ಪಟ್ಟಭದ್ರ ಹಿತಾಸಕ್ತಿಗಳು ನಿರಂತರವಾಗಿ ಇತಿಹಾಸ ಚಕ್ರವನ್ನು ಹಿಮ್ಮುಖವಾಗಿಯೇ ತಿರುಗಿಸುತ್ತಿರುತ್ತವೆ ಅದನ್ನೂ ಅರ್ಥೈಸಿಕೊಳ್ಳದೆ ಹೋದರೆ ನಮ್ಮ ಚಳುವಳಿಗಳು, ಸಿದ್ಧಾಂತಗಳು ಅಪ್ಪರ ಮಟ್ಟಿಗೆ ನೆಲಕಚ್ಚುತ್ತವೆ ವಿಷಾದದ ಹಿಂದಿರುವ ಆಶಾವಾದವನ್ನೇ ಮುಂದಿಟ್ಟುಕೊಂಡು ನಡೆಯಬೇಕಾಗಿದೆ.

"ಯಾವ ಅಕ್ಷರದಿಂದ ಬರೆದು ತೋರಿಸಲಯ್ಯ
ನನ್ನ ಜನಗಳಿಗಾದ ಎದೆಯು ಬ್ಯಾನಿ
ಲೂಟಿಗಾರರೆ ಇಲ್ಲ ಲೀಡರ ಆಗುವ ಹೊತ್ತು"

ಎನ್ನುವಲ್ಲಿ ಸಮಾಜದ ಕ್ರೌರ್ಯ, ಭ್ರಷ್ಟತೆ ಹೊಳಪುಗೊಂಡಿರುವುದು. ಸ್ಪಷ್ಟವಾಗಿ ಧ್ವನಿಸಿದೆ ಇದಕ್ಕಿಂತಲೂ ಭಿನ್ನವಾಗಿ ಹೇಳಿದರೆ ದುಡಿಯುವ ಜನರು ಎದೆಯು ಮಿಡಿತ ಕೇಳಿ ಹೃದಯು ಭೇದಿಸಿತೆ? ಚೆನ್ನಣ್ಣವಾಲಿಕಾರ ದಲಿತ ಬಂಡಾ ಯಡ ಮುಂಚೂಣಿಯಲ್ಲಿ ದೈತ್ಯ ಶಕ್ತಿಯಃ ಜನಪದ ಭಾಷೆ ಭಾವನೆಯು ಕವಿ

ಈ ದಶಕದಲ್ಲಿ ಬಂಡಾಯದ ಅಂತರಗತ ಜಲ ಎಲ್ಲರಲ್ಲಿಯೂ ಸೆಲೆಯೊಡೆದ ಕಾರಣ ಬೇರೆ ಬೇರೆ ನೆಲೆಯಿಂದ ಬಂದವರು ಒಟ್ಟು ಅಸಮಾನ ನೆಲೆಯು ಮೇಲಿರುವ ಸಮಾಜದ ಬಗ್ಗೆ ಪ್ರತಿಭಟಿಸಿದ್ದಾರೆ. ಅಸಮಾಧಾನ ವ್ಯಕ್ತಗೊಳಿಸಿದ್ದಾರೆ ಬಂಡೇಳಲು ಪ್ರಯತ್ನಿಸಿದ್ದಾರೆ. ಸ್ಫೋಟಿಸಲು ಸನ್ನದ್ಧರಾಗಿದ್ದಾರೆ. ಈ ಲೆಕ್ಕ ಕರ್ನಾಟಕ ವ್ಯಾಪ್ತಿಗೆ ಸೇರ್ಪಡೆಯಾಗದೆ ಹೋದರೂ ಕಲಬುರ್ಗಿಯ ಕಾವ್ಯ ಕ್ಷೇತ್ರದ ಜೀವಂತಿಕೆಗೆ ಸಾಕ್ಷಿಭೂತರಾಗಿದ್ದಾರೆ.

ಸಿದ್ಧರಾಮ ಹೊನ್ಕಲ್ ತಿಮ್ಮಯ್ಯ ಪುರ್ಲೆ ಎ. ಕೆ. ರಾಮೇಶ್ವರ, ಎಮ್. ಜಿ. ಬಿರಾದಾರ, ಮೋಹನ ಚಂದ ಕಿರಣಗಿ, ಕೆರಳ್ಳಿ ಗುರುನಾಥರೆಡ್ಡಿ, ಸಿದ್ಧರಾಮ ಉಪ್ಪಿನ, ಗೌತಮತಿಮ್ಮಾಪುರಿ, ಕಾಶಿನಾಥ ಅಂಬಲಗೆ, ಪ್ರಭುಖಾನಾಪುರೆ, ಸರಸ್ವತಿ ಚಿಮ್ಮಲಗಿ, ಪ್ರಭಾಕರ ಜೋಶಿ ಕರದಳ್ಳಿ, ರವೀಂದ್ರ ಕರ್ಜಗಿ, ಭಗವಂತಪ್ಪ ಬುಳ್ಳಾ, ಶಂಕರಯ್ಯ ಗಂಟಿ, ಸ್ವಾಮಿರಾವ ಕುಲಕರ್ಣಿ, ಸುಮನ ಯಜುರ್ವೇದಿ, ಹೀಗೆ ಕಲಬುರ್ಗಿ ಜಿಲ್ಲೆಯು ಹಿರಿಯ ಕಿರಿಯ ಕವಿಗಳ ದಂಡು ಬೆಳೆಯುತ್ತಲೇ ಇದೆ. ಈ ಮೇಲಿನವರು ಗಮನ ಸೆಳೆಯುತ್ತಿದ್ದಾರೆ. ಅಖಿಲ ಕರ್ನಾಟಕದ ಕವಿಗಳ ಸಮೂಹದಲ್ಲಿ ಕಲಬುರ್ಗಿ ಜಿಲ್ಲೆಯ ಕವಿಗಳು ಕೈ ಕೈ ಬೆರಳೆಣಿಕೆಯ ಮೇಲಿದ್ದರೂ ಮುಂದಿನವರಿಗೆ ನೆಲಹದ ಮಾಡುತ್ತಿದ್ದಾರೆ.

ನಾಟಕಗಳು : ಮೂಲತಃ ನಾಟಕಗಳು ದೃಶ್ಯಮಾಧ್ಯಮಕ್ಕೆ ಸಂಬಂಧ ಏರಿಸಿಕೊಂಡವುಗಳು ನಮ್ಮಲ್ಲಿ ಮುಖ್ಯವಾಗಿ ಸಾಹಿತ್ಯ ಪ್ರಯೋಗದ ರೂಪದಲ್ಲಿ ನಾಟಕ ಕಾಣಿಸಿಕೊಂಡಿದ್ದು ೧೯೨೦ ರಿಂದ ಈಚೆಗೆ ರಂಗ ಭೂಮಿಯ ತಂತ್ರಗಾಗಿ ಹೊಸ ನಾಟಕಗಳು ಬರದೆ ಸಾಹಿತ್ಯ ಪ್ರಕಾರವಾಗಿ ಗಮನ ಸೆಳೆದವುಗಳು ಮೊದ ಮೊದಲು ಕೈಲಾಸಂ, ಶ್ರೀರಂಗರು ರಂಗಭೂಮಿಯ ಬಗ್ಗೆ ತೀವ್ರವಾದ ಪ್ರತಿ ಕ್ರಿಯೆಯನ್ನು ನಾಟಕದ ಮೂಲಕವೇ ವ್ಯಕ್ತ ಪಡಿಸಿದರು. ರಂಗಭೂಮಿಯ ಅವಾಸ್ತವಿಕತೆಯನ್ನು ಆಡಂಬರದ ಹಂಚ್ಚನ್ನು ಟೀಕಿಸುತ್ತ ಕೈಲಾಸಂ, ಶ್ರೀರಂಗರು ಕಾಲಕಾಲಕ್ಕೆ ಉದ್ಭವಿಸುವ ರಂಗಭೂಮಿಯ ಸಮಸ್ಯೆಗಳನ್ನು ನಿರೂಪಿಸುವ ಚರ್ಚಿಸುವ ವಿಧಾನವನ್ನು ಬಳಸಿ ನಾಟಕ ರಚಿಸಿದವರು.

ಕನ್ನಡದಲ್ಲಿ ೧೯೨೦ ರಿಂದ ನಾಟಕ ಸಾಹಿತ್ಯ ಒಂದು ಗಂಭೀರ ಸಾಹಿತ್ಯ ಪ್ರಕಾರವಾಗಿ ಬೆಳೆಯುವುದರ ಜೊತೆಗೆ ರಂಗಭೂಮಿಯ ಹೊಸ ಹೊಸ ಸಾಧ್ಯತೆ ಗಳನ್ನು ತೋರಿಸಿಕೊಟ್ಟಿತ್ತು. ಮೈಸೂರಿನ ರಾಜಾಶ್ರಮದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡ ನಾಟಕ ರಾಣಿ ಶ್ರೀರಂಗ ಕೈಲಾಸಂರಿಂದ ಮಧ್ಯಮ ವರ್ಗದ ವಠಾರಕ್ಕೆ ಬಂದು ಕುಣಿಯ ತೊಡಗಿದಳು. ಅದರಲ್ಲಿಯೂ ಉತ್ತರ ಕರ್ನಾಟಕದ ಸಂಗ್ಯಾ-ಬಾಳ್ಯಾರನ್ನು ಕಂಡವಳು ಮಧ್ಯಮ ವರ್ಗದವರಿಂದ ಬಿಡಿಸಿಕೊಂಡು ಹಳ್ಳಿಯ ಹೈದರಿಗೆ ಮಾರು ಹೋದವಳು.

ನಾಟಕ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ತೀವ್ರಗತಿಯಲ್ಲಿ ಹೊಸ ಹೊಸ ಪ್ರಯೋಗಗಳು ನಡೆದು ಕರ್ನಾಟಕ ಪ್ರಾದೇಶಿಕತೆಯ ವೈಶಿಷ್ಟ್ಯವನ್ನೆಲ್ಲ ಮೈದುಂಬಿ ಕೊಂಡು ಬಂದಿರುವದನ್ನು ಹೊಸಗನ್ನಡ ನಾಟಕ ಸಾಹಿತ್ಯದಲ್ಲಿ ಸ್ಪಷ್ಟವಾಗಿ

ಗುರುತಿಸಬಹುದು ಆದರೆ ನಿಜಾಮನ ಮುಜಾರಾಯಿಯಲ್ಲಿನ್ನೂ ಮುಸುಕು ಹಾಕಿಕೊಂಡಿದ್ದ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ನಾಟಕ ಒಂದು ದಶಕದ ವರೆಗೂ ಹುಟ್ಟಲಿಲ್ಲ.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಪ್ರಗತಿಶೀಲದ ಸಂದರ್ಭದಲ್ಲಿ ನಾಟಕ. ಕಾವ್ಯ, ಮೈದುಂಬಿ ಹುಲುಸಾಗಿ ಬೆಳೆಯದೆ ಹೋಗಿದ್ದಕ್ಕೆ ಪರಂಪರೆಯ ನೇತೃತ್ವವಹಿಸುವ ಗಟ್ಟಿತನದ ಕೊರತೆ-ಕಾರಣ. ನಂತರ ನವ್ಯದ ಸಂದರ್ಭದಲ್ಲಿ ಅಬ್ಬರದಿಂದ ಹೊರಬಿದ್ದ ನಾಟಕ ಸಾಹಿತ್ಯ ರಂಗಭೂಮಿಯ ತಾಂತ್ರಿಕತೆಯಲ್ಲಿ ರಂಗನಿರ್ದೇಶಕರಿಗೆ ಹೊಸ ಹೊಸ ಸವಾಲುಗಳನ್ನು ಒಡ್ಡಿತು, ಕನ್ನಡ ಅಸಂಗತ ನಾಟಕಗಳು ಪಾಶ್ಚಾತ್ಯ ರಂಗ ಭೂಮಿಯನ್ನು ಅನುಕರಿಸಿದರೂ ಸಹ ಸಾಹಿತ್ಯದ ದೃಷ್ಟಿಯಿಂದ ಒಂದು ಹೊಸ ಪ್ರಯೋಗಶೀಲ ಮನೋಭಾವದ ಆವಿರ್ಭಾವವೆನ್ನಬಹುದು ಕನ್ನಡ ಸಾಹಿತ್ಯದ ಇಂತಹ ಚಳುವಳಿ ಪ್ರಭಾವ ಪ್ರೇರಣೆಗಳ ಮಧ್ಯದಲ್ಲಿ ಕಲಬುರ್ಗಿ ಅತ್ಯಂತ ನಿರ್ಲಿಪ್ತವಾಗಿತ್ತು.

ಸಿದ್ಧಯ್ಯ ಪುರಾಣಿಕ, ನಾ. ಭಾ. ಶಾಸ್ತ್ರಿಗಳು, ಶರಣ ಕವಿಗಳು, ಸಗರ ಕೃಷ್ಣಾಚಾರ್ಯರು, ಶ್ರೀ ರಾ. ಭೀ. ಮನ್ಸಬದಾರರು ಈ ಭಾಗದ ನಾಟಕಕಾರರು ಒಟ್ಟು ಕನ್ನಡ ನಾಟಕ ಸಾಹಿತ್ಯದ ಸಂದರ್ಭದಲ್ಲಿ ಈ ಭಾಗವನ್ನು ಪ್ರತಿನಿಧಿಸುವಂತ ನಾಟಕಕಾರರು ಇಲ್ಲ ಎನ್ನುವ ಸತ್ಯವನ್ನು ವಿಷಾದದಿಂದ ಹೇಳಬೇಕಾಗಿದೆ.

ಐತಿಹಾಸಿಕ ವಸ್ತುವನ್ನಿಟ್ಟುಕೊಂಡು ನಾಟಕ ಬರೆದವರಲ್ಲಿ ರೇವಣಸಿದ್ಧಯ್ಯ ರುದ್ರಸ್ವಾಮಿ ಮಠ, ಸಿದ್ಧಯ್ಯ ಪುರಾಣಿಕರು ಗಮನ ಸೆಳೆದಿದ್ದಾರೆ. ಬಹಮನಿ ರಾಜ್ಯದ ಅವಸಾನ ಕಾಲವನ್ನು ಕುರಿತು ಬರೆಯಲಾದ ಬಿದರಕೋಟೆ ಮತ್ತು ಸುರುಪುರಕ್ಕೆ ಬಂದಿದ್ದ ಸಂಗೊಳ್ಳಿ ರಾಯಣ್ಣನ ಪ್ರಸಂಗವನ್ನು ಆಧರಿಸಿ ಬರೆದ "ರಕ್ತಾಭಿಷೇಕ" ಸಂಪ್ರದಾಯಿಕ ರಂಗ ಭೂಮಿಗೆ ಒಗ್ಗುವಂತಹ ಕೃತಿಗಳು, ಶೌರ್ಯ, ಸಾಹಸಗಳೆಲ್ಲ ವಸ್ತು ಸಂಗ್ರಹಾಲಯ, ಸರ್ಕಸ್ ಡೇರೆ ಸೇರುತ್ತಿರುವ ಕಾಲದಲ್ಲಿ ಗತಕಾಲದ ನೆನಪನ್ನು ಮಾಡಿಸುವುದರ ಮೂಲಕ ಒಂದುಕ್ಷಣ ಮೈಬೆಚ್ಚಗಾಗಿಸದಿದ್ದರೂ ಮನಸ್ಸು ಬೆಚ್ಚಗಾಗುತ್ತದೆ. ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ಪಿ. ಕೆ. ರಾಮೇಶ್ವರ ಅವರ ನಾಟಕ ರಚನೆಗೆ ಕೈಹಾಕಿ, "ಚೀನಾ ದುರಾಕ್ರಮಣ" ದಂಥ ನಾಟಕ ಹೊರತಂದರು. ದಕ್ಷಿಣ ಭಾರತಕ್ಕೆ ಮೊಟ್ಟ ಮೊದಲಿಗೆ ದೂರದರ್ಶನ ಗುಲಬರ್ಗಾಕ್ಕೆ ಬಂದದ್ದು ಈ ಭಾಗವ ನಾಟಕ ರಚನಾಕಾರರನ್ನು, ನಿರ್ದೇಶಕ, ನಟರನ್ನೂ ಹುಟ್ಟಿಸುವಲ್ಲಿ ಒಂದು ಕಾರಣವಾಯಿತು.

ಆದರಲ್ಲಿಯೂ ರೇಡಿಯೋ ಇಲ್ಲಿಯ ಬರಹಗಾರರನ್ನು ಬೆಳೆಸಿತು, ಆದರೆ ವ್ಯವಹಾರಿಕವಾಗಿ ಬೆಳೆಸಿದ್ದು ದುರಂತ.

ರಂಗಭೂಮಿಯ ವಿವಿಧ ಆಯಾಮಗಳಲ್ಲಿ ಗುರುತಿಸಿಕೊಂಡ ಡಾ|| ಎಸ್. ಎಲ್ ಹಿರೇಮಠರು ನಾಟಕ ಸಾಹಿತ್ಯದಲ್ಲಿ ಗುರುತಿಸಿಕೊಳ್ಳಲಾಗಲಿಲ್ಲ. ಸಂಖ್ಯಾತ್ಮಕವಾಗಿ ಬೆಳೆದಿರುವ ಹಿರೇಮಠರ ನಾಟಕಗಳು ರಂಗ ಪ್ರದರ್ಶನ ದೃಷ್ಟಿಯಿಂದಲೂ ಉತ್ತಮವಾಗಿದ್ದರೂ ಸಾಹಿತ್ಯಕವಾಗಿ ಅವಲೋಕಿಸುವಾಗ ನೇತ್ಯಾತ್ಮಕ ಎತ್ತರಕ್ಕೆ ನಿಲ್ಲಬೇಕಾಗುತ್ತದೆ.

ರೇಡಿಯೋ ನಾಟಕಗಳ ಸುಗ್ಗಿಗೆ ಕಾರಣರಾದವರೆಲ್ಲ ಅವುಗಳನ್ನೆಲ್ಲಾ ಅಚ್ಚು ಹಾಕಿಸಿರುವುದು ಸಂತೋಷದ ಸಂಗತಿ, ಡಾ|| ಸಂಗಮೇಶ ಸೌದತ್ತಿಮಠ, ಡಾ|| ಎಂ. ಜಿ. ಬಿರಾದಾರ, ಡಾ|| ಶಕುಂತಲಾ ದುರಗಿ ಒಟ್ಟು ನಾಟಕ ಸಾಹಿತ್ಯದಲ್ಲಿ ಕಲಬುರ್ಗಿಯ ಕೊಡುಗೆಯನ್ನು ಗಮನಿಸುವಾಗ ಚಂದ್ರಕಾಂತ ಕುಸನೂರ ಮತ್ತು ಚೆನ್ನಣ್ಣ ವಾಲಿಕಾರರು ಗಮನಾರ್ಹರು.

ನವ್ಯದ ಕಾಲದಲ್ಲಿ ನಾಟಕ ರಚನೆಗೆ ತೊಡಗಿದ ಪ್ರಮುಖ ನಾಟಕಕಾರರ ಗುಂಪಿನಲ್ಲಿ ಚಂದ್ರಕಾಂತ ಕುಸನೂರರು ಒಬ್ಬರು. ಪ್ರಕಟವಾದ ಎಂಟು ನಾಟಕಗಳು ಒಂದಲ್ಲ ಒಂದು ದೃಷ್ಟಿಯಿಂದ ಅಸಂಗತತೆಯನ್ನು ಒಳಗೊಂಡವುಗಳೇ. ಇವರ ನಾಟಕಗಳಲ್ಲಿ ವ್ಯಕ್ತಿತ್ವದ ನಿರಸನ, ಅನ್ವೇಷಣೆ, ಸಂಬಂಧಗಳ ವೈಭವೀಕರಣದ ಗಾಜಿನ ಕೋಟೆಯ ಒಳಗಿರುವ ಬಿರುಕು, ಸಣ್ಣತನ, ಬದುಕಿನ ನಿರರ್ಥಕತೆ-ಮುಂತಾದ ವಸ್ತುಗಳನ್ನು ಎತ್ತಿಕೊಂಡು ರೂಪಕಗಳ ಮೂಲಕ ಅಮೂರ್ತವಾದದ್ದನ್ನು ಮೂರ್ತಗೊಳಿಸಿ ಪ್ರೇಕ್ಷಕರನ್ನು ಮತ್ತು ಓದುಗನ ಗಮನವನ್ನು ಚಿಂತನೆಯಡೆಗೆ ತಿರುಗಿಸುತ್ತಾರೆ. ಆನಿಬಂತಾನಿ; ವಿಮೋಷಕ, 'ಹಳ್ಳಾಕೊಳ್ಳಾ ನೀನು' ಕನ್ನಡ ಅಸಂಗತ ನಾಟಕ ಸಾಹಿತ್ಯದಲ್ಲಿ ಸ್ಥಳಗಿಟ್ಟಿಸಿಕೊಂಡ ಕೃತಿಗಳು.

'ಜೋಗುತಿ'ಯ ಮೂಲಕ ನಾಟಕ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವ ಚೆನ್ನಣ್ಣ ವಾಲೀಕಾರ ಅವರು ರಂಗಭೂಮಿಯ ಹೊಸ ಹೊಸ ಪ್ರಯೋಗಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳದಕಾರಣ ಇವರ ನಾಟಕಗಳು ಸಾಹಿತ್ಯ ಪ್ರಕಾರವಾಗಿಯಷ್ಟೇ ಉಲ್ಲೇಖನೀಯ. ಆದರೆ 'ಜೋಗುತಿ' ಪಾತ್ರ ಬಂಡಾಯದ ಆಶೆಗಳನ್ನೆಲ್ಲ ಸಮರ್ಥವಾಗಿ ಧ್ವನಿಸುತ್ತದೆ. ರಂಗಭೂಮಿಯ ದೃಷ್ಟಿಯಿಂದಲೂ ಗಮನಸೆಳೆವ ನಾಟಕಕಾರರು ಎರಡು ಜನವಾದಿ ನಾಟಕಗಳು ಐದು ಸಮಾಜವಾದಿ ನಾಟಕಗಳನ್ನು ಹೊರತಂದಿದ್ದಾರೆ.

ಕೆ. ಎಸ್. ರಾಜ್ ಅವರ 'ಗುಡಸಲಿನ ಗುಡುದಾಳಿ' ರಂಗಭೂಮಿಯು ಮೇಲೆ ಸಮರ್ಥವಾಗಿ ಅಭಿನಯಿಸಲ್ಪಟ್ಟಿದ್ದು. ಶೋಷಿತ ವರ್ಗ ಕೆರಳಿದಾಗ ರಕ್ತ ಕ್ರಾಂತಿಯಾಗುವುದೆಂಬುದನ್ನು ಸೈದ್ಧಾಂತಿಕವಾಗಿ ನಿರೂಪಿಸುವಲ್ಲಿ ಸೋತಿದೆ ಪ್ರಸ್ತುತ ಸಮಾಜದ ಸಮಸ್ಯೆಗಳನ್ನು ಬಿಂಬಿಸುವ ಕೃತಿ ಸಾಹಿತ್ಯಕವಾಗಿ ಇನ್ನೂ ಸಾಧಿಸಬಹುದಾಗಿತ್ತು. ಒಟ್ಟಾರೆ ಕಲಬುರ್ಗಿ ಜಿಲ್ಲೆಯು ನಾಟಕ ಸಾಹಿತ್ಯಕ್ಕೆ ಅಂತಹ ಗಮನಾರ್ಹವಾದುದ್ದೇನು ನೀಡಿಲ್ಲ.

ಕಥಾ ಸಾಹಿತ್ಯ : ಮಾಸ್ತಿ ಪರಂಪರೆಯಿಂದ ಕಥಾ ಸಾಹಿತ್ಯ ಪ್ರಗತಿಶೀಲ ಪರಂಪರೆಯು ತಿರುವಿನಲ್ಲಿದ್ದಾಗ ಇಲ್ಲಿ ಕಥೆಗಳ ಬೀಜ ಮೊಳಕೆ ಒಡೆಯಲು ಪ್ರಾರಂಭಿಸಿದ್ದವು ಪ್ರೊ॥ ಶಾಂ ಭೀ ದೇಸಾಯಿ ಯುವರಿಂದ ಕಥೆಗಳು ಪ್ರಾರಂಭವಾದಿ ಪದ್ಮಾ ಪ್ರಕಟಣಾಲಯವು. ಪ್ರಕಟಿಸಿದ "ತೊಟ್ಟಿಲು ತೂಗಿತು" ಭಾಗ್ಯೋದಯ ಗ್ರಂಥಮಾಲೆಯು "ಕತೆಗಾರ್ತಿ" ರಂಗಂಪೇಟೆಯು ಸಾಹಿತ್ಯ ಸಂಘ ಪ್ರಕಟಿಸಿದ "ಮಧುರ ಮಿಲನ" ಆದರ್ಶ–ಇತ್ಯಾದಿ ಕಥಾಸಂಕಲನಗಳು ಮುಂಬರುವ ಕಥಾಗಾರರಿಗೆ ನೆಲಹದ ಮಾಡಿ ಕೊಟ್ಟವು.

ಮೊಟ್ಟ ಮೊದಲು ಸಿದ್ಧಯ್ಯ ಪುರಾಣಿಕ, ಸಗರ ಕೃಷ್ಣಾಚಾರ್ಯರು, ಜಯತೀರ್ಥ ರಾಜಪುರೋಹಿತ ಮೊದಲಾದವರು ಪತ್ರಿಕೆಗಳಲ್ಲಿ ಕಥೆಗಳನ್ನು ಪ್ರಕಟಿಸಿದರು. ಜಯತೀರ್ಥ ರಾಜಪುರೋಹಿತರ "ಪಾರಮ್ಮನ ಪಂಚೇತಿ" ಶಿಥಿಲ ಶಿಲೆ; ಹಕಾರಿಯವರ ಒರೆಗಲ್ಲು ಆ ಕಾಲದಲ್ಲಿ ಗಮನ ಸೆಳೆದ ಕಥೆಗಳು ಮತ್ತು ಸಂಕಲನಗಳು.

ಕಥಾ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯದಲ್ಲಿ ಕಲಬುರ್ಗಿಯ ಕಂಪು ಬೀರಿದವರೆಂದರೆ ಚೆನ್ನಣ್ಣ ವಾಲೀಕಾರ, ಗೀತಾ ನಾಗಭೂಷಣ ಮತ್ತು ಸರಿತಾ ಕುಸುಮಾಕರ ದೇಸಾಯಿಯವರು.

ದಲಿತ ಬಂಡಾಯದ ಸಂದರ್ಭದಲ್ಲಿ ಅಕ್ಷರ ಮಾಧ್ಯಮದ ಮೂಲಕ ಹೊಸ ಬದುಕಿನ ಬಾಗಿಲು ತೆರೆದುಕೊಂಡ ಬೇರೆ ಬೇರೆ ಜಾತಿ, ವರ್ಗದ ಜನರು ತಮ್ಮ ತಮ್ಮ ಬದುಕಿನ ಪದರುಗಳನ್ನು ಬಿಚ್ಚಿ ತೋರಿಸಲು ಪ್ರಾರಂಭಿಸಿದಾಗ ಬದ್ಧ ಸಾಹಿತ್ಯ ಸಿದ್ಧ ಸಾಹಿತ್ಯಗಳೆಲ್ಲ ತಡಬಡಿಸುವಂತಾಯಿತು.

ಚೆನ್ನಣ್ಣ ವಾಲೀಕಾರ: ಮೂಲಭೂತವಾಗಿ ಕವಿಹೃದಯವುಳ್ಳವರು ಗದ್ಯದಲ್ಲಿಯೇ ಪದ್ಯದ ಸ್ವರ ಸಂಯೋಜನೆ ಮಾಡಿದ್ದಾರೆ. "ಕುತ್ತದಲ್ಲಿ ಕುದ್ದವರ ಕಥೆಗಳು" ಸಂಕಲನ ಕಲಬುರ್ಗಿಯ ವೈಶಿಷ್ಟ್ಯಗಳೆಲ್ಲವನ್ನು ಮೈಗೂಡಿಸಿಕೊಂಡಿದೆ.

ಅಜ್ಞಾನ, ಅನಕ್ಷರತೆ, ಅಂಧ ಶ್ರದ್ಧೆ, ಒಳಜಗಳಗಳನ್ನು ಕಾಪಿಟ್ಟುಕೊಂಡು ಹೋಗುವ ಬಡತನವನ್ನು ಮೇಲ್ವರ್ಗದ, ಮೇಲ ಜಾತಿಯು. ಶ್ರೀಮಂತ ಕುನ್ನಿಗಳು ಹೇಗೆ ಲಾಭದಾಯಕವನ್ನಾಗಿ ಮಾಡಿಕೊಂಡಿವೆ ಎಂಬುದನ್ನು ಈ ಸಂಕಲನದ ಕಥೆಗಳಲ್ಲಿ ಕಣ್ಣಿಗೆ ರಾಚುವಂತೆ, ವೈಚಾರಿಕತೆ, ಚಾರಿತ್ರಿಕ ಹಿನ್ನೆಲೆಯನ್ನು ಕಟ್ಟಿಕೊಂಡೆ ಬರೆದಿರುವ ರೀತಿ ಜನಪದವಾದದ್ದು ಕಲಬುರ್ಗಿ ನೆಲದ ಭಾಷೆಯನ್ನು ಬಳಸಿ ನಿತ್ಯ ಬದುಕಿನ ಹತ್ತಾರು ಮುಖಗಳನ್ನು ಪರಿಚಯಿಸುವಾಗ ನಾವು ನೀವು ಸಂಧಿಸಿದಂತಾಗುತ್ತದೆ.

'ನಾಯಕನು ಮತ್ತು ಅವನ ಹೆಂಡತಿಯು' ಕಥೆಯ ನಾಯಕ ಕಾಮ್ರೇಡ್ ಚಳುವಳಿ, ಹೋರಾಟಗಳ ಮಧ್ಯದಲ್ಲಿ ವೈಯಕ್ತಿಕ ಬದುಕನ್ನು ಕಡೆಗಣಿಸುವುದು. ಸಮಾಜದ ಕ್ರೂರ ಹಿತಾಸಕ್ತಿಗಳಿಗೆ ಬಲಿಯಾಗುವುದು, ಇಂತಹ ಪರಸ್ಥಿತಿಯಲ್ಲಿ ಅವನ ಹೆಂಡತಿ 'ರತ್ನಾ' ವ್ಯವಸ್ಥೆಯ ಎಲ್ಲ ವ್ಯಕ್ತಿ ದೌರ್ಬಲ್ಯಗಳನ್ನು ಮೈಗೂಡಿಸಿ ಕೊಂಡವಳು ಜೊತೆಗೆ ಹಸಿವಿನ ಕಿಚ್ಚನ್ನು ತಾಳಲಾರದೆ ಮುಂಬೈಗೆ ಹೋಗಿ ವೇಶ್ಯಾ ಜೀವನವನ್ನು ಸಾಗಿಸುವ ಸ್ಥಿತಿ ಒಡೆದ ಗಾಜಿನ ಚೂರಿನಲ್ಲಿ ಥಳ ಥಳಿಸು ವಂತಹ ಜೀವನದಿಂದ ಸಿಗುವುದೇನು ಎಂಬುದು ಅರಿವಾದಾಗ ಕಾಲುವಿಂಚಿರುತ್ತದೆ. ಮೈ ಮನಸ್ಸಿನ ತುಂಬ ರೋಗ ತುಂಬಿಕೊಂಡು ಮರಳಿ ಬಂದಾಗ ನಾಯಕ ತೆರೆದ ಹೃದಯದಿಂದ ಸ್ವೀಕರಿಸುತ್ತಾನೆ. "ನಿಂದೇನು ತಪ್ಪಿಲ್ಲ ರತ್ನ, ತಪ್ಪು ನಂದೇ ಅದಾ ನಾನೇ ಜೇಲಿಗೆ ಹೋಗಲಿಕಂದ್ರ ನಿನ್ನ ತಾಯಿ ಸಾಯಲಿಕ್ಕಂದ್ರ, ನಮ್ಮ ಲೇಬರ್ ಮಂದಿ ನೋಡ್ತಿತಂದ್ರೆ ನೀ ಯಾಕ ಮುಂಬೈಯಿಗೆ ಹೋಗ್ತಿದ್ದಿ" ಎಂಬಲ್ಲಿ ಒಬ್ಬ ನಿಜವಾದ ಮನುಷ್ಯನನ್ನು ಕಂಡಂತಾಗುತ್ತದೆ. ಇಂಥ ವ್ಯಕ್ತಿತ್ವ ಈ ನೆಲೆಯಿಂದ ಬಂದದ್ದಲ್ಲ ಉದಾರ ಮಾನವೀಯ ನೆಲೆಯ ಬೇರುಬಿಳಲುಗಳನ್ನೆಲ್ಲ ಚಾಚಿ 'ಎಲ್ಲ ಮನುಷ್ಯ ದೌರ್ಬಲ್ಯಗಳನ್ನು ಅರಿತು. ಅರಗಿಸಿಕೊಂಡು, ಮನುಷ್ಯನನ್ನು ಪ್ರೀತಿಸು" ಎಂದ ಕಾರ್ಲಮಾರ್ಕ್ಸ್‌ನ ಮಾನವ ಪ್ರೇಮದ ತತ್ವದಿಂದ ದಕ್ಕಿದ್ದು.

ದಲಿತ-ಬಂಡಾಯ ಸಾಹಿತ್ಯಕ ಚಳುವಳಿಯ ಸಂದರ್ಭದಲ್ಲಿ ಕೆಳವರ್ಗದ ಮಹಿಳೆಯರು ಬರೆಯಲು ಪ್ರಾರಂಭಿಸಿದ್ದು ಒಂದು ಗಮನಾರ್ಹ ಸಂಗತಿ. ದಲಿತ ಬದುಕಿನ ಪದರುಪದರುಗಳನ್ನು ಬಿಚ್ಚಿ ತೋರಿಸುವುದರ ಮೂಲಕ ಅವರು ಸಾಮಾಜಿಕ ಅಸಮಾನತೆಯ ವಿರುದ್ಧ ಸಾಹಿತ್ಯದ ಚಳುವಳಿಯನ್ನು ಗಟ್ಟಿಗೊಳಿಸಿದರು ಮಧ್ಯಮವರ್ಗದ, ಮೇಲ್ವರ್ಗದ ಬರಹಗಾರರು ಕಳಕಳಿಯಿಂದಲೊ; ಕಾಳಜಿ ಯಿಂದಲೋ ಇಲ್ಲ ಫ್ಯಾಶನ್ನಿಗಾಗಿಯೋ ದಲಿತರ ಬಗ್ಗೆ ಬರೆದದ್ದು ಬೆಟ್ಟದಷ್ಟಿದ್ದರೂ ಅದರಲ್ಲಿ ವಾಸ್ತವತೆ ಸಡಿಲುಗೊಂಡಿದೆ. ಸ್ವಾನುಭವ ಗಟ್ಟಿಗೊಂಡಾಗ, ಕಲಾತ್ಮಕತೆಯು

ಗಿಲೀಟಿಲ್ಲವಿದ್ದರೂ ಅದು ಗಂಭೀರವಾದ ಸಂಗತಿಯಾಗುತ್ತದೆ. ಹಾಗೆಯೇ ದಲಿತ ಬದುಕಿನ ಬಗ್ಗೆ ಬಂಡಾಯ ಧ್ವನಿ ಇಟ್ಟುಕೊಂಡು ವಾಸ್ತವಿಕವಾಗಿ ಬರೆದ ಮಹಿಳೆಯರು ಕಡಿಮೆ. ಪುರುಷ ಸಂಸ್ಕೃತಿಯ ಹೇರಿಕೆಗೆ ಒಳಗಾಗಿ ಮಡಿವಂತಿಕೆಯ, ಸಂಕೋಚದ ಚಿಪ್ಪನ್ನು ಒಡೆದು ಹೊರ ಬಂದು ವಾಸ್ತವಿಕವಾಗಿ ಬರೆಯುತ್ತಿರುವವರೂ ಇನ್ನು ಕಡಿಮೆ. ಇಂತಹ ಕಡಿಮೆ ಸಂಖ್ಯೆಗೆ ಸೇರುವ ಗೀತಾನಾಗಭೂಷಣರು 'ಜ್ವಲಂತ' ಕಥಾ ಸಂಕಲನದ ಮೂಲಕ ಕಥಾ ಸಾಹಿತ್ಯಕ್ಕೆ ಕಲಬುರ್ಗಿಯನ್ನು ಪರಿಚಯಿಸಿದ್ದಾರೆ.

ಇವರ ಕಥೆಗಳ ವೈಶಿಷ್ಟ್ಯವೆಂದರೆ ನಿರ್ಭಿಡೆಯು. ನಿಸ್ಸಂಕೋಚವಾದ ಬಿಚ್ಚು ಮನಸ್ಸಿನಲ್ಲಿ ನಿರೂಪಣೆ. ನೆಲದ ನಾಲಗೆಯಂತಹ ಭಾಷೆ ಬಳಸಿ ಸಾಂಪ್ರದಾಯಿಕ ಬರವಣಿಗೆಯ ಲಕ್ಷ್ಮಣ ರೇಖೆಗಳನ್ನೆಲ್ಲಾ ದಾಟಿಬರೆಯುವ ರೀತಿಯನ್ನು ಕಂಡು ಒಳಗೊಳಗೆ ಛಳಿಗೊಂಡು ಹೊರಗೆ ಮೂಗುಮುರಿದ ಅನೇಕ ಮಡಿವಂತರುಂಟು. ಅಶ್ಲೀಲವೆಂದು ಮೈಮನಸ್ಸಿನ ತುಂಬ ಕಂಜೆಗೆಗಳನ್ನೆಬ್ಬಿಸಿಕೊಂಡು ಮಿಡುಕಿದವರುಂಟು.

ನಾಗಭೂಷಣರವರ ಕಥೆಗಳು ಹೆಚ್ಚಾಗಿ ಕೆಳವರ್ಗದ ಮಹಿಳೆಯರು ಮೇಲ್ವರ್ಗದ ಪುರುಷರ ವಿಷಯಲಾಲಸೆಗೆ ಹೇಗೆ ಬಲಿಯಾಗುತ್ತಾರೆ. ಇದೇ ಸಂದರ್ಭದಲ್ಲಿ ಮೇಲ್ವರ್ಗದ ಮಹಿಳೆಯರು ತಮ್ಮ ಗಂಡಸರ ದೌರ್ಬಲ್ಯಗಳನ್ನು ಒಳಗೊಳಗೆ ಪ್ರತಿಭಟಿಸುತ್ತ ಕೆಳವರ್ಗದ ಗಂಡಸರ ಉಕ್ಕಿನೆದೆಗೆ ತೆಕ್ಕೆ ಬೀಳಲು ಹೇಗೆ ಹಾತೊರೆಯುತ್ತಿರುತ್ತಾರೆ. ಎನ್ನುವುದನ್ನು ಎತ್ತಿತೋರಿಸುತ್ತವೆ. ಹೆಣ್ಣಿನ ಹೆಣ್ತನದ ಬಗ್ಗೆ ಅವರ ಮಾನಸಿಕ ಲೋಕದ ಬಗ್ಗೆ ತೆರೆದ ಮನಸ್ಸಿನ ಮುಕ್ತ ನಿರೂಪಣೆ ಕಥೆಗಳಲ್ಲಿ ಕಂಡು ಬರುತ್ತದೆ.

''ಗೌಡನಗೋರಿ'' 'ಬಂಜೆಂಬಶಬ್ದ ಹೊರಲಾರೆ' ಕಥೆಗಳು ಹೆಣ್ಣಿನ ಒಡಲುರಿಯನ್ನು ಸಮರ್ಥವಾಗಿ ಹೊರಹಾಕಿವೆ, ಹುಲಗ್ಯಾ ಜಾತಿ ಬಲ, ನೆಲ ಬಲದ ಮೂಲಕ ನಿರಂತರವಾಗಿ ನಡೆಯುವ ದೌರ್ಜನ್ಯದ ವಿರುದ್ಧ ಪ್ರತಿಕಾರ ಕೈ ಕೊಳ್ಳುವ ನಿಟ್ಟನಲ್ಲಿದೆ. ಜನಪದ ಭಾಷೆಯ ಕಸುವು, ಆ ಪ್ರದೇಶದ ಯಥಾವತ್ತಾದ ಚಿತ್ರಣ, ಪಾತ್ರಗಳ ಮೇಲಿನ ಹಿಡಿತ ಕಥೆಗಳ ಸಾಫಲ್ಯಕ್ಕೆ ಕಾರಣ ವಾಗುತ್ತವೆ. ಹೆಣ್ಣು–ಗಂಡಿನ ಸಂಬಂಧದ ಬಗ್ಗೆ ಇರುವ ಸಿದ್ಧ ಚೌಕಟ್ಟನ್ನು ಮುರಿದು ವಾಸ್ತವ, ಮಾನವೀಯ ನೆಲೆಯ ಮೇಲೆ ನಿಂತು ನೋಡಲು ಪ್ರಯತ್ನಿಸಿದರೀತಿ ವೈಜ್ಞಾನಿಕ ಮತ್ತು ವೈಚಾರಿಕ ವಾದದ್ದು, ಪುರುಷ ಬರಹಗಾರರ ಹಾಗೇ ಭಾಷೆಯ ಬಳಕೆ, ಸನ್ನಿವೇಶಗಳನ್ನು ವಾಸ್ತವಿಕವಾಗಿ ಯಾವ ಎಗ್ಗಿಲ್ಲದೆ ಚಿತ್ರಿಸುವ ಕಾರಣ ಇವರ ಬರವಣಿಗೆ ಗಮನ ಸೆಳೆದಿದೆ. ಮತ್ತು ಹೆಚ್ಚು ಗಟ್ಟಿಯಾಗಿದೆ; ಸತ್ವಪೂರ್ಣವೆನಿಸಿಕೊಂಡಿದೆ.

ಸರಿತಾ ಕುಸುಮಾಕರ ದೇಸಾಯಿಯವರು ವೃತ್ತಿಯಿಂದ ವಕೀಲರು ಪ್ರವೃತ್ತಿಯಿಂದ ಸಾಹಿತಿಗಳು "ನಾನು Lucky ಮತ್ತು ಕಾಶಿಯಲ್ಲಿ ಕಂಡಿದ್ದೇನು" -ಎರಡು ಸಂಕಲನ ಗಳನ್ನು ತಂದಿದ್ದಾರೆ, ಇವರ ಕಥೆಗಳಲ್ಲಿ ವಸ್ತು ವೈವಿಧ್ಯ ಅಷ್ಟಾಗಿ ಕಾಣಿಸುವುದಿಲ್ಲ ವಸ್ತುವಿನ ಆಯ್ಕೆಯ ಬಗ್ಗೆ ಬೀಚಿಯವರು "ಕಾಶಿಯಲ್ಲಿ ಕಂಡಿದ್ದೇನು" ಕೃತಿಗೆ ಮುನ್ನುಡಿ ಬರೆಯುತ್ತಾ ಎರಡು ಹೆಣ್ಣು ಒಂದು ಗಂಡು ಅಥವಾ ಗಂಡೆರಡು ಹೆಣ್ಣೊಂದು ಈ ಟಾಪಿಕ್ ಮಾನವನಷ್ಟೇ ಹಳೆತು. ಮನುಷ್ಯ ಈ ಭೂವಿಯ ಮೇಲೆ ಮೊದಲು ಕಂಡಾಗಲೇ ಇದು ಹುಟ್ಟಿತು. ಇದರೆ ಬಗ್ಗೆ ಸಹಸ್ರಾರು ಕಥೆಗಳು ಬಂದಿವೆ. ಇನ್ನೂ ಬರುತ್ತಲೇ ಇವೆ. ಈ ಹಳಸಿದ ಅನ್ನಕ್ಕೆ ಹೊಸ ಒಗ್ಗರಣೆ ಹಾಕುವುದೇಕೆ" 11 ಎನ್ನುವ ಮಾತನ್ನು ಬಹುತೇಕ ಎಲ್ಲ ಬರಹಗಾರರು ವಸ್ತುವಿನ ಆಯ್ಕೆಯ ಹಿನ್ನೆಲೆಯಲ್ಲಿ ನೆನಪಿಡಬೇಕಾದ್ದ.

ಇತ್ತೀಚಿಗೆ ಗಮನ ಸೆಳೆವ ಕಥೆಗಾರರಲ್ಲಿ ಸಿದ್ಧರಾಮ ಹೊನ್ಕಲ್ ರಾಜಶೇಖರ ಹತಗುಂದಿಯವರು ಪ್ರಮುಖರು, ರವೀಂದ್ರ ಕರ್ಜಗಿ ಕಥೆಗಾರರ ಪಟ್ಟಿಗೆ ಸೇರಿದವರು.

ಕಾದಂಬರಿ : ಮಧ್ಯಮ ವರ್ಗದ ಪಟ್ಟದ ರಾಣಿಯೆಂದು ಕರೆಯಿಸಿ ಕೊಳ್ಳುತ್ತಿರುವ ಕಾದಂಬರಿ ಓದುಗರ ಸಂಖ್ಯೆಗನುಗುಣವಾಗಿ ಕಾದಂಬರಿ ಕಾರರನ್ನು ಹೆಚ್ಚಿಸಿದೆ. ಅದರಲ್ಲಿಯೂ ಮಧ್ಯಮವರ್ಗದ ಓದಿದ ಮಹಿಳೆಯರ ಭ್ರಮಾತ್ಮಕ ಲೋಕವನ್ನು ನೋಡಲು ವಿಸ್ತಾರವಾದ ಭೂಮಿಕೆಯನ್ನು ಒದಗಿಸಿದ್ದು.

ಕಲಬುರ್ಗಿ ಜಿಲ್ಲೆಯಲ್ಲಿ ಡಾ॥ ಪಾಂ. ಭೀ. ದೇಸಾಯಿಯವರ ಐತಿಹಾಸಿಕ ಕಾದಂಬರಿ ಗಳಾದ 'ಮದಗಜಮಲ್ಲ' "ಜಯಗೋದಾವರಿ" "ಕುಂತಲೇಶ್ವರ" ಶ್ರೀ ರಾ. ಭಿ. ಮನ್ಸಬದಾರರ "ಅಬಲಾ"; ಪ್ರೊ॥ ಎಚ್. ಬಿ. ಕುಲಕರ್ಣಿಯವರ ಭಗ್ನಮಂದಿರ; ಸಿದ್ಧಯ್ಯ ಪುರಾಣಿಕರ ತ್ರಿಭುವನ ಮಲ್ಲ ಹಕಾರಿಯವರ ಕೂಗುತಿವೆ ಕಲ್ಲು; ಸಗರ ಕೃಷ್ಣಾಚಾರ್ಯರ ಪ್ರೇಮ;- ಈ ಭಾಗದ ಉಲ್ಲೇಖನೀಯ ಕಾದಂಬರಿಗಳು. ಆದರೆ ಕಾದಂಬರಿ ಪ್ರಕಾರ ಗರ್ಭಿಸಿಕೊಂಡ ಎಲ್ಲವನ್ನು ಇಲ್ಲಿಯವರೆಗೆ ಹೆರಿಗೆ ಮಾಡಿಸಲು ಆಗಿಲ್ಲ. ಹೀಗಾಗಿ ವಸ್ತು, ತಂತ್ರ, ಭಾಷೆ, ಶೈಲಿ, ಶಿಲ್ಪವೆಂದು ಬಿಡಿ ಬಿಡಿ ಅಂಶಗಳ ಬಗ್ಗೆ ಮಾತನಾಡುವ ಸಾಧ್ಯತೆಗಳನಷ್ಟೇ ಇಲ್ಲಿಯ ಕಾದಂಬರಿಕಾರರು ತೋರಿಸಿ ಕೊಟ್ಟಿರುವ ಕಾರಣ ಒಟ್ಟು ಅಂಗಸೌಷ್ಠವದ ಬಗ್ಗೆ ಒಬ್ಬಿಬ್ಬರು ಮಾತ್ರ ಮಾತನಾಡಲು ಪ್ರಯತ್ನಿಸಿದ್ದಾರೆ.

ಸುಮಾರು 20 ರ ದಶಕದಲ್ಲಿ ಜಯತೀರ್ಥ ರಾಜಪುರೋಹಿತರು ಕಾದಂಬರಿಯ ಅಡಿಗಲ್ಲನ್ನಿಟ್ಟರು, ನಂತರ ಚೆನ್ನಣ್ಣ ವಾಲಿಕಾರ, ಗೀತಾ ನಾಗಭೂಷಣ ಅವರು ಕಟ್ಟಿದರು.

1969 ರಲ್ಲಿ ರಾಜಪುರೋಹಿತರ ಮೊದಲ ಕಾದಂಬರಿ, ಹಾಲು-ಜೇನು, ನಂತರ ಸುಳಿಗಾಳಿ ಪ್ರಕಟವಾದವು. 1979 ರಲ್ಲಿ "ಜೊಹರಾ" ಐತಿಹಾಸಿಕ ಕಾದಂಬರಿ ಪ್ರಕಟವಾಯಿತು ಇವರ ಕಾದಂಬರಿಯ ವಸ್ತು ವಿಷಯದ ಹಿನ್ನೆಲೆಯಲ್ಲಿ ಹೇಳುವುದಾದರೆ ನವೋದಯ ಪರಂಪರೆಗೆ ಸೇರಿದವರೆನ್ನಬಹುದು ಶ್ರೀ ಸಿ. ಕೆ. ನಾಗರಾಜ್ ಅವರು "ಜಯತೀರ್ಥರು ಮಾಸ್ತಿಯವರ ಸಾಲಿನಲ್ಲಿ ನಿಲ್ಲುತ್ತಾರೆಂದರೆ, ಹಾ. ಮಾ. ನ. ಅವರು ಮಾಸ್ತಿ ಪರಂಪರೆಗೆ ಸೇರಿದವರು" 12 ಎಂದು ಸ್ಪಷ್ಟವಾಗಿಯೇ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ.

''ಜೊಹರಾ" ಐತಿಹಾಸಿಕ ಕಾದಂಬರಿ' ಐತಿಹಾಸಿಕ ಕಾದಂಬರಿಗಳು ಬರೀ ಊಹೆ. ಕಲ್ಪನೆಯ ಮೇಲೆ ಬಿಚ್ಚಿಕೊಳ್ಳುತ್ತಾಹೋದರೆ ವಸ್ತು ಸತ್ಯದಿಂದ ಓದುಗರನ್ನು ದೂರಮಾಡುವ ಅಪಾಯಕಾರಿ ಬೆಳವಣಿಗೆ ಇರುತ್ತದೆ. ಆದರೆ ಅದನ್ನೇ ಐತಿಹಾಸಿಕ ದಾಖಲೆಗಳು, ಶಾಸನಗಳು, ಕ್ಷೇತ್ರ ಮಾಹಿತಿ, ಸ್ಪಷ್ಟವಾಗಿದ್ದಾಗ ಮಾತ್ರ ಆ ವಸ್ತುವಿಗೆ ನ್ಯಾಯ ಒದಗಿಸಲು ಸಾಧ್ಯ, ಇದನ್ನು ರಾಜಪುರೋಹಿತರು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದಾರೆ. ಹಿಂದೂ-ಮುಸ್ಲಿಂ ಬದುಕಿನ ಬಗ್ಗೆ ಸಂಸ್ಕೃತಿಯ ಬಗ್ಗೆ ಅತ್ಯಂತ ತಾಳ್ಮೆಯಿಂದ, ತೂಕ ಬದ್ಧವಾಗಿ, ಕಲ್ಪನೆಯ ತಕ್ಕಡಿಯಲ್ಲಿ ತೂಗಿದ್ದಾರೆ, ಕಾದಂಬರಿ ಓದುಗನನ್ನು ಎಲ್ಲಿಯೂ ನಿಲ್ಲಿಸದೆ ಕೊನೆಯವರೆಗೂ ಓದಿದ ಓಟದಲ್ಲಿ ಕರೆದೊಯ್ಯುವ ಗುಣ ಅಳವಡಿಸಿಕೊಂಡಿದೆ.

ನವೋದಯ ಪರಂಪರೆಯನ್ನು ನವ್ಯ ತಿರುವು ಬಂಡಾಯ ಮುಂಬೆಳಗಿನಲ್ಲಿ ಇಲ್ಲಿ ಕಂಡರೆ, ನವ್ಯ ಕಾಲದಲ್ಲಿ ಯಾವ ಕೃತಿಗಳು ಹೊರಬರಲಿಲ್ಲ, ನಂತರದ ಕಾಲದಲ್ಲಿ ಚೆನ್ನಣ್ಣವಾಲೀಕಾರ ಮತ್ತು ಗೀತಾನಾಗಭೂಷಣರು ಆ ಕೊರತೆಯನ್ನು ತುಂಬಿಕೊಡುವ ನಿಟ್ಟಿನಲ್ಲಿ ಕೃತಿ ರಚನೆ ಮಾಡಿದರು.

ಚೆನ್ನಣ್ಣವಾಲೀಕಾರ ಅವರ ಬೆಳ್ಳಿ ಹುಲಿಗೆಮ್ಮ ಒಂದು ಹೆಣ್ಣಿನ ಒಳ ಜಗತ್ತು ಕೋಟೆ ಕಾದಂಬರಿಗಳು ಪ್ರಕಟವಾಗಿವೆ. ಬೆಳ್ಳಿ ವಿಮರ್ಶಕರ ನಿರ್ಲಕ್ಷ್ಯಕ್ಕೆ ಒಳಗಾದ ಕೃತಿ ಸಾಹಿತ್ಯ ಲೋಕದ ರಾಜಕೀಯದ ಬಗ್ಗೆ ಪುರೋಹಿತಗಿರಿಯ ಬಗ್ಗೆ ಇತ್ತೀಚಿನ ದಿನಗಳಲ್ಲಿ ಒಂದು ರೀತಿಯ ಮುಖಾಮುಖಿಯಲ್ಲದಿದ್ದರೂ ಒಳಗಿನ ಗುದುಮುರಿಗೆ ಹೊರ ಬೀಳುತ್ತಿದೆ, ಪರಾಕು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಮನಸ್ಸುಗಳಿಗೇನೂ ಇಂದು ಕೊರತೆಯಿಲ್ಲ, ಕುಸುಮ ಬಾಲೆಗೆ ಕೇಂದ್ರ

---

೧) ಕಾಶಿಯಲ್ಲಿ ಕಂಡಿದ್ದೇನು—ಸರಿತಾ ಕುಸುಮಾಕರ ದೇಸಾಯಿ (ಮುನ್ನುಡಿಯಿಂದ)

ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಾಗ ವಿಮರ್ಶಾಲೋಕದ ಎಡಬಿಡಂಗಿಗಳು ನಾಮುಂದು, ತಾಮುಂದು ಎಂದು ವಸ್ತುಸತ್ಯವನ್ನು ಮರೆಮಾಚುತ್ತ ಕೃತಿಗೆ ಮಣ್ಣಹಾಕಲು, ಮಂಚಹಾಕಲು ಮುಂದಾದರು.

ಬೆಳ್ಳಾ ಕಾದಂಬರಿ ಪ್ರಕಟವಾದಾಗ ವಿಮರ್ಶಕರು ಸ್ವೀಕರಿಸಿದ ರೀತಿ ಹೇಗಿತ್ತೆಂದರೆ ಚೆನ್ನಣ್ಣ ವಾಲೀಕಾರರ ಕಾದಂಬರಿ ಕಾಂಪ್ರೋಜ ಮಾಡುವ ಕಾಂಪ್ರೋಜಿಟರ ಮಾತ್ರ ಓದಲು ಸಾಧ್ಯವೆಂದಿದ್ದರು. ನಿಜವಾಗಿಯೂ ಇದು ಕೃತಿಗೆ ಸಂದನ್ಯಾಯವಲ್ಲ ಎನ್ನುವುದು ನಂತರದ ದಿನಗಳಲ್ಲಿ ಗೊತ್ತಾದ ಕಾರಣ ಚಂದ್ರಶೇಖರ ಪಾಟೀಲ ಅವರು ಅದರ ಪುನರ್ ವಿಮರ್ಶನದ ಕಡೆಗೆ ಗಮನ ಹರಿಸುವಂತ ಮಾತುಗಳನ್ನು ಚಂಪಾಕಾಲಂನಲ್ಲಿ ಸಂಕ್ರಮಣದಲ್ಲಿ ಬರೆದರು.

ಬೆಳ್ಳಾ ಹಿಂದುಳಿದ ಒಂದು ಜಾತಿಯ ಸಮಗ್ರ ಸಂಸ್ಕೃತಿಯ ಬದುಕನ್ನು ಬಿಚ್ಚಿ ತೋರಿಸಿದೆ ಜನಪದರಲ್ಲಿಯ ಹೃದಯ ವೈಶಾಲ್ಯ ಜನರ ಕಾಳಜಿ, ಧರ್ಮಕರ್ಮದ ಬಗ್ಗೆ ಇರುವ ಭಯ, ಸತ್ಯ ನ್ಯಾಯದ ಬಗ್ಗೆ ನಾಲಿಗೆ ಕೊಯ್ದು ಕೊಳ್ಳುವ ಮುಗ್ಧತೆ, ಹೆಣ್ಣು-ಗಂಡಿನ ಸಂಬಂಧಗಳನ್ನು ಜಮೀನ್ದಾರಿಕೆಯ ಸೂತ್ರ ಗಳಲ್ಲಿಯೇ ಸ್ವೀಕರಿಸಿದ್ದರೂ ಅವುಗಳನ್ನು ಒರೆಗೆ ಹಚ್ಚುವ ಪ್ರಸಂಗ ಎದುರಾದಾಗ ಮಾತ್ರ ಜಮೀನ್ದಾರಿಕೆಯ ಕ್ರೌರ್ಯ ಮೀರಿ ಮಾನವತೆಗೆ ತಲೆಬಾಗುವ ರೀತಿ ಇಂದಿಗೂ ಉಳಿದು ಕೊಂಡಿವೆ. ಇದನ್ನೆಲ್ಲಾ ಬೆಳ್ಳಾ ಕಾದಂಬರಿಯಲ್ಲಿ ಕಾಣಬಹುದು ಸಂಪೂರ್ಣವಾಗಿ ಕಲಬುರ್ಗಿಯ ನೆಲದ ನಾಲಿಗೆಯ ಭಾಷೆ ಇರುವ ಕಾರಣ ಸಾಮಾನ್ಯವಾಗಿ ಎಲ್ಲರನ್ನು ಓದಿಸಿಕೊಂಡು ಹೋಗುವಲ್ಲಿ ಕೈಯೂರುವಂತೆ ಮಾಡಿದರೂ ಕನ್ನಡ ಸಾಹಿತ್ಯಕ್ಕೆ ಪ್ರಾದೇಶಿಕ ಭಾಷೆಯನ್ನು ಪರಿಚಯಿಸಿದ ಹೆಮ್ಮೆಯಿದೆ.

ಗೀತಾ ನಾಗಭೂಷಣ ಅವರು ಸುಮಾರು 20 ಕ್ಕೂ ಮಿಕ್ಕಿ ಕಾದಂಬರಿಗಳನ್ನು ಬರೆದಿರುವರು ಮತ್ತು ಇವರ ಕಾದಂಬರಿಗಳು ಚಲನ ಚಿತ್ರಗಳಾಗಿವೆ.

ಪುರುಷ ಸಂಸ್ಕೃತಿ ಎನ್ನುವಂಥದ್ದು ಮೇಲ್ವರ್ಗವೇತ್ತ ಜಾತಿಗಳಲ್ಲಿ ಮಾತ್ರ ಕಾದಿಟ್ಟುಕೊಂಡಿರುವಂತಹದ್ದಲ್ಲ ಎಲ್ಲವರ್ಗ ಜಾತಿಯ ಗಂಡಸರು ಈ ಸಂಸ್ಕೃತಿಯ ಪಕ್ಷಪಾತರೇ ಎಲ್ಲ ಜಾತಿ, ವರ್ಗದ ಸ್ತ್ರೀಯರು ಒಂದರ್ಥದಲ್ಲಿ ದಲಿತರಾಗುತ್ತ ಪುರುಷ ಸಂಸ್ಕೃತಿಯಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ದಬ್ಬಾಳಿಕೆಗೆ ಹಿಂಸೆಗೆ ಒಳಗಾದವರು ಇಂತಹ ಸಂಸ್ಕೃತಿಯಲ್ಲಿ ಕಾಯ್ದೆ ಕಾನೂನುಗಳು ಕಾಗದದ ಮೇಲಿನ

ಅಕ್ಷರಗಳಾಗಿಯೇ ಉಳಿಯುತ್ತವೆ. ಅಷ್ಟೇ ಅಲ್ಲದೆ ಇಂತಹ ಕಾಯ್ದೆ ಕಾನೂನುಗಳನ್ನು ಮಾಡುವವರು ಪರಿಪಾಲಿಸಬೇಕಾದವರು ಗಂಡಸರು ತಾನೆ, ಹೀಗಾಗಿ ಕಾಯ್ದೆಗಳೆಲ್ಲ ಸುಂದಾಗಿ ನೆಲಕಚ್ಚಿವೆ.

ಒಂದು ಹೆಣ್ಣು ಈ ವ್ಯವಸ್ಥೆಯಲ್ಲಿ ಹೇಗೆ ಶೋಷಣೆಗೆ ಒಳಗಾಗುತ್ತಾಳೆ ಎನ್ನುವುದನ್ನು ಅತ್ಯಂತ ಹೃದಯಂಗಮವಾಗಿ ಹಸಿಮಾಂಸ ಮತ್ತು ಹದ್ದುಗಳಲ್ಲಿ ಚಿತ್ರಿಸಿದ್ದಾರೆ. ತಾಳ್ಮೆಗೂ ಒಂದು ಮೇರೆ ಇರುತ್ತದೆ ಆ ಮೇರೆ ಮೀರಿರುವ ಹಾಗೇ ಹಿಂಸಿಸಿದ್ದರೆ ಕ್ಷಮಯಾಧರಿಯತ್ರಿಯಾಗಿ ಉಳಿಯಲು ಹೆಣ್ಣಿನಿಂದ ಅಷ್ಟೇ ಅಲ್ಲ ಪ್ರಾಣಿಯಿಂದಲೂ ಸಾಧ್ಯವಿಲ್ಲ. ಆದರೂ ನಮ್ಮ ಮಹಿಳೆಯರು ಸಾಧ್ಯವಾಗಿಸಿಕೊಂಡು ಬಂದಿದ್ದಾರೆ ಇದರ ಹಿಂದೆ ಶತಮಾನಗಳಿಂದ ಎತ್ತಿದ ಬಡಿಗೆಯ ಸಂಸ್ಕೃತಿಯ ಹೆದರಿಕೆಯು ಒತ್ತಡವಿವೆ.

ಈ ಕಾದಂಬರಿಯ ನಾಯಕಿ ಎಲ್ಲ ಹಂತಗಳಲ್ಲಿಯೂ ಗಂಡಿನಿಂದ ಶೋಷಣೆಗೆ ಒಳಗಾಗಿ ಕೊನೆಗೆ ಗಂಡು ಸಂತತಿಯ ಬಗ್ಗೆಯೇ ಜಿಗುಪ್ಸೆಗೊಂಡು ಸ್ಫೋಟಿಸುತ್ತಾಳೆ ತನ್ನ ಮಗುವನ್ನೇ ಗಂಡು ಎನ್ನುವ ಕಾರಣಕ್ಕೆ ಕೊಲ್ಲಲು ಮುಂದಾಗಿ ತಾನು ಆತ್ಮಹತ್ಯೆಗೆ ಕೈಹಾಕುತ್ತಾಳೆ ಇಂತಹುದನ್ನೆಲ್ಲಾ ಮಾಡಿಸಿದ್ದು ಯಾರು? ಇನ್ನಾದರೂ ಸಮಾಜ ಅರ್ಥ ಮಾಡಿಕೊಳ್ಳಬೇಕಾಗಿದೆ. ಕಣ್ಣುತೆರೆಯಬೇಕಾಗಿದೆ.

"ಮಾಪುರ ತಾಯಿ ಮಕ್ಕಳು" ದಲಿತ ಲೋಕವನ್ನು ತೆರೆದಿಟ್ಟು ತೋರಿಸಿದ ಕೃತಿಯಿದು ಸಂಪ್ರದಾಯ, ದೇವರು, ಧರ್ಮದ ಹೆಸರಿನಲ್ಲಿ ಮೇಲು ಜಾತಿಯ ತಲೆಹಿಡುಕ ಗಂಡಸರು ಕೆಳವರ್ಗದ, ಜಾತಿಯ ಜನರನ್ನು ಎಳೆ ಎಳೆ ಬಿಚ್ಚಿ ತೋರಿಸಿದ್ದಾರೆ. ಹಣ ಬಲದ ಮುಂದೆ ಎಲ್ಲವೂ ಹೇಗೆ ನೆಲ ಕಚ್ಚುತ್ತದೆ ಎಂಬುದನ್ನು ತೋರಿಸಲಾಗಿದೆ.

ಸಾಮಾಜಿಕವಾಗಿಯಷ್ಟೇ ಹೆಣ್ಣು-ಗಂಡೆಂಬ ಭೇಧ ಮಾಡಲಾಗಿಲ್ಲ, ಭಾವ ಭಾಷೆಗಳಲ್ಲಿಯೂ ಈ ಭೇದವನ್ನು ಹುಟ್ಟು ಹಾಕಿದ್ದಾರೆ. ಗಂಡಸರ ಭಾಷೆಗೂ ಹೆಣ್ಣಿನ ಭಾಷೆಗೂ ವ್ಯವಸ್ಥೆಗೆರೆ ಕೊರೆದಿವೆ. ಗಂಡಸರ ಹಾಗೆ ಹೆಂಗಸರು ಭಾಷೆ ಬಳಸಿದರೆ, ಹುಬ್ಬೇರಿಸುತ್ತಾರೆ. ಕಣ್ಣು ಕೆಂಪುಗೊಳಿಸುತ್ತಾರೆ. ಅದೇ ರೀತಿ ಹೆಂಗಸರ ಹಾಗೆ ಗಂಡಸರು ಮಾತನಾಡುವಂತಿಲ್ಲ. ಅಪರಾಧವೆಂದು ಪರಿಗಣಿಸದಿದ್ದರೂ ಅವ ಹಾಸ್ಯ ಮಾಡುತ್ತಾರೆ. ಇಂತಹ ಭಾಷಿಕ ಮಡಿವಂತಿಕೆಯನ್ನು ಮೀರಿ ವಸ್ತು ಸತ್ಯವನ್ನು ಕಾದಂಬರಿಗಳಲ್ಲಿ ಹೊರಹಾಕಿದ್ದಾರೆ.

ದುಡಿಯುವ ಕೆಳವರ್ಗದ ಮಹಿಳೆಯರ ಪುರುಷರ ಭಾಷೆ. ಭಾವನೆಗಳು ಅತ್ಯಂತ ನಿಸರ್ಗ ಸಹಜವಾದದ್ದು, ಯಾವುದೆ ಗಿಲೀಟಿಲ್ಲದ ಫಳಫಳನೆ ಹೊಳೆಯುವಂತಹುದ್ದು ಇಂತಹ ಹೊಳಪಿಗೆ ಕಣ್ಣು ಒಡ್ಡುವ ಸಾಮರ್ಥ್ಯವಿಲ್ಲದ ಧೃತರಾಷ್ಟ್ರ

ಸಂತತಿ ಮೂಗು ಮುರಿಯುತ್ತದೆ, ಸಂಪ್ರದಾಯದ ಹಡಬೆತನದ ಹಿಂದೆ ತನ್ನನ್ನೂ ತಾನು ಮೋಸಗೊಳಿಸಿಕೊಳ್ಳುತ್ತದೆ.

ಗೀತಾನಾಗಭೂಷಣರ ಕಾದಂಬರಿಗಳನ್ನು ಎರಡು ನಿಟ್ಟಿನಲ್ಲಿ ನೋಡಬಹುದು. ಒಂದು ಜನಪ್ರಿಯ ಬರಹಗಾರ್ತಿಯಾಗಿ ಮಧ್ಯಮ ವರ್ಗಕ್ಕೆ ಬೇಕಾದ ಬಣ್ಣದ ಲೋಕ ಭ್ರಮೆಗಳನ್ನೆಲ್ಲಾ ಸಮರ್ಥವಾಗಿ ಒದಗಿಸುವ, ಪರಿಚಯಿಸುವ ಹಾಗೂ ಜನಪರವಾಗಿ, ದುಡಿಯುವ. ದಲಿತ ಬದುಕಿನ ಬಗ್ಗೆ ಚಿಂತನ ಪರತೆಯನ್ನುಂಟು ಮಾಡುವ ಕೃತಿಗಳೆಂದು ಎರಡನ್ನು ಸಮರ್ಥವಾಗಿ ಕಾಯ್ದುಕೊಂಡು ಹೋಗಿದ್ದಾರೆ.

ಪ್ರಬಂಧದ ಪ್ರಾರಂಭದಲ್ಲಿಯೇ ಸ್ಪಷ್ಟ ಪಡಿಸಿದಂತೆ ಅಖಿಲ ಕರ್ನಾಟಕ ಮಟ್ಟದಲ್ಲಿ ಕಲಬುರ್ಗಿಯನ್ನು ಪ್ರತಿನಿಧಿಸುವವರು ಕೆಲವೆ ಕೆಲವು ಜನರಿದ್ದರೂ, ಕಲಬುರ್ಗಿಯ ಸಾಹಿತ್ಯದ ಹೊಳೆಗೆ ಎಲ್ಲರೂ ಝರಿಗಳೇ, ಒಂದಿಲ್ಲ ಒಂದು ವೈಶಿಷ್ಟತೆಯಿಂದ ಆರ್ದ್ರತೆಯನ್ನು ಪಸರುತ್ತಲೇ ಮುಂದೆ ಅಖಿಲ ಕರ್ನಾಟಕದ ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಸೇರಲು ಸಿದ್ಧತೆಯನ್ನೂ, ತಾಲೀಮನ್ನೂ ನಡೆಸಿದವರೆನ್ನಬಹುದು. ವ್ಯಾಪ್ತಿತಕ್ಕೆಗೆ ಒಗ್ಗದೆ ಹೋಗಿರುವುದರಿಂದ ಹಲವಾರು ಜನರು, ಕೃತಿಗಳು ಜಾರಿರುವ ಸಾಧ್ಯತೆಗಳಿವೆ ಅದು ನನ್ನ ಮಿತಿಯೆಂದು ನಮ್ರವಾಗಿ ಒಪ್ಪಿಕೊಳ್ಳುವೆ.

– ಡಾ|| ಮಲ್ಲಿಕಾ ಘಂಟಿ
ಕನ್ನಡ ಅಧ್ಯಯನ ಸಂಸ್ಥೆ, ಗು. ವಿ. ಗು.

ಗ್ರಂಥ ಋಣ

1) ಗಾಂಧಾರಿಯ ಕರುಣೆ – ವಸಂತ ಕುಷ್ಟಗಿ. ಪುಟ - 1
2) " " – " " ಪುಟ - 18
3) ಹತ್ತರ ಕೂಡ ಹನ್ನೊಂದು – ಶಿವಶರಣ ಜಾವಳಿ ಪುಟ – 19
4) ಕಾಮಧೇನುವಿನ ಧಾರೆಗಳು – " " ಪುಟ – 14
5) ಆಯ್ದ ಕವನಗಳು–ಸಂ. ಚೆನ್ನಣ್ಣ ವಾಲೀಕಾರ, ಬಸವರಾಜ ಸಬರದ
6) ,, ,, ,, ,, ,, ,, ,,
7) ಬಂಡಾಯ ಕಾವ್ಯ–ಸಂ. ಬರಗೂರು ರಾಮಚಂದ್ರಪ್ಪ ಪುಟ - 9
8) ,, ,, ,, ,, ,, ಪುಟ - 13
9) ಕರಿತೆಲಿ ಮಾನವನ ಜೀಪದ — ಚೆನ್ನಣ್ಣವಾಲೀಕಾರ
10) ಪ್ಯಾಂಥರ್ ಪದ್ಯಗಳು — ಚೆನ್ನಣ್ಣ ವಾಲೀಕಾರ
11) ಕಾಶಿಯಲ್ಲಿ ಕಂಡಿದ್ದೇನು - ಸರಿತಾ ಕುಸುಮಾಕರದೇಸಾಯಿ (ಮುನ್ನುಡಿಯಿಂದ)
12) ಜಯತೀರ್ಥ ರಾಜಪುರೋಹಿತರ ಅಭಿನಂದನ ಗ್ರಂಥ ಸಿ. ಕೆ. ನಾ. ಪುಟ - 115

ನಿರಂಜನರ ಕತೆಗಳಲ್ಲಿ ವಸ್ತು ಮತ್ತು ತಂತ್ರ*

ಆರ್. ಜಿ. ಹಳ್ಳಿನಾಗರಾಜ

ಮಾರ್ಕ್‌ಶೋರರ್ ಎಂಬ ವಿಮರ್ಶಕ "Technique as Discovery" ಎಂಬ ಲೇಖನದಲ್ಲಿ ಕಥೆ/ಕಾದಂಬರಿಗಳ "ವಸ್ತು ಮತ್ತು ತಂತ್ರ" ಎರಡೂ ಒಂದೇ ಎಂದು ಅಭಿಪ್ರಾಯಿಸುತ್ತಾನೆ. ಅವನ ಪ್ರಕಾರ,

1) ತಂತ್ರವೆಂದರೆ ಲೇಖಕನ ಸಾಮಗ್ರಿಯಾದ ಅನುಭವ, ತನ್ನ ಬಗ್ಗೆ ಸರಿಯಾಗಿ ಗಮನ ಕೊಡಲು ಅವನನ್ನು ಒತ್ತಾಯಿಸುವ ಸಾಧನ,
2) ತಂತ್ರವೆಂದರೆ ಲೇಖಕನಿಗೆ ತನ್ನ ವಸ್ತುವನ್ನು ಅನಾವರಣಗೊಳಿಸಲು, ಶೋಧಿಸಲು, ವಿಕಾಸಗೊಳಿಸಲು, ಅದರ ಅರ್ಥವನ್ನು ಸೂಚಿಸಲು ಹಾಗೂ ವಸ್ತುವನ್ನು ಬೆಲೆ ಕಟ್ಟಲು ಇರುವ ಏಕ ಮಾತ್ರ ಸಾಧನ.

ಇದರಿಂದ ವಸ್ತು ಮತ್ತು ಧೋರಣೆಗಳಿಂದ ತಂತ್ರವನ್ನು ಬೇರ್ಪಡಿಸಲು ಆಗುವುದಿಲ್ಲ ಎಂದು ಹೇಳಬಹುದಾದರೂ, ಇದೇ ಕಾರಣಕ್ಕಾಗಿ, ಒಂದು ಕೃತಿಯ ವಸ್ತುವಿನ ವಿಶ್ಲೇಷಣೆ ಅದರ ತಂತ್ರದ ವಿಶ್ಲೇಷಣೆಯೇ ಆಗಬೇಕಾಗುತ್ತದೆ ಎಂದೂ ಅಭಿಪ್ರಾಯಿಸಬಹುದಾಗಿದೆ.

ವಸ್ತು ಮತ್ತು ತಂತ್ರಕ್ಕೆ ಕೊಂಡಿಯಾದ ಸಾಹಿತ್ಯದ "ವಸ್ತುವೇ" ಜೀವನ ಹಾಗೂ ಅನುಭವ. ಇಲ್ಲಿ ಜೀವನವೆಂದರೆ ಏನು ಎಂಬ ಪ್ರಶ್ನೆಯೊಂದಿಗೆ ಹತ್ತೆಂಟು ಉತ್ತರಗಳ ಬೆನ್ನು ಕಾಣತೊಡಗುತ್ತದೆ. ಪಾಶವೀ ಪ್ರವೃತ್ತಿಯಿಂದ ಹಿಡಿದು, ಆಧ್ಯಾತ್ಮ ವಿಚಾರ ಒಳಗೊಂಡು ಮಾನವೀಯ ಅನುಕಂಪದ ಬದುಕಿನ ವರೆಗೆ ಜೀವನದ ಅರ್ಥವನ್ನು ಹಿಗ್ಗಿಸಬಹುದು. ಕೆಲವು ಸಂದರ್ಭಗಳಲ್ಲಿ ಬರೀ

---

*ಕರ್ನಾಟಕ ಸಾಹಿತ್ಯ ಅಕಾದೆಮಿ ಆಶ್ರಯದಲ್ಲಿ ದಾವಣಗೆರೆಯಲ್ಲಿ ನಡೆದ "ನಿರಂಜನ ಸಾಹಿತ್ಯ" ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಜೀವನವೇ ಸಾಹಿತ್ಯದ ವಸ್ತು ಎಂದೂ ಹೇಳಲಾಗದು. ಆದರೆ ಈ ಅನುಭವವು ಜೀವನವನ್ನು ನಿಕಟವಾಗಿ, ಮೂರ್ತವಾಗಿ ಅರಿಯಲು ಸಹಾಯ ಮಾಡುತ್ತದೆ. ಇಲ್ಲಿ ಜೀವನಾನುಭವ ಏಕ ಮುಖವಾಗಿದ್ದೂ ಸಾರ್ವತ್ರಿಕ ಬದುಕಿಗೆ ಸ್ಪಂದಿಸಿದ ರೀತಿ ಒಟ್ಟುಗೂಡಿದಾಗ ಅದಕ್ಕೊಂದು ಅರ್ಥ ಬರುತ್ತದೆ. ಇಂಥಲ್ಲಿ ಬದುಕಿನ ಅನುಭವ ಕತೆಯ ವಸ್ತುವಾದಾಗ ನಿರೂಪಣಾ ವಿಧಾನದಲ್ಲಿ, ಅದನ್ನು ಸಂಘಟಿಸುವ ವಿಧಾನದಲ್ಲಿ ಹಾಗೂ ಅದನ್ನು ಕುತೂಹಲ ಕೆರಳಿಸುವಂತೆ ಹೇಳುವಲ್ಲಿ ಪಾತ್ರಗಳ ಪರಸ್ಪರ ಸಂಬಂಧ–ಬೆಳವಣಿಗೆ–ಉದ್ದೇಶಗಳನ್ನು ಆಕರ್ಷಕವಾಗಿ ನಿರೂಪಿಸುವ ಬುದ್ಧಿವಂತಿಕೆಯನ್ನೊಳಗೊಂಡ ಸನ್ನಿವೇಶವನ್ನು ಕಥಾ ಸಂವಿಧಾನದ ತಂತ್ರವೆಂದೂ ಕರೆಯಲಾಗುತ್ತದೆ. ಆಗ ಕೃತಿಯ ಯಶಸ್ಸು ಕಥೆಯ ತಾಂತ್ರಿಕ ಸಂಬಂಧದಿಂದಲೂ ಗಟ್ಟಿಯಾಗಬಹುದು. ಏಕೆಂದರೆ ಸಮರ್ಥವಾದ ತಂತ್ರವೊಂದು ಸೂಕ್ಷ್ಮವಾದ ವಸ್ತುವನ್ನು ಆಶ್ವಾದಿಸುತ್ತದೆ. ಇದೇ ಸಂದರ್ಭದಲ್ಲಿ ಕೃತಿಯೊಂದರ ತಂತ್ರ ಕೃತಕವೆಂದು ತೋರಿದಾಗ, ಅದು ಬಾಲಿಶ ಅನಿಸಿದಾಗ ಆಗ ಕೃತಿಯ ವಸ್ತು ಹಾಗೂ ಧೋರಣೆಗಳ ಕುರಿತು ನಿರ್ಣಯಕ್ಕೆ ಬರಬಹುದು.

ನಿರ್ಣಯ ಏನೇ ಇದ್ದರೂ ಒಂದು ವಿಶಿಷ್ಟ ಧೋರಣೆಯ ಸಲುವಾಗಿ ಒಂದು ವಿಶಿಷ್ಟ ತಂತ್ರ ಹುಟ್ಟಿಕೊಂಡಿರುವುದರಿಂದ ವಸ್ತುವಿನಿಂದ ತಂತ್ರವನ್ನಷ್ಟೇ ಬೇರ್ಪಡಿಸಿ ಕಥಾ ಸಂವಿಧಾನದ ಬಗ್ಗೆ ಯೋಚಿಸಲಾಗುವುದಿಲ್ಲ.

ವಸ್ತು ಮತ್ತು ತಂತ್ರದ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿ ನಮಗೆ ನೀಡುವುದು ಮಹತ್ವಪೂರ್ಣವಾದ ಹಾಗೂ ಅರ್ಥಪೂರ್ಣವಾದ ಅನುಭವ ಎಂಬುದನ್ನು ಅಲ್ಲಗಳೆಯಲಾಗದು.

ಮೇಲಿನ ಪೀಠಿಕೆಯ ಮಾತುಗಳು ಕಥಾ ಸಾಹಿತ್ಯದ ವಸ್ತು–ತಂತ್ರದ ಬಗೆಗಿನ ಅರ್ಥವ್ಯಾಪ್ತಿಯ ಸೀಳು ನೋಟವನ್ನು ಹೇಳುವುದಾದರೂ, ಕನ್ನಡ ಸಾಹಿತ್ಯದಲ್ಲಿ ಗಮನಾರ್ಹ ಸಾಹಿತ್ಯ ಕೃಷಿ ಮಾಡಿದ ನಿರಂಜನರ ಸಣ್ಣ ಕತೆಗಳ ಕೋಟೆ ಪ್ರವೇಶಿಸಲು ಇದು ಸಹಕಾರಿ ಆಗುತ್ತದೆಂದು ಭಾವಿಸಬಹುದು.

ಕತೆಗಾರ, ಕಾದಂಬರಿಕಾರ, ಪತ್ರಕರ್ತ, ಅಂಕಣಕಾರ, ಸಂಪಾದಕ ಇವೆಲ್ಲವೂ ಒಬ್ಬ ವ್ಯಕ್ತಿಯಲ್ಲಿ ಮೇಳೈಸಿದಾಗ ಸಾಹಿತ್ಯ ಪ್ರಕಾರವೊಂದರ "ನೆಲೆ" ಕಂಡುಕೊಳ್ಳುವುದು ಹೇಗೆಂಬ "ಜಿಜ್ಞಾಸೆ" ನನಗೆ ಕಾಡಿದೆ. "ನೆಲೆ", "ಇದೇ" ಎಂದು ಒಂದು ಪ್ರಕಾರ ಬೆರಳು ಮಾಡಿ ತೋರಿಸಿದಾಗಲೂ ಆ ಒಂದು ಪ್ರಕಾರ ಬಿಟ್ಟು ಇತರೆ ಪ್ರಕಾರಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ, ವಸ್ತು, ಭಾಷೆ ಹಾಗೂ ಶೈಲಿಯಿಂದಾಗಿ ತನ್ನ ಛಾಪನ್ನು ಒತ್ತಿಕೊಳ್ಳುವ ಬರಹಗಾರ ತನ್ನ ನಂಬಿಕೆಯ

ವಿಚಾರಗಳನ್ನು ಸ್ಪಷ್ಟವಾಗಿ ಗುರ್ತಿಸಿಕೊಳ್ಳಬಹುದು. ವಿಚಾರ ಸಿದ್ಧಾಂತಗಳು ಏಕ ಕಾಲಕ್ಕೂ ಕಾರ್ಯ ನಿರ್ವಹಿಸುವುದರಿಂದ ಬರಹಗಾರನ ಮೇಲೆ ಅವುಗಳ ಹಿಡಿತ ಇದ್ದೇ ಇರುತ್ತದೆ. ಬರಹಗಾರನ ವಿಚಾರಗಳು ಆತ ಬದುಕನ್ನು ಸ್ವೀಕರಿಸಿದ ರೀತಿಯಲ್ಲಿ ಕಾರ್ಯ ಪ್ರವೃತ್ತವಾಗುವುದರಿಂದ ಇಲ್ಲಿ "ಸೈದ್ಧಾಂತಿಕತೆ" ಪ್ರಮುಖ ಪಾತ್ರ ವಹಿಸುತ್ತದೆ. ಈ ಸೈದ್ಧಾಂತಿಕತೆಯೇ ಬದ್ಧ ಸಾಹಿತ್ಯ ನಿರ್ಮಿತಿಗೂ ದಾರಿ ಮಾಡಿ ಕೊಡುವುದರಿಂದ ಸಾಹಿತ್ಯ-ಸಮಾಜ-ಸಂಸ್ಕೃತಿ ಇವುಗಳ ಸಂಕೀರ್ಣ ಸಂಬಂಧವನ್ನು ಅರಿಯಲು ಸಮಾಜಶಾಸ್ತ್ರೀಯ ದೃಷ್ಟಿ ಬೆಳೆಸಿಕೊಳ್ಳಬೇಕಾಗುತ್ತದೆ.

ಇಂಥ ಸಮಾಜಶಾಸ್ತ್ರೀಯ ದೃಷ್ಟಿಯನ್ನಿಟ್ಟುಕೊಂಡ ಬರಹಗಳನ್ನು ನಿರಂಜನರ ಬರಹಗಳಲ್ಲಿ ಕಾಣಬಹುದು.

ಪ್ರಗತಿಶೀಲ ಸಾಹಿತ್ಯದ ಬಹು ಮುಖ್ಯ ಕೊಂಡಿಯಾಗಿದ್ದ ನಿರಂಜನರ ಬದುಕು - ಬರಹ ಹೋರಾಟದಿಂದ ಕೂಡಿತ್ತು. ಬಾಲ್ಯವನ್ನು ವಿಚಿತ್ರ ಸಾಮಾಜಿಕ ಸಂದರ್ಭದ ಒತ್ತಡದಲ್ಲಿ ಕಳೆದ "ಕುಳಕುಂದ ಶಿವರಾಯ", "ಕಿಶೋರ" ನಾಗಿ ಮುಂದೆ "ನಿರಂಜನ" ಆದದ್ದು ಕುತೂಹಲಕರವಾದದ್ದು, ಹದಿಮೂರನೇ ವಯಸ್ಸಿನಲ್ಲೇ ಕಥಾಲೋಕ ಪ್ರವೇಶಿಸಿದ ನಿರಂಜನರು, ೧೭ನೇ ವಯಸ್ಸಿಗೆ ಪತ್ರಕರ್ತರಾಗಿ, ೨೪ ನೇ ವಯಸ್ಸಿಗೆ ಯೌವ್ವನಿಗರಾಗಿದ್ದಾಗ ಎಡಪಂಥೀಯ ವಿಚಾರಕ್ಕೆ ಮನಸೋತು ಬರಹಗಳಲ್ಲಿ ಸಾಮಾಜಿಕ ಅಸಮಾನತೆ, ಕ್ರೌರ್ಯ, ದಬ್ಬಾಳಿಕೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸತೊಡಗಿ ಮೂರು ಹಂತಗಳಲ್ಲಿ ತಮ್ಮ ಕಥಾ ಸಾಹಿತ್ಯದ ಬೆಳವಣಿಗೆಗಳನ್ನು ಗುರ್ತಿಸಿಕೊಂಡಿದ್ದಾರೆ.

ಹುಡುಗನಾಗಿದ್ದಾಗಿನ ತಮ್ಮ ಪರಿಸರದ ಘಟನೆಗಳಿಗೆ ಸಹಜವಾಗಿ ಸ್ಪಂದಿಸಿ, ತಂದೆಯಿಲ್ಲದ ತಬ್ಬಲಿ ಹುಡುಗನ ಅಸಹಾಯಕತೆ, ಬಡ ವಿಧವೆ ತಾಯಿಯ ಕಷ್ಟ ಕಾರ್ಪಣ್ಯಗಳನ್ನು. ಅವಳ ತಳಮಳಗಳನ್ನು ಹಲವಾರು ಕತೆಗಳಿಗೆ ಗ್ರಾಸ ಮಾಡಿಕೊಂಡಿದ್ದಾರೆ. ಇದಕ್ಕೆ ಉದಾ: ಒಂದು ಹಿಡಿಹುಲ್ಲು, ಬಹಿಷ್ಕೃತೆ, ಮೂರು ದುಡ್ಡು ಇತ್ಯಾದಿ, ಈ ಕತೆಗಳಲ್ಲೆಲ್ಲಾ ನಿರಂಜನರ ವೈಯಕ್ತಿಕ ಬದುಕಿನ ಆಗು-ಹೋಗುಗಳೇ ಸಂಚಾರಿ ಭಾವವಾಗಿ ಕೆಲಸ ಮಾಡಿವೆ. ಒಂದು ರೀತಿಯ ಆತ್ಮ ಚರಿತ್ರೆಯನ್ನೇ ಇಲ್ಲಿ ಹುಡುಕಬಹುದಾಗಿದೆ.

ಬಾಲ್ಯದ ಕತೆಗಳು ಎಲ್ಲೋ ಹರಿದು-ಹಂಚಿ ಹೋಗಿದೆಯೆಂದು "ಧ್ವನಿ" ಮೊದಲ ಸಂಪುಟದ ಸ್ವಗತದಲ್ಲಿ ನಿರಂಜನರೇ ಹೇಳಿಕೊಂಡಿದ್ದಾರೆ. ಸುಮಾರು

ಇನ್ನೂರರ ಹತ್ತಿರ ಅವರು ಕತೆಗಳನ್ನು ಬರೆದಿದ್ದರೂ "ಧ್ವನಿ" ಸಂಪುಟ 1 ಹಾಗೂ 2 ರಲ್ಲಿ ನೂರೈವತ್ತಕ್ಕೂ ಮಿಕ್ಕಿ ಕತೆಗಳಿವೆ, ಇದರಲ್ಲಿ ಸೇರ್ಪಡೆ ಆಗಿರುವ ಕತೆಗಳ ಹುಟ್ಟು, ಸಂದರ್ಭಗಳಿನ್ನು ಆರಂಭದಲ್ಲೆ ತಮ್ಮ ಜ್ಞಾಪಕದಿಂದ ೧೯೮೭ ರಲ್ಲೇ (ಪಾರ್ಶ್ವವಾಯುವಿಗೆ ತುತ್ತಾದದ್ದು ೧೯೭೧: ದೇಹದ ಒಂದು ಪಾರ್ಶ್ವ ಅಸ್ತಿತ್ವ ಕಳೆದುಕೊಂಡಿತ್ತೇ ವಿನ: ನೆನಪಿಗೆ ಧಕ್ಕೆ ಆಗಿರಲಿಲ್ಲ) ಬರೆದಿದ್ದಾರೆ. ಕತೆಯ ಆರಂಭದಲ್ಲೇ ಕತೆಯೊಂದರ ಹುಟ್ಟು, ಸಂದರ್ಭ, ಬೆಳವಣಿಗೆಗಳ ಬಗ್ಗೆ ಹೇಳಿದಾಗ ಇಂಥ ವಿವರವೊಂದು ಕತೆಯ ಓದುಗ/ವಿಮರ್ಶಕನಿಗೆ ಅಗತ್ಯವೆ ? ಎಂಬ ಪ್ರಶ್ನೆಯ ಜೊತೆಯಲ್ಲೇ ಓದುಗನಿಗೆ ಬೇರೆ ಬೇರೆ ನೆಲೆಯಲ್ಲಿ ಆಲೋಚಿಸಲು ಸಹಾಯಕವಾಗಬಲ್ಲದೆ ? ಎಂದು ಚಿಂತಿಸಬೇಕಿದೆ.

ಮುಖ್ಯವಾಗಿ ಸ್ವಾತಂತ್ರ್ಯ ಚಳುವಳಿಯ ಹೋರಾಟ ಹಾಗೂ ನವೋದಯ ಸಾಹಿತ್ಯದ ಉಚ್ಛ್ರಾಯ ಸ್ಥಿತಿಯಲ್ಲೇ ಆದರ್ಶದ, ಕನಸಿನ ಫಲ ಪಡೆಯಲು ಹೊರಟ ನಿರಂಜನ ಗುರ್ತಿಸಿಕೊಂಡದ್ದು ಪ್ರಗತಿಶೀಲರಾಗಿ. ತಾತ್ವಿಕ ಪ್ರಣಾಳಿಕೆಯನ್ನು ಪ್ರಗತಿಶೀಲ ಬರಹಗಾರರು ಕತೆ ಕಾದಂಬರಿಗಳಲ್ಲಿ ತರುವುದರ ಮೂಲಕ ಮಧ್ಯಮ ವರ್ಗದ ಜೀವನಾನುಭವಕ್ಕೆ ಆಪ್ತವಾದವರು. ಇದಕ್ಕೂ ಸಾಮಾಜಿಕ ಚಾರಿತ್ರಿಕ ಒತ್ತಡವಿದೆ. ಒಟ್ಟನಲ್ಲಿ ಪ್ರಗತಿಶೀಲ ಬರಹದ ತಾತ್ವಿಕ ನಂಬಿಕೆಗಳು ಕೃತಿಯಲ್ಲಿ ಮೂರ್ತರೂಪ ಪಡೆದಿವೆ ಎಂಬುದೂ ಸತ್ಯ, ಈ ತಾತ್ವಿಕತೆಯಲ್ಲಿ ಕ್ರಾಂತಿಯ ಹಂಬಲವಿಟ್ಟುಕೊಂಡು ಆರಂಭದಲ್ಲಿ ಬರೆದ ಕತೆಗಳಲ್ಲಿ "ರಕ್ತ ಸರೋವರ", "ಬೆಳಕು ಹರಿಯಿತು", "ಎಣ್ಣೆ, ಚಿಮಣಿ ಎಣ್ಣೆ" ಮುಂತಾದುವು.

೧೯೪೬ ರಲ್ಲಿ ಬರೆದ "ರಕ್ತ ಸರೋವರ" ಕತೆಗೆ ಎಡಪಂಥೀಯ, ಕ್ರಾಂತಿಕಾರಕ ಬದಲಾವಣೆಯ ಹುಮ್ಮಸ್ಸಿನ ಮನಸ್ಸು ನಿಚ್ಚಳವಾಗಿ ಕೆಲಸ ಮಾಡಿರುವುದನ್ನು ಗುರ್ತಿಸಬಹುದು, "ರಕ್ತ ಸರೋವರ" ದ ಶೀರ್ಷಿಕೆಯೇ ದುರಂತ ಸೂಚನೆಯ ಹಾಗೂ ಹೋರಾಟ ಕುರಿತ ವಸ್ತುವನ್ನು ಹೇಳುವಂತಿದೆ. ಸರೋವರದ ಪ್ರಶಾಂತತೆಗೆ ರಕ್ತದೋಕುಳಿ ಚೆಲ್ಲಿ ದುರಂತವನ್ನು ಹೇಳುವಲ್ಲಿನ ಈ ಶೀರ್ಷಿಕೆ ಇವೊತ್ತು ಕಾಶ್ಮೀರದಲ್ಲಿ ತಲ್ಲಣಗೊಂಡ "ದಲ್ ಸರೋವರ" ದ ವಸ್ತುಸ್ಥಿತಿಯ ದುರಂತವನ್ನೇ ಹೇಳುತ್ತದೆ. ಹಿಂಸೆಯ ರೂಪು ತಾಳಿದ್ದ ಸಂದರ್ಭ "ದಲ್"ನ ದಡದಲ್ಲಿ ಬಿದ್ದಿದ್ದ ಹೆಣಗಳ ರಾಶಿಯಿಂದ ಬೆಚ್ಚಿ ಬೀಳುವಂತೆ ಮಾಡಿ ಸರೋವರವೇ ರಕ್ತದೋಕುಳಿಯಾದ ಚಿತ್ರಣವನ್ನು ಕೊಡುವಲ್ಲಿ ಕವಿತೆಯೊಂದರ ಗಂಭೀರತೆಯನ್ನು, ರುದ್ರರಮಣೀಯ ಭೀಕರತೆಯನ್ನು ನೆನಪಿಸುತ್ತವೆ.

ಕಾವ್ಯಕ್ಕಿರುವ ಲಯ, ಪದ ಪ್ರಯೋಗ, ವಾಕ್ಯ ಸಂಕ್ಷಿಪ್ತತೆ ಈ ಕತೆಯಲ್ಲಿ ಆರಂಭದಿಂದ ಅಂತ್ಯದವರೆಗೂ ಗೋಚರಿಸುತ್ತದೆ. ತುಂಡರಿಸಿದ ಪದ ಪ್ರಯೋಗ ದಿಂದಾಗಿ ವಸ್ತುವಿಗೆ, ವಿನ್ಯಾಸಕ್ಕೆ ಎಲ್ಲೂ ಧಕ್ಕೆ ಬಾರದೆ ಕಥೆ ಪ್ಲ್ಯಾಷ್ ಬ್ಯಾಕ್‌ನಲ್ಲಿ ನಡೆದು ತಂತ್ರಗಾರಿಕೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. "ಇನ್ನಿಲ್ಲದ 'ಶೇಕ್'ನಿಗೆ ಗಾಳಿ ಮೆಲ್ಲ ಮೆಲ್ಲನೆ ತಟಕಾದ (ದೋಣಿಯ) ಮೇಲ್ಲಿಂದ ಬೀಸುತ್ತಿತ್ತು "ವಿಹಾರ ಸರೋವರ" ರಕ್ತ ಸರೋವರವಾಗಿ ರುದ್ರಭೀಕರವಾಗಿತ್ತು" ಎಂದು ಅಂತ್ಯವಾಗುವಾಗಲೂ ಮನಸ್ಸನ್ನು ಗಲಿಬಿಲಿಯಾಗಿಸುತ್ತದೆ.

ಕ್ರಾಂತಿಯ ಹುನ್ನಾರಿಗೆ ಹಲವಾರು ಉದಾಹರಣೆಯಾಗುವ ಕಥೆಗಳು ನಿರಂಜನರ 17-32 ರ ವಯಸ್ಸಿನ ಅಂತರದಲ್ಲಿ ಹುಟ್ಟಿದವುಗಳಾಗಿರುವುದರಿಂದ ಬಹುಶ: ಅವರು ತೊಡಗಿಸಿಕೊಂಡಿದ್ದ ಎಡಪಂಥೀಯ ಧೋರಣೆಯ ಪ್ರಭಾವವು ಇಲ್ಲಿ ಕಾರಣ ಇದ್ದಿರಬಹುದಾಗಿದೆ. ಗುಣಾತ್ಮಕ ಕತೆಯ ಬೆಳವಣಿಗೆಯ ಪ್ರಬುದ್ಧ ಕತೆಗಳಲ್ಲಿ "ಕೊನೆಯಗಿರಾಕಿ 'ಧ್ವನಿ' ಒಂಟಿ ನಕ್ಷತ್ರ ನಕ್ಕಿತು, ನಾಸ್ತಿಕಕೊಟ್ಟ ದೇವರು ಮುಖ್ಯವಾಗುತ್ತವೆ. ಈ ಕತೆಗಳಲ್ಲಿ ನಿರಂಜನರು ಮಾಡಿರುವ ಪ್ರಯೋಗ ಕೂಡ ವಿಶಿಷ್ಟವಾದದ್ದು. ವಸ್ತು ನಮ್ಮೆದುರೇ ಸುಳಿವಂತಾದರೂ ಕಂಡ ರೀತಿ, ಬರಹ ಓಡಿದ ರೀತಿಯಲ್ಲಿ ತಂತ್ರದ ಕುಶಲತೆ ಗಮನಾರ್ಹವಾಗಿದೆ".

"ಕರಾಕ ಅ ಅ ಅ" ಎಂಬ ಸಾಂಕೇತಿಕತೆಯ ಅಕ್ಷರಗಳ ದನಿಯಲ್ಲಿ ಮೂಕ ವೇದನೆ ಅನುಭವಿಸುವ "ಕಾಣಿ"ಯ ದುರಂತ ಕತೆ "ಕೊನೆಯ ಗಿರಾಕಿ" ವ್ಯವಸ್ಥೆಯ ಕ್ರೂರ ದಬ್ಬಾಳಿಕೆ ಚಿತ್ರಿಸುವಲ್ಲಿ ಸಂಕಟ ತೋರುವ ಈ ಕತೆ ನಿರಂತರ ಶೋಷಣೆಯ ಸಂಕೇತವಾಗಿದೆ. ಕೈ ಮೊಂಡಾದನೊಬ್ಬನ "ಸಂಗಾತಿ"ಯಾಗಿದ್ದ ಕಾಣಿ. ಅವನ ಮಾಯವಾಗುವಿಕೆ ನಂತರ, ಸಮಾಜದ ದುರ್ಬಲ ಮನಸ್ಸಿಗರ ದೌರ್ಜನ್ಯಕ್ಕೆ, ದಬ್ಬಾಳಿಕೆಗೆ ಸಿಕ್ಕು ಅನುಭವಿಸುವ ಲೈಂಗಿಕ ಕ್ರಿಯೆಗಳ ಬದುಕಲ್ಲಿ ದೇಹವನ್ನು ಹಿಡಿ ಹಿಪ್ಪೆ ಮಾಡಿಕೊಂಡು ನಿತ್ರಾಣವಾಗುವ ಸ್ಥಿತಿಯನ್ನು ಅಂಗೈ ಹುಣ್ಣಿನ ಕನ್ನಡಿಯಾಗಿ ಇಡೀ ಸಮಾಜಕ್ಕೆ ಸವಾಲಾಗಿಸುತ್ತದೆ-ಈ ಕತೆ.

ಕಂಡವರ ಪಾಲಾದ ಕಾಣಿಯ ದೇಹ, ಮುಂದೆ ಮಾರಿಕೊಳ್ಳುವ ಸ್ಥಿತಿ ಬಂದಾಗ ಗಿರಾಕಿಗಳ ಹುಡುಕಾಟದಲ್ಲಿ ತೊಡಗುತ್ತಾಳೆ. ತನ್ನ ಮನೆ, ಬಂಧು, ಬಳಗ ಮೊಂಡು ಕೈನವನ ನೆನಪಿನಲ್ಲಿ ಕಾಸಿನ ಬೆಲೆ ಅರಿಯದ ಕಾಣಿಗೆ ಜಗತ್ತು ಕ್ರೂರ ವಾಗುತ್ತ ಒಂಟಿಯಾಗುವ ಅನುಭವವಾಗುತ್ತಿದ್ದಂತೆ ಚರ್ಮರೋಗಕ್ಕೆ ತುತ್ತಾಗು ತ್ತಾಳೆ. ರಾತ್ರಿಯಾಗುತ್ತಿದ್ದಂತೆ ಅಲಂಕಾರ ಮಾಡಿಕೊಂಡು ಗಿರಾಕಿಗಳಿಗೆ ಕಾದು

ಬಂದ ಅನಾಮಿಕನ ಜೊತೆ ಸಾಗಿ, ನಿತ್ರಾಣತಳಾಗಿ ಕೊನೆಗೆ ಆ ಗಿರಾಕಿಯಿಂದ ದುರಂತದ ಬದುಕು ಅಪ್ಪುವಸ್ಥಿತಿ: ನಂತರ ಅವಳ ಹೆಣದ ಮೇಲೆ ಹಾರಾಡುವ ಗಿಡುಗ*ದ ಸಾಂಕೇತಿಕತೆ ವ್ಯವಸ್ಥೆಯ ಕ್ರೂರ ಹಿಡಿತಕ್ಕೆ ತಾನಿನ್ನೂ ಕೊನೆಯ ಗಿರಾಕಿಯಾಗಿದ್ದೇನೆಂದು ಧ್ವನಿಸುವ ಅರ್ಥ ಮಸುಕುಲಕ್ಕೆ ಸವಾಲಾಗಿ ನಿಲ್ಲುತ್ತದೆ. ಕಾಣೆಯ ಸ್ಥಿತಿಯನ್ನು ನಿರಂಜನರು ಒಂದು ನಗರದಲ್ಲಿ ಕಂಡು ಚಿತ್ರಿಸಿರ ಬಹುದಾದರೂ ಇಂಥ ಕಾಣೆಯರು ಎಲ್ಲ ನಗರಗಳಲ್ಲೂ ಕಾಣಬರುವವರೇ ಆಗಿದ್ದಾರೆ. ಕಾಣೆಯೊಬ್ಬಳ ಸಾವು. ಕೊನೆಯ ಗಿರಾಕಿಯಲ್ಲಾಗಿದ್ದರೂ, ದಿನವೂ ಇದೇ ದಾವಣಗೆರೆಯಲ್ಲೋ, ಮಂಗಳೂರಿನಲ್ಲೋ, ಮೈಸೂರು ಇತ್ಯಾದಿಯಾವುದೇ ನರಗದಲ್ಲೂ ಕಾಣ ಬರುವ ಕಾಣೆಯರಿಗೆ ಅನುಕಂಪದ ಮಾತಷ್ಟೆ ಅವರ ಬದುಕಿಗಿರುವ ಜೀವದುಸಿರು ಆಗಬಹುದು.

ಈ ಕತೆಯ ವಸ್ತು ನಿರಂತರ ಶೋಷಣೆಯನ್ನೊಳಗೊಂಡ ಸಮಾಜವೊಂದರ ಊನವನ್ನು ಹೇಳುತ್ತದಾದರೂ, ಕತೆ ಹೇಳುವ ಶೈಲಿಯಲ್ಲಿ ಹಾಗೂ ತಂತ್ರದಲ್ಲಿ ಯಶಸ್ವಿಯಾದದ್ದಾಗಿದೆ. ಕನ್ನಡದ ಬಹುಮುಖ್ಯ ಆ್ಯಂಥಾಲಜಿಗಳಲ್ಲಿ ಈ ಕತೆ ಸೇರಲು ಬಹುಶ: ರೋಗಗ್ರಸ್ತ ಸಮಾಜದ ಚಿತ್ರಣ ಜೀವಂತವಾಗಿರುವುದೇ ಕಾರಣ ಇದ್ದಿರಬಹುದು. ಹಲವಾರು ಆ್ಯಂಥಾಲಜಿಗಳಿಗೆ ಸೇರಿಸಿದ ಸಂಪಾದಕ [ವಿಮರ್ಶಕ]ರು ಏನೇ ಹೇಳಿಕೊಂಡರೂ, ನಿರಂಜನರ ಇತರ ಕತೆಗಳಿಗಿಂತ ಹೆಚ್ಚು ವಸ್ತು ನಿಷ್ಠವಾದ ಹಾಗೂ ಸರಳ ಭಾಷಾಪ್ರಯೋಗದಿಂದ ಸುಗಮ ಓದು ಪಡೆವ ಈ ಕತೆಯ ಮೂಲ ಸೆಲೆ ಮಾನವೀಯ ದೃಷ್ಟಿಯಾಗಿದೆ.

ನಿರಂಜನರ ಇಡೀ ಸಾಹಿತ್ಯಾಭಿವ್ಯಕ್ತಿಗೆ ಒಂದು ರೂಪಕದಂತಿರುವ ಧ್ವನಿ-ಕ್ರೂರ ದಬ್ಬಾಳಿಕೆಯೆದುರು, ಸಮಾನತೆ ಪರವಾಗಿ ಮೂಕನೂ ಮಾತಾಡುತ್ತಾನೆ ಎಂಬುದು. ಸ್ವಾತಂತ್ರ್ಯ ಭಾರತ ಸ್ಥಿತಿಯನ್ನು ಸಾಂಕೇತಿಸುವ ಈ ಕತೆ ಮೌನದುಡಿಯ ಅರ್ಥವನ್ನು ಅರ್ಥೈಸುತ್ತದೆ.

"ಕಣ್ಣಾರೆ ಕಂಡವರು" ಎಂಬ ಕತೆ ಪ್ರಸ್ತುತವಾಗಿರುವ ರಾಜಕೀಯ ಗುಂಡಾ ಸಂಸ್ಕೃತಿ ಮತ್ತು ನಿರ್ಲಜ್ಜ್ಯವನ್ನು ಸಾರಿ ಹೇಳುತ್ತದೆ. ರೋಗಗ್ರಸ್ತ

---

*ಕತೆಗಾರ ನಿರಂಜನರು ಗಿಡುಗವನ್ನು ಸಾಂಕೇತಿಕರಿಸಿದ್ದು ಸ್ಪಷ್ಟವಿಲ್ಲ. ನಮ್ಮ ಪರಿಸರದಲ್ಲಿ ಹದ್ದು ಸತ್ತ ದೇಹದ ಮಾಂಸಕ್ಕೆ ಹಾತೊರೆವ ಪಕ್ಷಿ. ಗಿಡುಗ ಮನುಷ್ಯ, ಪ್ರಾಣಿಗಳ ದೇಹಕ್ಕಿಂತ, ಪಕ್ಷಿಗಳನ್ನು ಹೊಂಚುಹಾಕಿ ಹಾರಿಸಿಕೊಂಡು ಹೋಗುತ್ತದೆ –ಲೇಖಕ.

ಸಾಮಾಜಿಕ ವ್ಯವಸ್ಥೆಗೆ ಈ ಕತೆ ಒಳ್ಳೆ ಉದಾಹರಣೆ. ಹೆಪ್ಪುಗಟ್ಟಿದ ಕ್ರೌರ್ಯವನ್ನು ಇದು ದಾಖಲಿಸುತ್ತದೆ. ಗೂಂಡಾಗಿರಿ ಮತ್ತು ಶ್ರಮಜೀವಿಗಳ ನಡುವಿನ ಸಾತ್ವಿಕತೆಯ ನಡುವೆ ಕತೆಯ ವಸ್ತು ಸೆಣಸುತ್ತದೆ. ಪೊಲೀಸ ವ್ಯವಸ್ಥೆ ಜನ ಸಾಮಾನ್ಯನಿಗೆ ರಕ್ಷಣೆ ಕೊಡುವ ಬದಲು ಭಯಹುಟ್ಟಿಸುವ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಈ ಕತೆ ನ್ಯಾಯದ ತಕ್ಕಡಿಗೆ ಏರಿಳಿತಗಳನ್ನು ಕೊಡುವಲ್ಲಿನ ತೂಗಾಟದ ವ್ಯಂಗ್ಯ ಚಿತ್ರಿಸುತ್ತದೆ ಕತೆಯ ವಸ್ತುವಿಗೆ ತಕ್ಕದಾದ ಭಾಷೆಯ ಬಿಗುವು ಇಲ್ಲಿದೆ. ಓದಿಕೊಳ್ಳುವ ಗುಣದಿಂದ ತಂತ್ರಗಾರಿಕೆ ಮರೆಯಾಗಿ ವಾಸ್ತವ ಎದುರಾಗುತ್ತದೆ.

"ಒಂಟಿ ನಕ್ಷತ್ರ ನಕ್ಕಿತು" ಎರಡು ತಲೆಮಾರುಗಳ ನಡುವಿನ ಅಭಿಪ್ರಾಯ ಭಿನ್ನತೆಯನ್ನು, ಅಣೆಕಟ್ಟಿನ ವ್ಯಾಜ್ಯದಲ್ಲಿ ನಿರೂಪಿಸುವ ಕತೆಯಾಗಿದೆ. ಬಡತನ ಪ್ರಗತಿ, ಭೀತಿ-ಸಾಹಸ ಮೂಢನಂಬಿಕೆ-ವೈಜ್ಞಾನಿಕತೆಗಳನ್ನು ಪ್ರತಿಸಿಧಿಸುವ ಎರಡು ತಲೆಮಾರುಗಳೂ ಇಲ್ಲಿವೆ. ಬದುಕಿನ ಮುನ್ನಡೆಗೆ ಇಲ್ಲಿನ ಕಥಾ ವಸ್ತು ಸಂಘರ್ಷಕ್ಕಿಳಿದು ಸಮರ್ಥ ಕತೆಯಾಗಿ ನಿಲ್ಲುತ್ತದೆ.

ಕೆಲವು ಕತೆಗಳನ್ನಷ್ಟೇ ಪ್ರತಿನಿಧಿಕವಾಗಿ ತೆಗೆದುಕೊಂಡು ಇಲ್ಲಿ ಚರ್ಚಿಸಿರುವೆನಾದರೂ, ನಿರಂಜನರ ನೂರಾರು ಕತೆಗಳಲ್ಲಿ ಹತ್ತಾದರೂ "ಗಟ್ಟಿಕಾಳು"ಗಳಾಗಿರುವುದು. ಕನ್ನಡ ಸಾಹಿತ್ಯ ಸಂದರ್ಭಕ್ಕೆ ಮಹತ್ವದ ಕಾಣಿಕೆಯಾಗಿದೆ. ಕಾದಂಬರಿಕಾರರಾಗಿಯೂ ಯಶಸ್ವಿಯಾಗಿರುವ ನಿರಂಜನರು, ಕಥಾ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರಗಳ ವಸ್ತು-ವಿನ್ಯಾಸ ಪಡೆದಿದ್ದಾರೆ. ಇದಕ್ಕೆ ಅವರು ನಿಕಟ ಪತ್ರಿಕಾ ಸಂಪರ್ಕ ಹೊಂದಿದ್ದರ ಜೊತೆಗೆ ಅಂಕಣಕಾರರಾಗಿದ್ದುದೂ ಕಾರಣ ಇದ್ದಿರಬಹುದು. ಕನಸುಗಾರ ನಿರಂಜನರು ಕಂಡದ್ದನ್ನು ವೈಭವೀಕರಿಸದೆ, ವಸ್ತುಸ್ಥಿತಿಗೆ ಚ್ಯುತಿ ಬಾರದಂತೆ [ಕತೆ] ಬರೆದಿದ್ದರೂ, ಎಲ್ಲೋ ಅವರ ಕಥೆಯ ಬಂಧ ಸಡಿಲ-ಅನ್ನಿಸುತ್ತದೆ. ಸರಳ ವಿವರಗಳ ಕಣ್ಣುಪಟ್ಟಿ ಹಲವು ಕತೆಗಳಲ್ಲಿದೆ. ಉದಾ : "ಹಮಾಲ ಇಮಾಂಸಾಬಿ" ವರದಿಯಂತಿದೆ. ಇಲ್ಲಿ ವಸ್ತು ಮತ್ತು ತಂತ್ರ ಒಂದೇ ಆಗಿರುತ್ತದೆಯೆಂದಾದರೂ ಕೆಲವೊಮ್ಮೆ ಇವೆರಡರ ನಡುವೆ ಪೈಪೋಟಿ ಬೆಳೆಯುತ್ತದೆ.

ವಿವರಗಳನ್ನು ಕಡಿತಗೊಳಿಸಿ ಮಾತು-ಸಂಭಾಷಣೆಗಳ ಮೂಲಕ ವಸ್ತು-ವಿಷಯಕ್ಕೆ ವ್ಯಾಪ್ತಿ ಬರುವಂತೆ ಬಹಳಷ್ಟು ಕತೆಗಳಲ್ಲಿ ಎಚ್ಚರ ವಹಿಸಿರುವ

ನಿರಂಜನರು ಸಂಭಾಷಣೆಗಳಲ್ಲಿ ಕತೆ ನೇಯುವ ಕಲೆಗಾರಿಕೆಯನ್ನು ತಂತ್ರಗಾರಿಕೆಯನ್ನು ಕರಗತಮಾಡಿಕೊಂಡದ್ದು ಅವರ ಬರವಣಿಗೆಯ ವೈಶಿಷ್ಟ್ಯ. ವಸ್ತುವೊಂದನ್ನು ಪೂರ್ವಯೋಜಿತ ಚೌಕಟ್ಟಿಗೆ ಒಳಪಡಿಸಿ ಅದರ ಸುತ್ತ ವಾಸ್ತವ ವಿಚಾರಗಳನ್ನು ಗ್ರಹಿಸುತ್ತಾ, ಕತೆಗೆ ಬೇಕಾದ ಓಟಕ್ಕೆ ಕಾಲ್ಪನಿಕ ವಿಚಾರಗಳನ್ನು ಸೇರಿಸುತ್ತಾ, ಮನಸ್ಸು ತಾಕುವ ಕೆಲಸ ಸಾಕಷ್ಟು ಕತೆಗಳಲ್ಲಿದೆ. ಇವೆಲ್ಲವುಗಳ ಹಿಂದೆ ಕೆಲಸ ಮಾಡಿದ್ದು ಸಹಜ ಪ್ರೀತಿ ಹಾಗೂ ಮಾನವೀಯ ಕಳಕಳಿ.

ಸಮಾರೋಪಕ್ಕೆ ಒಂದು ಮಾತು: ಸ್ವಾತಂತ್ರ್ಯ ಪೂರ್ವದ ಆದರ್ಶ, ನವೋದಯದ ಸೌಂದರ್ಯ ಪ್ರಜ್ಞೆ, ಪ್ರಗತಿಶೀಲತೆಯ ಕ್ರಾಂತಿಯ ಕನಸು, ನವ್ಯ-ದಲಿತ-ಬಂಡಾಯಗಳ ಸಂದರ್ಭದ ಸಾಮಾಜಿಕ ಬದಲಾವಣೆಯ ತುಡಿತಗಳು ನಿರಂಜನ ಅವರಲ್ಲಿ ನಿರಂತರ ಕೆಲಸ ಮಾಡಿವೆ. ಇದಕ್ಕೆ ಅವರ ಹಲವು ಕತೆಗಳೇ ಪುರಾವೆ.

ಪ್ರಸ್ತುತ ಸಾಹಿತ್ಯ ಸಂದರ್ಭದಲ್ಲಿ ನಿರಂಜನರ ಕತೆಗಳ ಮರು ವಿಮರ್ಶೆ ಆಗಬೇಕಿರುವುದರಿಂದ ವಿಮರ್ಶಾಮಾನ ದಂಡ ಏನಾಗಬೇಕು? ಸಾಹಿತಿಯೊಬ್ಬ ಬೆಳೆದ ಪರಿಸರ, ಹಿನ್ನೆಲೆ, ಬದುಕು-ಹೋರಾಟ, ಬದ್ಧತೆಗಳು ಇಲ್ಲಿ Count ಆಗಬಹುದೆ? ಹಾಗೆ ಲೆಕ್ಕಿಸುತ್ತಾ ಹೋದರೆ ವಿಮರ್ಶಾಕ್ಷೇತ್ರ ಯಾವ ದಿಕ್ಕಿನಲ್ಲಿ ಸಾಗಬಹುದು? ಈ ಇತ್ಯಾದಿ ಆಲೋಚನೆಗೆ ಉತ್ತರ ಕಂಡಕೊಳ್ಳುವುದಾದರೆ ನಿರಂಜನರ ಕತೆಗಳಿಗೆ ಮರು ಆಲೋಚನೆ ಬೇಕೆನಿಸುತ್ತದೆ.

(ಕೃಪೆ : ಕರ್ನಾಟಕ ಸಾಹಿತ್ಯ ಅಕಾಡೆಮಿ)

ನೆನಪು ಗ್ರಂಥಗಳು:

1. ನಿರಂಜನ ಅಭಿನಂದನೆ [ನಿರಂಜನ ಕಥಾ ಸಾಹಿತ್ಯ: ಲೇ: ಸುಬ್ರಾಯ ಚೊಕ್ಕಾಡಿ] ಪ್ರ: ಕರ್ನಾಟಕ ಸಂಘ, ಪುತ್ತೂರು-574 201. [ದ. ಕ.]
2. ಕಾದಂಬರಿ: ವಸ್ತು ಮತ್ತು ತಂತ್ರ ಲೇ: ಗಿರಡ್ಡಿ ಗೋವಿಂದರಾಜ, ಸ್ನೇಹ ಪ್ರಕಾಶನ. ವಿಜಯನಗರ, ಬೆಂಗಳೂರು-560 040.
3. ಕಥೆ ಮತ್ತು ಕಥಾ ಸಾಹಿತ್ಯ: ಲೇ: ಎಸ್. ಎಲ್. ಭೈರಪ್ಪ, ಸಾಹಿತ್ಯ ಭಂಡಾರ. ಬೆಂಗಳೂರು-560 053,
4. ಕ್ರಿಯೆ ಪ್ರತಿಕ್ರಿಯೆ : ಲೇ: ಡಾ॥ ಕೆ. ಕೇಶವಶರ್ಮ, ಅನ್ವೇಷಣೆ ಪ್ರಕಾಶನ, ವಿಜಯನಗರ, ಬೆಂಗಳೂರು-560 040.
5. ಸಮಾಜವಾದಿ ವಾಸ್ತವ: ಲೇ: ಆರ್. ವಿ. ಭಂಡಾರಿ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ [ಉ. ಕ.]
6. ಧ್ವನಿ 1: (ಪ್ರವೇಶ-ಬಿದರ ಹಳ್ಳಿ ನರಸಿಂಹಮೂರ್ತಿ), ಐ. ಬಿ. ಎಚ್. ಪ್ರಕಾಶನ ಗಾಂಧಿನಗರ, ಬೆಂಗಳೂರು-560 009.

ಡಾ. ಸಿಂಪಿ ಲಿಂಗಣ್ಣನವರೊಂದಿಗೆ ಸಂದರ್ಶನ

ಕೊಪ್ಪಳದಲ್ಲಿ ಈ ಸಲ ನಡೆಯುವ ಅಖಿಲ ಭಾರತ 62 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಡಾ. ಸಿಂಪಿ ಲಿಂಗಣ್ಣನವರನ್ನು ಆಯ್ಕೆ ಮಾಡಿ ಪರಿಷತ್ತು ತನ್ನ ಘನತೆಯನ್ನು ಮತ್ತೆ ಕಾಪಾಡಿಕೊಂಡಿದೆ. ಚಡಚಣದಂತಹ ಪಡಮಾಲೆಯ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಆರು ದಶಕಗಳಿಂದ ಸಾಹಿತ್ಯ ಮಜ್ಜನ "ಅರವಿಂದ ಗ್ರಂಥಾಲಯ" ಪುಸ್ತಕ ಪ್ರಕಾಶನ ಮೂಲಕ ಅಲ್ಲದೆ ನಮ್ರವಾಗಿ ಬದುಕುತ್ತಿರುವ ಡಾ. ಸಿಂಪಿ ಲಿಂಗಣ್ಣನವರು ನಾಡಿನ ಜನತೆಯ ಮನಸೆಳೆವದ್ದು ಇಂತಹ ಪವಾಡದಿಂದಲೇ ಎನ್ನಬೇಕು.

ಈ ಅನುಭಾವಿ ಜಾನಪದ ವಿದ್ವಾಂಸರನ್ನು ಮತ್ತೊಮ್ಮೆ ಕಾಣಬೇಕೆನ್ನುವ ಹಂಬಲ ದಿಂದ ಗೆಳೆಯ ಮಂಡಲ ಪ್ರಧಾನ ಶಿವಕುಮಾರ ಜತೆ ಚಡಚಣ ದಾರಿ ಹಿಡಿದೆ. ಅಂದು ಆ ಊರು ಸಂತೆ ಬೇರೆ. ಸಂದಿ ಹಿಡಿದು ಅವರ ಮನೆ ತಲುಪಿ ಬಾಗಿಲು ಮುಂದೆ ನಿಂತಾಗಲೇ, ಡಾ॥ ಲಿಂಗಣ್ಣನವರ ಪ್ರಾಧ್ಯಾಪಕ ಮಗ ನಮ್ಮನ್ನು ಸ್ವಾಗತಿಸಿದರು. ಹೆಣ್ಣುಮಕ್ಕಳು ತಮ್ಮ ದಿನ ನಿತ್ಯದ ಕೌದಿ ಹೊಲಿಯುತ್ತ ಕುಳಿತಿದ್ದರು. ಒಳಗೆ ನಾವು ಕಾಲಿಡುತ್ತಲೇ... ಎಲ್ಲಿ ಹೋಗ್ಯಾರ್ರಿ... ಎಂದೆ.

ಬರ್ರಿ...ಬರ್ರಿ...ಕೂಡ್ರಿ... ಇಲ್ಲೇ ತಿರುಗ್ಯಾಡಾಕ ಹೋಗ್ಯಾರ...

ಸಮಯ ಐದು ಘಂಟೆ ಆಯಿತ್ರಿ... ಎಂದು ಅಲ್ಲಿಯೇ ಸಾವರಿಸಿ ಕೂಡ್ರುವಷ್ಟ ರಲ್ಲಿಯೇ ಲಿಂಗಣ್ಣನವರು (ನಮ್ಮ ರಾಷ್ಟ್ರಪತಿಯಂತೆ ಹೆಜ್ಜೆ ಹಾಕುತ್ತ) ಹೊಸ್ತಿಲೊ ಳಗೆ ಕಾಲಿಡುತ್ತಲೇ ಯಾಕರೀ?...ಯಾವಾಗ ಬಂದರೀ ಎಂದರು.

ಅಷ್ಟರಲ್ಲಿ... ನಾವು ಕೊರಳಿಗೆ ಹಾರ ಹಾಕುತ್ತ... ಬಗಲ್ಲಲ್ಲಿ ಕೈಹಾಕಿ ನಿಧಾನ ಪಾವಟಿಗೆ ಏರಿಸಿ ಪಡಸಲಗೆಯಲ್ಲಿಯ ಕುರ್ಚಿ ಮೇಲೆ ಕೂಡ್ರಿಸಿದೆವು.

ಲಿಂಗಣ್ಣನವರು ತಲೆಯ ಮೇಲಿನ ಗಾಂಧೀ ಟೊಪ್ಪಿಗೆ ತೆಗೆದು ತಮ್ಮ ತೊಡೆಯ ಮೇಲಿಟ್ಟು ಏನು ಮಾಡೊದರೀ... ಎಲ್ಲ ಬರೋಬರಿ ಆದsi ಕಾಲೇ

ಹಿಡೀತಾವ...ಅಷ್ಟರಲ್ಲಿ ನಾನು, ಇಳೀ ವಯಸ್ಸಲ್ಲರೀ...ಎಂದೆ. ಮತ್ತೆ ನಾನೇ ಮುಂದುವರೆದು..., ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡ್ಯಾರಲ್ಲರಿ... ನಿಮ್ಮನ್ನು?.

ಸಿಂಪಿ ಲಿಂಗಣ್ಣ: ಅದೂರ್‍ಯಾ... ನನಗೆ ಮೊದಲ ಕೇಳಿದ್ರು..., ಒಲ್ಲೆನ ಬ್ಯಾಡ ರೆಂದು ಅಂದಿದ್ರು, ಪಾಡ್ ಆಯ್ತು... ಏಕ ಮತದಿಂದ ಆದದ್ದು. ಅದೀ ಇದಲ್ಲ ಪ್ರಾಯದೊಳಗೆ ಆಗಬೇಕಿತ್ತು. ಇನ್ನಾದರೂ ಯಾರ್‍ದರೆ ತಕರಾರು ಬಂದ್ರೆ ನಾನು ಮನ್ಯಾಗೇ ಕೂಡತೀನಿ. ಈ ಪಾತ್ರವೇ ಬ್ಯಾಡ ಅನ್ನುವ ಪೈಕಿ ನಾನು. ಹುಡುಗರು ಗಜ್ಜರಿಗೆ ತೂತು ಹೊಡೆದು ಊದ್ತಾವಲ್ಲ... "ಗಜ್ಜರಿ ಪುಂಗಿ" ಇದ್ದ್ಹಾಂಗ... ಯಾರರೇ ಊದಿ ಬಿಡೂದು.

" ನೀವು ಅಲ್ಲಿ ಏನ್ ಮಾತಾಡಬೇಕೆನ್ನುವದು ತಿಳಿಸಬೇಕೆಂದು ನಮ್ಮ ಕಡೆ ಕಕ್ಕುಲತೆಯಿಂದ ನೋಡಿದರು ".

ನಾನು: ನಿಮ್ಮ ಹಲಸಂಗಿ ಗೆಳೆಯರ ಬಳಗದಲ್ಲಿ ಈಗ್ಗೆ ನೀವೊಬ್ಬರೆ ಉಳಿ ದಿರಬೇಕಲ್ಲ...?

ಸಿಂಪಿ ಲಿಂಗಣ್ಣ: ಹೌದು (ತಲೆಯ ಮೇಲೆ ಕೈಯಾಡಿಸುತ್ತಾ... ತಮ್ಮ ಹಲ್ಲು ಹಿಂದೆ ಮುಂದೆ ಮಾಡುತ್ತಾ..) ಹಾಂಗೇನಿಲ್ಲ... ಬರಿಯುವವರ ಪೈಕಿ ನಾ ಒಬ್ಬ ಉಳದಂಗ ಆಗೇದ. ಇನ್ನ ಉಳಿದ ನಮ್ಮ ಗೆಳೆಯರು ಮೂರು, ನಾಲ್ಕು ಮಂದಿ ಅದಾರ...

ನಾನು; ಇಂದಿನ ವೈಜ್ಞಾನಿಕ ಕಲುಷಿತ ವಾತಾವರಣದಲ್ಲಿ ನಮ್ಮಂತ ಯುವ ಕರು ನಿಮ್ಮಿಂದ ಏನು ನಿರೀಕ್ಷಿಸಹುದು ?

ಲಿಂಗಣ್ಣನವರು: ನೋಡ್ರಿ... ಚಡಚಣದ ಹಡಪದ ಹಂಪಣ್ಣ ನನ್ನ ಗೆಳ್ಯಾ... ಕೂಡಿ ಆಡೀವಿ..., ಕೂಡಿ ಕುಂದರತೀವಿ... ಶ್ರೀಮಂತರ ಅಂಗಡ್ಯಾಗ ರೊಕ್ಕಾ ಇಡಲ್ಯಾಕ ಜಾಗ ಇಲ್ಲ... ನಾವ್ಯಾಕ ಅಲ್ಲಿ ಕೂಡ್ರಬೇಕು. ಇಪ್ಪ ಅದನೋಡ್ರಿ... ತಿಳಿಕೊಂಡ್ರ, ಇನ್ನೂ ನೆನಪದ..., ಮುಧೋಳದಂವ ಒಬ್ಬ ನನಗ ಟಪಾಲು ಬರೆ ದಿದ್ದ. ನೋದುಕೊಂಡಿದ್ದ... ಅಂವಾ ಎಲ್ಲಾ ಬಳಗದಾಗ ಕೂಡಿ ಕೆಲ್ಸ ಮಾಡ ತಿದ್ದ... ಅವನ ಉಪಯೋಗ ತಗೋತಿದ್ರು... ಅದರ ನೈದರಂತ ತಾತ್ಸಾರ ಮಾಡು ತ್ತಿದ್ದರು. ಏನ ಮಾಡಬೇಕು ಹೇಳ್ರಿ...? ಆದರ ನೆಮಗ ಹೇಳುದಿಷ್ಟೇ, "ಬದುಕ ಬೇಕೆನ್ನುವದು ಬಿಡಬಾರದು" ಖರೇ ನಡೀಬೇಕು. "ಗಜ್ಜರಿ ಪುಂಗಿ" ಯಂಗ ಊದುವ ಆಸಾಮಿದಮು. ಗಜ್ಜರಿ ಪೊಳ್ಳ ಆದ್ರ... ಪುಯಿಂ ಅನ್ನುವಂಗಿಲ್ಲ,

ನೋಡ್ರಿ... (ಅಷ್ಟೊತ್ತಿಗೆ ಚಹಾ ಬಂತು) ಕುಡೀರಿ..., ಕುಡೀರಿ... (ಮತ್ತೆ ತಲೆ ಎತ್ತಿ... ಚಹಾದೊಳಗ ಬಿಸ್ಕೀಟು ಎದ್ದುತ್ತ...) ಪುಟ್ಟಪ್ಪ (ಕುವೆಂಪು) ನವರ ಸಂಗಡ ಮೊದಲಿನಿಂದಲೂ ಬಾಳ ಜಗಳ್ಯಾಡೀನಿ... ಅವರು, ಹೀಂಗ ಅಂತಾರ, ನನ್ನ ಅಂಬೂನ ಏನಂದರ...

"ಕರ್ನಾಟಕ, ಭಾರತಮಾತೆಯ ಹೃದಯ... (ಎರಡು ಸಲ ಒತ್ತಿ ಹೇಳಿದರು) ಬೇಂದ್ರೆ ನೋಡ್ರಿ... ನಮ್ಮ ಬೇಂದ್ರೆ...

ಜಗದೇಳಿಗೆಯಾಗುವದು ಇದೇ ಕರ್ನಾಟಕದಿಂದ... ಇದೆಂಥ ಮಾತು. ಇದು ಖರೇ ಅದ (ಕೈಯೊಳಗಿನ ಬಸಿ ಕೆಳಗಿಡುತ್ತ).

ಪ್ರಶ್ನಾರ್ಥಕವಾಗಿ ನೋಡುತ್ತ...,

ಹೂಂ, ಸಮ್ಮೇಳನದಾಗ ಏನ್ ಹೇಳಲಿ ಹೇಳ್ರೀ....?

ನಾನಂತೂ. ಅರವಿಂದರು- ಮಾತಾಜಿ ವಿಚಾರ ಹೇಳತೀನಿ. ಇನ್ನ ಮುಂದ ಸುಖ ಕಾಲ ಬರ್ತವೆನ್ನುವದು ಗ್ಯಾರಂಟಿ ಅದ. ಅದಕೇ ಬದುಕೀನಿ, ಓದುಕತೀನಿ... ನಾ ಪೆನಶನ್ ತಗೊಂಡು ಮೂವತ್ತು ವರುಷ ಆತು. ನನಗೆ ರಾಷ್ಟ್ರ ಪ್ರಶಸ್ತಿ ಸಿಕ್ಕ್ಯಾಗ ಆಗಿನ ಮೊದಲ ಕನ್ನಡಿಗ, ಬಾಬು ರಾಜೇಂದ್ರ ಪ್ರಸಾದ ಇವ್ರು. ಅವರಿಂದ ತಗೊಂಡು ಮನೀಗಿ ಬಂದೀನಿ. ಅಂದಿನ ಶಿಕ್ಷಣ ಮಂತ್ರಿ ಕಂಠಿಯವರು... ಇನಾ, ಬೇಸಿ ಇದೀರಿ...ಇಷ್ಟು ಬೇಗ ಮುಗೀತಾss ಅಂದ್ರು. ಆಗ ನಾನು, ಇನಾ ಕೊಟ್ಟಿ ನೋಡ್ರೀ... ನಾನಂತೂ ಇನ್ನೂ ಸಾಯುವದಿಲ್ಲ. ಮೊದಲ ಮಾಡಿದ ಸರ್ವೀಸದಷ್ಟು ಮತ್ತ ಮಾಡತೀನಿ. ನಡಬರಕ ಸತ್ತರ ನೀವು ಕೊಟ್ಟ ಪಗಾರ ಪೂರಾ ನಿಮಗ ಕೊಡತೀನಿ ಅಂದೆ.

ನೋಡ್ರೀ... ಖರೇ ಆತಲ್ಲ, ನೌಕರಿ ಮೂವತ್ತು ವರುಷ ನನಗ ತುಂಬಿತು. ಬೇಸಿ ಇದೀನಲ್ಲ.

ಇಷ್ಟರಲ್ಲೆ ನಮ್ಮ ಗೆಳೆಯ, ಇಪತ್ತು, ಬಂಗಾರಪ್ಪನವರೂ ನೀವು ಆಯ್ಕೆಯಾದ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದು ಪೇಪರನಾಗ ಬಂದವರೀ... ಎಂದ ಆಗ್ಗೆ ಸಿಂಪಿ ಲಿಂಗಣ್ಣನವರ ಮಗ ಅಕ್ಷಯ ಮಾಲೆಯಲ್ಲಿ ಸಿಂತಿಲ್ಲಿಂದಲೇ, ಅವರು ಜನ್ನೋದು ಮಹತ್ವ ಅಲ್ಲರೀ... ಸಾಹಿತ್ಯ ಲೋಕ ಸ್ವೀಕರಿಸಬೇಕು.

ಲಿಂಗಣ್ಣನವರು ಮಗನ ಕಡೆ ನೋಡುತ್ತ... ನಕ್ಕರು.
ನಾನು; ನಿಮ್ಮಲ್ಲಿಯ ಬದುಕುವ ಛಲ ಕಂಡು ಕನ್ನಡಿಗರು ನಿಜಕ್ಕೂ ಹೆಮ್ಮೆ ಪಡುತ್ತಾರೆ.
ಲಿಂಗಣ್ಣನವರು: ಅವಶ್ಯ (ದವಡಿ ಕಚ್ಚುತ್ತ...)

ಇಂತಃದೆಲ್ಲ ನೋಡಬೇಕಾಗೇದ. ಚಲೋ ಕಾಲ ಬರ್ತದ... ಇದು ಸುಳ್ಳಲ್ಲ. ಸುಖೀ ರಾಜ್ಯ ಬಾದೇ ಬರ್ತದ..., ನೋಡೇ ಕಣ್ಮುಚ್ಚತೀನಿ..., ಅಲ್ಲಿತನಕ ಸಾಯಂ ವದೇ ಇಲ್ಲ, ಕಾಲ ಬದಲಾಗೇತೀರತದ... ಒಬ್ಬಂವ ಸಂದೇಶ ತಗೊಂಡು ಬಂದೇ ಬರತಾನ...

ಹೀಗೆಲ್ಲ ಗಟ್ಟಿಯಾಗಿ ಆತ್ಮವಿಶ್ವಾಸದಿಂದ ನುಡಿದರು. ಮತ್ತೆ ಅದು, ಇದು ಮಾತನಾಡುತ್ತ... ನಾವು ಬರ್ತೇವ್ರಿ... ಎಂದು ನಮಸ್ಕರಿಸಿ ಎದ್ದೆವು. ಆಗ್ಗೆ ಡಾ॥ ಸಿಂಪಿ ಲಿಂಗಣ್ಣನವರು ನಿಧಾನ ಏಳುತ್ತಾ...

ಹಾರಾ ಹಾಕಿ ಭಾಳ ವಜ್ಜೀ ಮಾಡಿದಿರಿಪಾ... ಎಂದರು. ಇರಲರಿ, ಇರಲರೀ... ಕೊಪ್ಪಳದಲ್ಲಿ ಮತ್ತೆ ಕಲಿಯೋಣ ಎಂದೆ., ಬೇಕಾದಾಂಗ..., ಕನ್ನಡದ ಕೂಗೂ ಹೊಡೆದು ಬರ್ರಿ... ಹೀಗೆಂದು ಹೊಸ್ತಿಲತನಕ ಬಂದರು.

ಈ ಹೃದಯ ತುಂಬಿದ ಪೂರ್ಣತ್ವ, ಹಳ್ಳಿಗರ ಹೆಮ್ಮೆಯ ಮಹಾನ್ ಪುರುಷ ನನ್ನು ಮತ್ತೊಮ್ಮೆ ಕಣ್ತುಂಬ ನೋಡಿದೆವು.

ಇಷ್ಟೆಲ್ಲ ಕನ್ನಡ ನಾಡಿನುದ್ದಕ್ಕೂ ಪಸರಿಸಿದ, ಗೌರವಾನ್ವಿತ ಸಾಹಿತಿ ತನ್ನ ಮನೆಗೆ ಹಾಕಿದ ತನ್ನ ಹೆಸರಿನ ಸಣ್ಣ ಬೋರ್ಡ ಕೂಡ ನಮಗೆ ಕಾಣಲಿಲ್ಲ. ''ತುಂಬಿದ ಕೊಡ ತುಳುಕುವುದಿಲ್ಲ'' ಎಂದ ಗೆಳೆಯ ಶಿವಕುಮಾರ್. ಯಾಕೋ ಇಬ್ಬರ ಕಣ್ಣಂಚಿನಲ್ಲಿ ನೀರು ಬಂದವು. ಹಾಗೆಯೇ ಹೆಮ್ಮೆಯಿಂದ ಬೀಗುತ್ತ ಬಂದೆವು.

—ಸಿದ್ಧಾರಾಮ ಉಪ್ಪಿನ ಶಹಾಪೂರ

ಶಿ. ರಾಜು, ದಾವಣಗೆರೆ

ಕತೆ

"ಹುಡುಕಾಟ"

ಕಳೆದು ಹೋದ
ಆ ... ನಿನ್ನ
ಕಣ್ಣ ಭಾಷೆಗಾಗಿ
ಕಾಣುವ ಕಣ್ಣುಗಳಲ್ಲೆಲ್ಲಾ
ಹುಡುಕಾಡುತ್ತಿರುವೆ

—ಸಿದ್ಧರಾಮ ಹೊನ್ಕಲ್

ಗೆಳತಿ,

ಏಕೆ ಪತ್ರ ಬರೆಯಲಿಲ್ಲ? ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಂಡಿರುವೆಯಾ? ಒಳ್ಳೆಯ ಕೆಲಸ ಮಾಡಿದೆ. ಇದು ಅನಿವಾರ್ಯ ಕೂಡ.

ಏನು ಮಾಡಲಿ ಹುಡುಗೀ, ಬದುಕಿನ ತೀವ್ರತೆಯನ್ನು ನೀನು ಕೊನೆಗೂ ಅರ್ಥ ಮಾಡಿಕೊಳ್ಳಲೇ ಇಲ್ಲ. ನಿನ್ನ ಪರಿಚಯವಾದ ಮೊದಲ ದಿನವೇ ನಿನ್ನನ್ನು ಮೆಚ್ಚಿದ್ದೆ; ಮೆಚ್ಚಿದ್ದೆ ಎಂದರೆ ನೀನೊಬ್ಬ ಇಂಟಲಿಜೆಂಟ್ ಹುಡುಗಿಯೆಂದು ಗೆಳೆಯರಿಗೆಲ್ಲಾ ಹೇಳಿದ್ದೆ. ಅಂದಿನಿಂದಲೇ ಅಲ್ಲವೆ ನನ್ನ-ನಿನ್ನ ಪರಿಚಯ ಸ್ನೇಹಕ್ಕೆ ತಿರುಗಿದ್ದು.

ಆಗಿನ ನಿನ್ನ ಕಾಲೇಜು ದಿನಗಳು ನೆನಪಿಗೆ ಬರುತ್ತವೆ...

ಯಾವಾಗಲೂ ಕಾಲೇಜು-ಓದು ಎಂದು ಪುಸ್ತಕದ ಹುಳುವಾಗಿದ್ದ ನೀನು, ಪರಿಚಯವಾದ ಕೆಲ ತಿಂಗಳಿಂದ ಕಾಲೇಜು ಚಕ್ಕರ್ ಹೊಡೆದು ಹೆಚ್ಚಾಗಿ ಮನೆಯಲ್ಲೇ ಇರುತ್ತಿದ್ದ ನಿನ್ನನ್ನು ಏಕೆಂದು ಕೇಳಿದರೆ ಏನೇನೋ ನೆಪ ಹೇಳುತ್ತಿದ್ದೆಯಲ್ಲಾ?! ಕಾಲೇಜು-ಕಾಲೇಜಿನ ಗೆಳತಿಯರ ಪ್ರೇಮ-ಪ್ರಕರಣಗಳು ನಿನಗೆ ಬೇಸರ ತಂದಿದ್ದವೇ?

ನಾನು ಸಿಗರೇಟ್ ಸೇದುತ್ತಾ ಪ್ರೆಸ್‌ನ ಕೆಲಸದಲ್ಲಿ ತೊಡಗಿದ್ದಾಗ ಬಂದ ನೀನು "ಆ ಕೆಟ್ಟ ಚಟ ಬಿಡಬಾರ್ದ್" ಎಂದು ಮುಂಖ ತಿರುವಿದ್ದಕ್ಕೆ ನಿಮಗೊಂದು ಮಾತು ಹೇಳಿದ್ದೆ..."ಒಬ್ಬ ವ್ಯಕ್ತಿಗೆ ಕೆಟ್ಟ ಚಟಗಳಿವೆಯೆಂದರೆ ಅದು ಅವನ ದೌರ್ಬಲ್ಯ ಅಥವಾ ಆತನ ಮಾನಸಿಕ ನೋವುಗಳೇ ಕಾರಣ ನನ್ನ ನೋವು ನಿಮಗೆ ಅರ್ಥ ವಾಗದು" ನೀನು ಸುಮ್ಮನಾಗಿ ಮಾತು ಬದಲಾಯಿಸಿದ್ದೆ.

ಇದಾದ ಕೆಲವು ದಿನಗಳ ನಂತರ ನಿಮ್ಮಗೆಳತಿ ಕಲಾ ಬಂದರು, ನಾನು ಆಗ ತಾನೇ ಸಿಗರೇಟ್ ಹಚ್ಚಿದ್ದೆ. ಹತ್ತಿರ ಬಂದ ಅವರು ಗುಟ್ಟು ಹೇಳುವ ರೀತಿ, "ರ್ರೀ, ನೀವು ಏನೂ ಅಂದ್ಕೊಳ್ಳಿದ್ರೆ ಒಂದು ಮಾತು ಹೇಳ್ತೀನೆ.. ನಿನ್ನೇ ನನ್ನ ಒಬ್ಬ ಗೆಳತಿಯ ಅಣ್ಣನಿಗೆ ಕ್ಯಾನ್ಸರ್ ಬಂದು ಸತ್ತೋದ ಆತ ಭಾರೀ Smoke ಮಾಡುತ್ತಿದ್ದ ಈ ಸುದ್ದಿ ಕೇಳಿ ನಿಮ್ಮನ್ನೂ ನೆನೆಸಿಕೊಂಡು ತವನಿಧಿ ಬಹಳ ಅತ್ತಳು. ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇನಷ್ಟೇ..." ಎಂದು ಹೇಳಿ ಹೋದಾಗ ಗೊಂದಲದಲ್ಲಿ ಸಿಲುಕಿದ್ದೆ. "ನಾನು ಸಿಗರೇಟ್ ಸೇದಿದರೆ ಇವರಿಗೇನಂತೆ?" ಎಂದು ಕೊಂಡು ಮತ್ತೊಂದು ಸಿಗರೇಟ್ ಹಚ್ಚಿ, ನಾಲ್ಕು ದಿನ ಸೇದುವುದನ್ನು ಬಿಟ್ಟಿದ್ದೆ!

ಆ ದಿನ ನೀನೇ ನನ್ನ ಭೇಟಿಗಾಗಿ ಮೈದಾನಕ್ಕೆ ಕರೆದಾಗ ನನಗಿಷ್ಟವಿಲ್ಲದೇ ಅಲ್ಲಿಗೆ ಬಂದಿದ್ದೆ. ಆಗ ನಿನು. "ಮುಂದಿನ ತಿಂಗಳಲ್ಲಿ ನನ್ನ ನಿಶ್ಚಿತಾರ್ಥವಿದೆ. ಆತ ನನ್ನನ್ನು ಬಹಳ ಪ್ರೀತಿಸುತ್ತಾನೆ. ಆದರೆ ನನಗೆ ಕಿಂಚಿತ್ತೂ ಇಷ್ಟವಿಲ್ಲ...' ದುಃಖ-ನೋವು ವಿಷಾದ ಹೊತ್ತ ನಿಮ್ಮನ್ನು ನೋಡಿ "ಸ್ನೇಹ ಜೀವಿ" ಎಂದು ಸಂತೋಷ ಪಟ್ಟೆ. ನಿಮ್ಮ ನೋವಿನಲ್ಲಿ ನಾನೂ ಭಾಗಿಯಾಗಬೇಕೆನ್ನಿಸಿ, "ನೀವು ಯಾರನ್ನಾದರೂ ಪ್ರೀತಿಸಿದ್ದರೆ ಹೇಳಿ, ನಾನೇ ಅವರನ್ನು ವಿಚಾರಿಸುತ್ತೇನೆ" ನಿಮ್ಮನೊಂದ ಹೃದಯ ನನ್ನನ್ನು ಇಲ್ಲಿಯವರೆಗೂ ಏಳಿ ತಂದಿತ್ತು. "ಯಾರನ್ನು ಪ್ರೀತಿಸಿಲ್ಲ" ಎಂದು ಮಾತು ಬದಲಾಯಿಸಿ, "ನನ್ನದೊಂದು ಆಸೆ; ನೀವು ನಿಮ್ಮ ಲೈಫ್ ಪಾರ್ಟನರ್ ಸಿಗುವವರೆಗೂ Smoke ಮಾಡಬಾರದು. ಹಾಗೆಂದು ಮಾತು ಕೊಡಿ" ಎಂದು ನೀವು ಆಶ್ಚರ್ಯಕರವಾಗಿ ಅಳುತ್ತಿದ್ದಾಗ, ನಾನು ಅರ್ಥ ಕಂಡುಕೊಳ್ಳಲಿಲ್ಲ; ನನ್ನ ಅರ್ಥರಹಿತ ನಗುವನ್ನು ನೀವು ಅರ್ಥೈಸಿಕೊಳ್ಳಲು ಪ್ರಯತ್ನಿಸಲಿಲ್ಲ ಆ ಮಾತಿಗೆ ಏನೂ ಹೇಳದೇ ಸುಮ್ಮನಾಗಿದ್ದೆ.

ಗೆಳತೀ. ನೀನಂತೂ ನಿನ್ನ ನೋವನ್ನು ನನ್ನಲ್ಲಿ ಹಂಚಿಕೊಂಡು ಮನಸ್ಸು ಹಗುರ ಮಾಡಿಕೊಂಡೆ, ಅಂದಿನಿಂದ ನನ್ನ ಹೃದಯ ಇನ್ನೂ ಭಾರವಾಯಿತು. ಆ ಸಹೃದಯಿಗೆ ಗೆಳತಿಯಲ್ಲಿ ನನ್ನ ನೋವನ್ನೂ ಹಂಚಿಕೊಳ್ಳಬೇಕೆಂದು ಮನಸ್ಸು

ಹಾತೊರೆಯುತ್ತಿತ್ತು, ಹಾಗೆಂದುಕೊಂಡೇ ಸಿಗರೇಟ್ ಸೇದದೇ ಸುಮ್ಮನೆ ಕುಳಿತಿದ್ದಾಗ ಅದನ್ನು ನೋಡಿ ಸಂತೋಷದಿಂದ ಓಡಾಡುತ್ತಿದ್ದೆಯಲ್ಲಾ? ಆಗ ನನ್ನ ಮೇಲೆ ನಿನಗೆ ಪ್ರೀತಿ ಅಂಕುರಿಸಿತ್ತೇ?.

ನಿನ್ನ ಆತ್ಮೀಯತೆ ನನ್ನನ್ನು ದಿನೇ ದಿನೇ ಹಿಂಸಿಸತೊಡಗಿತು. ರಾತ್ರಿಯೆಲ್ಲಾ ನಿದ್ದೆಯಿಲ್ಲದೇ ಹೊರಳಾಡಿಸಿತು. ಐದಾರು ದಿನಗಳ ನಂತರ ಬಹಳ ಧೈರ್ಯ ತುಂಬಿಕೊಂಡು ನಿಮ್ಮನ್ನು ಮೈದಾನಕ್ಕೆ ಆಹ್ವಾನಿಸಿದ್ದೆ. ಒಂದು ವಾರ ಸ್ಮೋಕ್ ಮಾಡುವುದನ್ನು ಬಿಟ್ಟ ನಾನು, ಅಂದು ಒಂದು ಪ್ಯಾಕ್ ಸಿಗರೇಟನ್ನು ಜೊತೆಗೇ ತಂದಿದ್ದೆ

"ಮತ್ತೆ ಶುರು ಮಾಡಿದ್ರಾ?" ನಿಮ್ಮ ಪ್ರಶ್ನೆಗೆ ಸಿಗರೇಟ್ ತುಟಿಗಿಟ್ಟು ಕಡ್ಡಿಗಿರುವುದಷ್ಟೇ ಉತ್ತರವಾಗಿತ್ತು. ನನ್ನ ಮಾತು ಪ್ರಾರಂಭಿಸಿದೆ........... "ತವನಿಧಿ, ನೀವೇ ಹೇಳಿದ ಹಾಗೆ ನಾನು ಸ್ಮೋಕ್ ಮಾಡುವುದನ್ನು ಆರಂಭಿಸಿದ್ದೇನೆ ನನಗಾಗಲೇ ಲೈಫ್ ಪಾರ್ಟನರ್ ಸಿಕ್ಕಿದ್ದಾಳೆ!" ಎಂದಾಗ ಅರ್ಥವಾಗದೇ ನನ್ನ ಮುಖ ನೋಡಿ ಮುಗುಳ್ನಕ್ಕಿದ್ದೆಯಲ್ಲ? ಆ ನಗುವಿನಲ್ಲಿ ಯಾವ ಭಾವನೆಯಿತ್ತೋ ಗಮನಿಸಲಿಲ್ಲ, ಸ್ವಲ್ಪ ಸಾವರಿಸಿಕೊಂಡು, "ನನಗಾಗಲೇ ಮದುವೆಯಾಗಿ ನಾಲ್ಕು ವರ್ಷಗಳಾದವು; ಬಾಲ್ಯವಿವಾಹ. ಈಗಿನ ಹುಡುಗರ ಪ್ರಕಾರ [18ನೇ ವಯಸ್ಸು] ಪ್ರೀತಿ ಮಾಡುವ ವಯಸ್ಸಿನಲ್ಲಿ;...

ನನಗೆ ಪ್ರೀತಿಯ ಕಲ್ಪನೆಯೇ ಇಲ್ಲದ ವಯಸ್ಸಿನಲ್ಲಿ ಹೆತ್ತವರು ಮದುವೆ ಮಾಡಿದರು. ನನ್ನವಳು ಇನ್ನೂ ಚಿಕ್ಕವಳು. ತವರಿನಲ್ಲಿದ್ದಾಳೆ. ಅವಳ ಬಗ್ಗೆ ಏನೂ ಹೇಳಲಾರೆ." ಮತ್ತೇನು ಹೇಳುವುದೆಂದು ತೋಚದೇ, "ಅದಕ್ಕೇ ಈ ಸಿಗರೇಟ್... ಅಲ್ಲದೇ ನಾನು ಕುಡಿಯುತ್ತೇನೆ ಕೂಡಾ" ಹೀಗೆಂದಾಗ ನೀವು ಹುಬ್ಬೇರಿಸುತ್ತೀರೆಂದುಕೊಂಡು ಮತ್ತೊಂದು ಸಿಗರೇಟ್ ಹಚ್ಚಿದ್ದೆ. ಇದನ್ನು ಪ್ರತಿಭಟಿಸಲು ಬಂದ ಕೈಗಳು ತನ್ನಷ್ಟಕ್ಕೆ ತಾನೇ ನಿಂತಿದ್ದವಲ್ಲ!

ನಂತರದ ಕೆಲವು ದಿನಗಳಲ್ಲಿ ನಾವು ಪ್ರೆಸ್ ಬದಲಾಯಿಸುತ್ತೇವೆಂದಾ ತಿಳಿಸಿದಾಗ ಮೈಸೂರಿಗೆ ಹೋಗುವ ಪ್ರೋಗ್ರಾಂ ಕ್ಯಾನ್ಸಲ್ ಮಾಡಿ, ನಮ್ಮ ಗೆಳೆತನ ಬರೀ ಮೂರೇ ತಿಂಗಳಿನಲ್ಲಿ ಮುಗಿಯುತ್ತದೆಯೇ ? ನಂತರ ನೀವು ನನ್ನನ್ನು ಮರೆತು ಬಿಡುತ್ತೀರಲ್ಲವೇ ? ಎಂದೆಲ್ಲಾ ಅತ್ತಾಗ, ನಿಮ್ಮೆಲ್ಲಾ "ಅಳು" ಗಳು ಸ್ನೇಹದ ಅತಿರೇಕವೆಂದುಕೊಂಡು ನನ್ನ ಗೆಳೆಯನಿಗೆ ಇವೆಲ್ಲಾ ತಿಳಿಸಿದರೆ ಅದಕ್ಕವನು, " ಈ ರೀತಿ ವರ್ತಿಸಬೇಕಾದರೆ ಅವಳು ಖಂಡಿತಾ ನಿನ್ನನ್ನು ಪ್ರೀತಿಸ್ತಿದಾಳೆ ಕಣೋ", ಎನ್ನಬೇಕೆ? ಛೀ! ಅವನ ಈ ಕೆಟ್ಟ ಯೋಚನೆಗೆ ಅಂದೇ ಛೀಮಾರಿ ಹಾಕಿ "ಎಲ್ಲರಂಥವಳಲ್ಲ ನನ್ನ ಗೆಳತಿ" ಎಂದು ಹೆಮ್ಮೆಯಿಂದ ಹೇಳಿ ಕೊಂಡಿದ್ದೆ. ಏಕೆಂದರೆ ಮದುವೆಯಾದ ಹುಡುಗನನ್ನು ಯಾರುತಾನೇ ಪ್ರೀತಿಸುತ್ತಾರೆ?

ಆದರೆ ಈ ಮಾತಿಗೆ ವ್ಯತಿರಿಕ್ತವೆಂಬಂತೆ ಹೊಸ ವರ್ಷದ ದಿನ ಕಳುಹಿಸಿದ Greetings ಜೊತೆಗೆ ಕೊಟ್ಟ ಚೀಟಿಯನ್ನು ನೇರವಾಗಿ ನನ್ನ ಗೆಳೆಯನ ಹತ್ತಿರವೇ ಬಿಚ್ಚಿ ಓದಿದಾಗ ಅದರಲ್ಲಿನ "ಐ ಲವ್ ಯು" ಎಂಬ ವಾಕ್ಯ ನೋಡಿ ದಂಗಾಗಿ ಗೆಳೆಯನ ಕಡೆ ವಾರೆ ನೋಟ ಬೀರಿದಾಗ "ಓಹೋ, ಇದೇನಾ ನಿಮ್ಮ ಸ್ನೇಹ?" ಎಂದು ವ್ಯಂಗವಾಗಿ ಛೇಡಿಸಿದ್ದ. ಅವನು ಅಂದು ಹೇಳಿದ ಮಾತು ನಿಜವಾಗಿತ್ತು. ಏಕೆ ಹಾಗೆ ಮಾಡಿದೆ? "ನನಗೆ ಬಾಲ್ಯದಲ್ಲಿಯೇ ಮದುವೆಯಾಗಿದೆ" ಎಂದದ್ದನ್ನು ತಮಾಷೆಯಾಗಿ ತೆಗೆದುಕೊಂಡೆಯಾ ? ಎಂಥ ದಡ್ಡ ಹುಡುಗಿ ನೀನು.

ಆಗಲೇ ನಿಮಗೊಂದು ಚೀಟಿ ಬರೆದಿದ್ದೆ. ಗೆಳತೀ, ನಾನು ಈ ಪ್ರೀತಿ-ಪ್ರೇಮಗಳಲ್ಲಿ ಅರ್ಥವನ್ನೇ ಕಳೆದುಕೊಂಡಿದ್ದೇನೆ. ನನ್ನನ್ನು ಹೆಚ್ಚು ಹಚ್ಚಿಕೋ ಬೇಡ ಎಂಬ ನನ್ನ ನೇರ ಮಾತೂ ನಾಟಲಿಲ್ಲವೇ ?

ಅಂದು ನಿಮ್ಮ ಹುಟ್ಟು ಹಬ್ಬವೆಂದಾಗ, ಆ ಸಂಜೆ ಮೈದಾನದಲ್ಲಿ; ಸಿಹಿ ತಂದು. ನಿನ್ನ ಅತಿಯಾದ ಸ್ನೇಹದಿಂದ ನಾನೇ ಸಿಹಿ ಬಾಯಲ್ಲಿಟ್ಟು ಶುಭಾಶಯ ಹೇಳಿದಾಗ ನಿನಗದೆಷ್ಟು ಖುಷಿಯಾಗಿತ್ತು ? ಆ ಮೋಡ ಕವಿದ ಸಂಜೆ, ಬೇಸಿಗೆಯ ಉರಿಬಿಸಿಲ ದಗೆಯಿಂದ ಕಾವಿಟ್ಟಿದ್ದ ಭೂಮಿ ಮಳೆಗಾಗಿ ಹಾತೊರೆಯುತ್ತಿತ್ತು. "ಮೊದಲೇ ಹೇಳಿದ್ರೆ ಏನಾದ್ರೂ ಗಿಫ್ಟ್ ತರ್‍ತಿದ್ದೆ. ಇರಲಿ, ನಿಮಗೇನು ಇಷ್ಟ ಹೇಳಿ, ನಾಳೆ ತಂದು ಕೊಡುವೆ" ನನ್ನ ಪ್ರಶ್ನೆಗೆ ಮುಗ್ಧವಾಗಿ ನೋಡಿದ ನೀನು, "ಏನು ಕೇಳಿದ್ರೂ ಕೊಡ್ತೀರಾ ?" - "ಖಂಡಿತಾ" ಆಗ ತಾನೇ ಬಿದ್ದ ಮಳೆಯ ಹನಿಯನ್ನು ಅಂಗೈಯಲ್ಲಿಡುದು ಅದಕ್ಕೆ ಮುತ್ತಿಡುತ್ತಾ... "ತರುವುದೇನೂ ಬೇಕಾಗಿಲ್ಲ, ನನಗೊಂದು ಮುತ್ತು ಕೊಡಿ ಸಾಕು" ಎಂದು ಎರಡೂ ಕಣ್ಣನ್ನು ಮಿಟುಕಿಸಿ ಕೊರಳು ಕೊಂಕಿಸಿದ ಹುಡುಗೀ, ಆ ನಿನ್ನ ಹುಚ್ಚು ಆಸೆಗೆ ಆಶ್ಚರ್ಯದ ಜೊತೆಗೆ ನಗು ಬಂದಿತ್ತು. "ಇದೇನು? ಮುತ್ತು ಕೊಡ್ಲಿಕ್ಕೆ ನಾನು ನಿನ್ನ ಲವ್ವರಾ?" ಎಂದು ಛೇಡಿಸಿದ್ದಕ್ಕೆ, "ಏಕೆ? ಕಿಸ್ ಕೊಡ್ಲಿಕ್ಕೆ ಲವ್ವರ್ರೇ ಆಗ್ಬೇಕಾ? ಗೆಳೆಯ ಕೊಟ್ರೆ ತಪ್ಪೇನು?" ಎಂದು ಬಾಯಿ ಮುಚ್ಚಿಸಿ ಬಲವಂತಪಡಿಸಿದಾಗ ಅನಿವಾರ್ಯವಾಗಿ ನನ್ನ ಬೊಗಸೆ ಕೈಗಳಲ್ಲಿ ನಿನ್ನ ಮುಖವಿಡಿದುಕೊಂಡು ಹಣೆಗೊಂದು-ಕೆನ್ನೆಗೊಂದು ಮುತ್ತು ಕೊಟ್ಟಾಗ ತೃಪ್ತಿಯ ನಗೆ ಬೀರಿ ಸಂತೋಷದಿಂದ ನನ್ನೆರಡು ಕೈ ಹಿಡಿದುಕೊಂಡು ಅತ್ತಿದ್ದೆಯಲ್ಲ ?

ಗೆಳತಿ. ನನಗಿನ್ನೂ ಕಾಡುವ ಪ್ರಶ್ನೆಯೆಂದರೆ, ನನ್ನನ್ನು ಅದ್ಹೇಗೆ ಮೆಚ್ಚಿಕೊಂಡೆ? ನನ್ನಲ್ಲಿ ಅಂತಹ ಆಕರ್ಷಣೆ ಏನಿದೆ ? ಈ ಪ್ರಶ್ನೆ ನನ್ನನ್ನು ಪದೇ ಪದೇ ಕಾಡಿದಾಗ ಒಮ್ಮೆ ನೇರವಾಗಿ ನಿಮ್ಮ ಗೆಳತಿ ಕಲಾರನ್ನು ಕೇಳಿಯೇ ಬಿಟ್ಟೆ. ಅದಕ್ಕವರು, "ನೀವು ಬರಹಗಾರರಂತೆ, ಅವನಿಧಿಗೆ ಬರಹಗಾರನನ್ನೇ ಮದುವೆ

ಯಾಗಬೇಕೆಂಬ ಆಸೆ, ಅಲ್ಲದೇ ನೀವು ತುಂಬಾ "ಒಳ್ಳೆಯುವರಂತೆ!" ಎಂಥ ಮುಗ್ಧ ಉತ್ತರ! ಅವರ ಮಾತು ಕೇಳಿ ನಾನು ಬಂದು ಬಹಳ ನಕ್ಕಿದ್ದೆ. ಆ ಮಾತುಗಳು ನೆನಪಾದಾಗ ಈಗಲೂ ನಗು ಬರುತ್ತದೆ.

ನಾನು ಬರಹಗಾರನೇ? ಅದಕ್ಕೆ ನಿಮಗೊಮ್ಮೆ ಹೇಳಿದ್ದೆ. "ಬರಹಗಾರರನ್ನು ಎಂದೂ ನಂಬಬೇಡ ಏಕೆಂದರೆ 'ಬರಹದಂತೆ ಬದುಕು ಇರುವುದಿಲ್ಲ' ಅಲ್ಲದೇ ನಾನು ಬರಹಗಾರನೂ ಅಲ್ಲ" ಇನ್ನೂ ಒಳ್ಳೆಯುವರು? ಒಳ್ಳೆಯುವರೆಂದರೆ ಹೇಗಿರುತ್ತಾರೆ? ಒಳ್ಳೆಯುವರೂ ಇದ್ದಾರೆಯೇ? ಇದು ನನಗಿನ್ನೂ ಕಾಡುವ ಪ್ರಶ್ನೆ.

ಇಷ್ಟಾದರೂ ನಿನು ನನ್ನನ್ನು ಪ್ರೀತಿಸುತ್ತಲೇ ಇದ್ದೆಯುಲ್ಲ? ಅದೆಂಥಾ ಪ್ರೀತಿ ನಿನ್ನದು? ಅದರಲ್ಲೂ ಬರೀ ಸಂಪ್ರದಾಯುದ ಮಧ್ಯೆ ಬೆಳೆದ ಹುಡುಗಿ ಈ ನಾಸ್ತಿಕನ ಧೋರಣೆಗಳು ವ ತ್ತು ಸದಾ ಬೀಡಿ-ಸಿಗರೇಟ ಸೇದುತ್ತಾ, ಕುಡಿದು ತೂರಾಡುತ್ತಾ ಹಾಯಾಗಿದ್ದ ಈ ಒಪ್ಪ ಹುಡಗನ ಗುಣಗಳು ಅದ್ಹೇಗೆ ಮೆಚ್ಚುಗೆ ಯಾದವು?

ಪ್ರೀತಿಯು ಅರ್ಥ ಗೊತ್ತಿಲ್ಲದ ನನಗೆ ಅದೆಷ್ಟು ಬೇಗ ಪ್ರೀತಿಸಿ-ನನ್ನನ್ನೂ ಪ್ರೀತಿಸುವ ಹಾಗೆ ಮಾಡಿ ಮಾಯುವಾದೆ? "ಬಾಲ್ಯದಲ್ಲಿ ಮದುವೆಯಾದ ಆ ಹುಡುಗಿ ನಾನಾಗಬಾರದೇ? ಎಂದು ಕನಸಿದ ಹುಡುಗೀ, ಈಗ ನಾನೂ ಹಾಗೇ ಕನವರಿಸುತ್ತಿದ್ದೇನೆ. ನಿಜ ಹೇಳುತ್ತಿದ್ದೇನೆ ಗೆಳತಿ. ಪ್ರೀತಿ ಎಂದರೆ ಹೇಗಿರುತ್ತದೆಂದು ನನಗೀಗ ಅರ್ಥವಾಗುತ್ತಿದೆ. ನೀನು ಹಿಂದೆಲ್ಲಾ ಅನುಭವಿಸಿದ ವೇದನೆಯುನ್ನು ಈಗ ನನಗೆ ಬಿಟ್ಟು ಹೋಗಿರುವೆಯುಲ್ಲ ಅದನ್ನು ನಾನು ಅನುಭವಿಸುತ್ತಿದ್ದೇನೆ.

ಈಗ ನೀನು ಗಂಡನ ಮನೆಯುಲ್ಲಿ; ಪದರುಗುಟ್ಟುವ ಆ ನಲ್ಲನ ಹೃದಯದಲ್ಲಿ ಮುಖ ಹುದುಗಿಸಿ, ಈ ಗೆಳೆಯುನ ನೆನಪನ್ನು ಆ ಹುಡುಗನ ಜೊತೆ ಹಂಚುತ್ತಾ... "ನಮ್ಮ ಮನೆಯು ಹತ್ತಿರ ಒಬ್ಬ ದಡ್ಡ ಹುಡಗ ನಿದ್ದ..." ಎಂದು ಕತೆ ಹೇಳುತ್ತಾ, ಅತನ ಬಿಸಿಯುಪ್ಪುಗೆಯುಲ್ಲಿ ನನ್ನೊಂದಿಗಿನ ಮಧುರ ಕ್ಷಣಗಳನ್ನು, ನನ್ನ ಮಾತು; ಸಿಹಿ ಮುತ್ತನ್ನು ಒಂದೆರೆಡೇ ದಿನಗಳಲ್ಲಿ ಮರೆತಿರ ಬಹುದಲ್ಲವೇ?

ಪ್ರೀತಿ ಹಂಚಿದ ಹುಡುಗೀ, ಈಗ ನನ್ನಲ್ಲಿ ಪ್ರೀತಿ ಅಂಕುರಿಸುತ್ತಿದೆ. ಆ ನಿನ್ನ ಆತ್ಮೀಯತೆ, ಪ್ರೀತಿ, ಕಂಡಾಗಲೆಲ್ಲಾ ಎರಡೂ ಕಣ್ಣು ಮಿಟುಕಿಸಿ ಕೊರಳು ಕೊಂಕಿಸುವ ನೋಟ ಇವೆಲ್ಲಾ ನನ್ನ ಹೆಂಡತಿಯುಲ್ಲಿ ಸಿಕ್ಕುತ್ತದೆಯೇ? ನೀನು ನನಗೆ ಕಲಿಸಿಕೊಟ್ಟ ಪ್ರೀತಿಯು ಪಾಠವನ್ನು ಈ ಮುಗ್ಧ ಹೆಂಡತಿಗೆ ಕಲಿಸಿ ಕೊಡಲೇ? ಅವಳ ಕಣ್ಣಲ್ಲಿ ನಿನ್ನ ಕಣ್ಣನ್ನು ಹುಡುಕಲೆ? ತಿಳಿಸು.

ಇಂತಿ :

ನಿನ್ನ ಪ್ರೀತಿಯ ದಡ್ಡ ಹುಡುಗ.

ಬೆಂದೊಡಲ ಧ್ವನಿಗಳು

ಸಭಾ ಏನು ಚೆಂದ ಕೊಡ್ತೈತೋ। ಈ ಹಾಡಿನ್ಯಾಗ
ನಮ್ಮೆದೆಯ ನೋವು ತುಂಬಿಕೊಂಡೈತೋ ॥ಪ॥

ಹರಕ್ಹಂಗಿ ಹಾಕಿದೋರು। ತುತ್ತು ಅನ್ನ ಇಲ್ಲದವರೋ
ತಗಲ್‌ಬಾಜಿ ಮಂದಿ ಬುಡಕ ಕುರಿಯಾಗಿ ಡೊಗ್ಗಿದೋರು
ಬಾಯಿದ್ರೂ ಮಾತಿಲ್ಲಾ ಕಿವಿಯಿದ್ರೂ ಕೇಳೊದಿಲ್ಲಾ
ಸಾವಿರಾರು ವರ್ಷದಿಂದಾ। ಸತ್ತ್ಗೆಟ್ಟು ಉಳಿದವರೋ
ಕಣ್ಣಾಗ, ಜೀಂವಾ ಹಿಡ್ದು ಸಣ್ಣಾಗೀವೋ ನಾವೋ ॥೧॥

ಜೆಲ್ಲಡಗಿ ಮ್ಯಾಳದವರು ಮುಸಿ ಹಾಕಿ ಗೋಣ್ಹಾಕುವವರೋ
ಮ್ಯಾಲಿನೋರ ಮಾತಿಗೆ ಉಗುಳ್ಹಾಕಿ ದಾಟಿದವರೋ
ಗಾಣದ್ಹೆತ್ನಂಗ ದುಡದರೂ ಬಲು ಶಾಣೇರಾಗದವರೋ
ಯಪ್ಪಾ ಯಪ್ಪಾ ಹೌದಂತ ಮತ್ತ್ಯ ಸಲಾಮು ಹೊಡೆವವರೋ
ವಗ್ಗಾಣಿ ಚಾ ಕೊಟ್ರ ಓಟ್ಹಾಕಿ ಬರುವವರೋ ॥೨॥

ಬಿಸುಲು, ಮಳಿ, ಚಳಿ ಅನ್ನದ ಮಣ್ಣಾಗಿ ದುಡಿತೀವೋ
ತುಳಿವವರು ತುಳುಕೊಂತ ಮ್ಯಾಲಮ್ಯಾಲ ಮೆರಿತಾರೋ
ನಂಬಿಸಿ ಹಿಂದ ಹಾಕಿ ಮುಂದಾಗಿ ಬೆಳದಾರೋ
ಬೆಳೆದವರು ಖುರ್ಚಿಗಾಗಿ ಏಕ್ಕರ್ಲ್ಯಾಡಿ ಸಾಯುತಾರೋ
ಅರುವು ಅನ್ನೋ ಅಕ್ಷರ ಕಲ್ತು ಎಚ್ಚರಾಗದೊಳ್ಳೇದೋ ॥೩॥

ಇವತ್ನಾಳೆ ಜನ ನೋಡು ಸುಮ್ನಿದ್ರ ಗುದ್ದಪ್ನೋರು
ಎದ್ದು ನಿಂತ್ರ ಹೆದರಿಕೊಂಡು ಸನಿಯಾಕ ಬರದವರೋ
ಎಲ್ಲರೂ ನಂ ಬಗ್ಗ ಬಲು ಕನಕರ ತೋರುಸ್ತಾರೋ
ಭಾಷಣದ ಬದ್ನೆಕಾಯಿ ಪುರಾಣ ಹೇಳ್ತಾರೋ......
ಆಚರಣೆಗೆ ಅಂದ್ರ ಆರುಮಾಳ ದೂರ ಸರ್ದು ನಿಂದರ್ತಾರೋ ॥೪॥

ನೋವುಂಡ ನಾವೆಲ್ಲಾ ಒಣ ಹ್ಯಾವ ಮರಿಬೇಕೋ
ನೊಂದವರು ಒಂದಾಗಿ। ತೆಲಿ ಖರ್ಚು ಮಾಡಬೇಕೋ
ಎಲ್ಲೀ ಧ್ವನಿ ಐತೋ ಯಣ್ಣಾ ಅಲ್ಲಿ ನ್ಯಾಯ ಸಿಗತೈತೋ
ಚಂದದಿಂದಾ ಶಾಂತವಾಗಿ। ಪದ ಕೇಳಿದ ಮ್ಯಾಲ
ಗಪ್ನ ಒಬ್ನ ಕುಂತು ನೀನು। ವಿಚಾರ ಮಾಡೋ ಮನದಾಗ ॥೪॥

— **ಶರಣಪ್ಪ ವಡಿಗೇರಿ**

ಕವನಗಳಿಂದ ಕೊಲೆಯಾದ ಗೆಳೆಯ

ಕವಿಮಿಂತ್ರ
ಬೆಂಜಮಿನ್ ಮೊಲಾಯಿಸ್
ದಕ್ಷಿಣಾಫ್ರಿಕೆಯ ಕಾಡುಂ ಹಸಿರು ನೀ.
ಕಪ್ಪೆಂಬ ಕಾರಣ ಹೂಡಿ
ಇಂದಿಗೂ ಆಳುವ ಬಿಳಿಯರು
ನಿಜವಾಗಿಯೂ ಬಿಳಿಯರಲ್ಲ.
ಸ್ವಾತಂತ್ರ್ಯ ಸಮಾನತೆಯ
ನಿಮ್ಮ ಕಾಳಗ ಅಭಿನಂದನೀಯಂ
ಕವನಗಳಿಂದ ಪ್ರೇರಿಸುವ
ನಿನ್ನನ್ನವರು ಸಹಿಸಿಯಾರೆ?
ಎಲ್ಲವೂ ಅವರಲ್ಲಿವೆ
ಅದಕ್ಕಾಗಿ ಕೊಲೆಗಾರನಾಗಿಸಿ
ಗಲ್ಲಿಗೇರಿಸಿದರು.

ಬೆಂಜಮಿನ್......
ನಿನ್ನ ಕೈಗಳು ಕವನ ಬರೆದಿವೆ
ಆದರವು ಕೊಲೆ ಮಾಡಿಲ್ಲ
ಇದು ವಿಶ್ವಕ್ಕೇ ಗೊತ್ತಾಗಿದೆ
ಕ್ಷಮದಾನದ ವಿಶ್ವದೊಕ್ಕೋರಲಿಗೆ
ಪ್ರಿಟೋರಿಯಾದ "ಬೋಥಾ" ಕಿವುಡಾದ
ನಿನ್ನ "ಹೆಮ್ಮೆ" ಯ ಸಾವಿನಿಂದ
ಎಲ್ಲವೂ ಮುಗಿಯುಂವದಿಲ್ಲ ಬೆಂಜ್
ಹೋರಾಟಕ್ಕೆ ಗಾಂಧೀ ಸ್ಫೂರ್ತಿಯ
ಜಗದ ಜನರ ಒಡನಾಡಿ
"ಭಾರತರತ್ನ" ನೆಲ್ಸನ್ ಮಂಡೆಲಾ
ತುಳಿಸಿಕೊಂಡ ಹಾವಾಗಿದ್ದಾನೆ
ಬೆಂಜಮಿನ್...ನಿನ್ನ ಸಾವು ಸಾವಲ್ಲ
ಜೀವಂತವಾಗಿರುವೆ, ಚೇತನವಾಗಿರುವೆ
ಹೋರಾಟದ ಬಂಧುಗಳಲ್ಲಿ.

○ ಹನುಮೇಶ ಗುಮಗೇರಿ.

ವಚನಗಳು

1

ಹಂದಿಯೊಂದು ಮನೆಮಾಡಿದೆ ತಿಪ್ಪೆಯಲ್ಲಿ
ಕೇರಿ-ಕೇರಿ ತಿರುಗುತಿದೆ ಎಡಬಿಡದೆಲ್ಲೆಲ್ಲಿ
ಹಸನವಿದೆಯೋ ಇಲ್ಲವೋ ಎಂದು ಕೆದಕುತಿದೆಯಲ್ಲಿ
ಕೆಣಕಾಟವಾಡಿ ಕಡೆಹಾಯುತಿದೆ ಅಲ್ಲಿ.
ಬಗ್ಗದೇ ಹೋದವನೆದುರು ಹಾಕಿ ಕೆಂಡವಿಸುತಿದೆಯಲ್ಲಿ
ಕೆವಗೂದಲನ್ನು ನಿಮಿರಿಸಿ, ಕೆಡೆನುಡಿವವರ ಕೊಲ್ಲಿ,
ಮುಂದೆ ಮುಂದೆ ಸಾಗುತಿದೆ ಕಾಣಾ,
ನಿಜಗುರು ಮಹಾಂತಲಿಂಗ.

2

ಗಂಡ ಬೇಸರಾದರ ಹಾರುವನು ಹೂದೋಟಕೆ
ಹೆಂಡತಿ ಮನ ಕದಡಿದರೆ ಸೇರುವಳು ಒಳಮನೆ
ಗಂಡ-ಹೆಂಡತಿ ನಡುವೆ ಮಕ್ಕಳು ಘಾಸಿ
ಒರಲುತಿವೆ ಅವ್ವಾ! ಅವ್ವಾ!! ಎಂದು
ಕರೆಯುತ್ತಿವೆ ಅಪ್ಪಾ! ಅಪ್ಪಾ!! ಎಂದು
ಮಾತಾಡರು ಯಾರೂ ಮೌನ ತುಂಬಿದೆ
ಮಕ್ಕಳು ತಮ್ಮ ತುಂಟಾಟಬಿ.
ಮರೆಸವರು ಗಂಡ-ಹೆಂಡಿರ ವಿರಸವ
ನೋಡಾ, ನಿಜಗುರು ಮಹಾಂತಲಿಂಗ

3

ಅಟ್ಟುಣ್ಣುವವನ ಹೆಂಡತಿಯಾಗಬಾರದು
ಮುಟ್ಟಿ ಹೊಡೆವವನ ಆಳಾಗಬಾರದು
ಗಟ್ಟಿಯಾಗಿ ಅಟ್ಟುಣ್ಣುವನ ಜೊತೆ ಬೆರೆದು.
ದಿಟ್ಟತನದಿ ಕೃಷಿಕಾಯಕವಲಿ ನಲಿದು,
ಆಗದು ಎಂಬುವ ಎಂದೆಂದೂ ಮರೆದು,
ಆಗಮ್ಯದಲ್ಲಿ ಬೆರೆತು ಬೇರಿಲ್ಲಂತಾದುದ
ಸೋಜಿಗ ಕಾಣಾ, ನಿಜಗುರು ಮಹಾಂತಲಿಂಗ.

4

ತಾಯಿ ಸತ್ತು ಸೋದರ ಮಾವನಿರಬೇಕೆಂಬ
ಪುರಾತನ ಮಾತ ನಂಬಿ ಕೆಡಬೇಕು.
ತಾಯಿಯು ಸತ್ತಾವನ್ನಾದರೂ ತೋರಲೇ?
ಅದು ಆಗದು, ಸತ್ತು, ಸತ್ತಾ ಎಲ್ಲಾ
ಅವರವರೊಂದಿಗೇ ಸತ್ತು ಹೋಗಿವೆ
ತಾಯಿ ತಾಯಿಯೇ! ಸೋದರ ಮಾವ
ಸೋದರ ಮಾವನೇ! ತಾಯ ಸ್ಥಾನವ
ತುಂಬಲಾದೀತೇ ಅನ್ಯರಿಗೆ. ಕಾರಣ,
ನಿನ್ನ ವಿನಾ ಯಾರನೂ ನಂಬದಿರಲಿ
'ನಂಬಿದರೆ ಕೆಡಕು ಕಟ್ಟಿಟ್ಟಬುತ್ತಿ' ಕಾಣಾ,
ನಿಜಗುರು ಮಹಾಂತ ಲಿಂಗ.

5

ಚಿತ್ತದ ತೀರ್ಪು ಶುದ್ಧವೆಂದು ತಿಳಿ
ಶುದ್ಧವಿದ್ದೂ ಕೋತಿಯಾಗುವದು ಬೇಡ.
ಲಂಘನೆ ಒಳ್ಳೆಯದರತ್ತ ಇದ್ದರೆ ಸುಖ
ಕೆಟ್ಟದರತ್ತ ಹಾರಿದರೆ ಮುರಿದೀತು ಮೂಳೆ
ನಿನ್ನ ನೀನು ನಿರ್ಲಿಪ್ತನಾಗಿರುವುದ ಕಲಿತುಕೊಳ್ಳು,
ಇದ ಕರುಣಿ ಸಾ. ನಿಜಗುರು ಮಹಾಂತ ಲಿಂಗ.

○★○

ಡಾ|| ಜಯಶ್ರೀ ದಂಡೆ ಸಂಪಾದಕಿ 'ಕವಿಮಾರ್ಗ'
ಸರಸ್ವತಿಪುರ, ಎ. ಎ. ಅಂಚೆ ಕಲಬುರ್ಗಿ-6

ಕನಸಿನೊಳಗೊಬ್ಬ "ರಾಮ"

ಮೊನ್ನೆ ಕನಸಿನಲ್ಲಿ
'ರಾಮ' ಬಂದಿದ್ದ
ತಲೆಯಲ್ಲಿ ಕಿರೀಟ ಇರಲಿಲ್ಲ
ಕೈಯಲ್ಲಿ ಬಿಲ್ಲು ಬಾಣಗಳೂ ಇರಲಿಲ್ಲ
ಕಾಲೂ ಬರಿದಾಗಿದ್ದವು.
ಕೆದರಿದ ತಲೆ ಹರಿದ ಅಂಗಿ
ಮುಖದ ತುಂಬಾ ದಾಡಿ ಮೀಸೆ:
ಆತ ದಡ ದಡ ಬಾಗಿಲು ಬಡಿದ
ಗಡ ಬಿಡಿಸಿ ಎದ್ದೆ
ಯಾರು? ಏನು? ಎನ್ನುತ್ತಲೇ
'ನಾನು ಸರ್, ರಾಮ
ಹಸಿವೆಯಾಗಿದೆ ಸ್ವಲ್ಪ
ತಿನ್ನೋಕೆ ಕೊಡ್ತೀರಾ" ಅಂದ
ನಾನು ತಮಾಷೆಗೆ
"ಯಾಕಪ್ಪಾ, ಮನೇಲಿ ಸೀತೆ ಇಲ್ವೆ"ಎಂದೆ
"ಇದ್ಲು ಸಾರ್, ಆದರೆ
ನನ್ನ ಬಡತನ ನೋಡಿ
ತವರಿಗೆ ಹೋದ್ಲು" ಅಂದ
"ಮತ್ತೆ ಮನೆ"? ನನ್ನ ಪ್ರಶ್ನೆ
"ಸಾಲ ಮಾಡಿದ್ದೆ ಹೋಗ್ಬಿಡ್ತು"
ಎಂದು ತಲೆ ಕೆಳಗೆ ಹಾಕಿದ
ನನ್ನವಳಿಗೆ ಅನ್ನ ತರಲು ಹೇಳಿದೆ
ತಂದು ಹಾಕಿದರೆ ಗಬಗಬನೆ ತಿನ್ನ ತೊಡಗಿದ
ಆತ ತೃಪ್ತಿಯಿಂದ ಉಣ್ಣುತ್ತಿದ್ದ
ನಾನು ಮತ್ತೆ ಪ್ರಶ್ನಿಸಿದೆ
"ನಿನಗೆ ಒಂದು ದೊಡ್ಡ ಗುಡಿ
ಕಟ್ತಾರಂತೆ ಹೌದೆ?
"ಹೌದೇ!" ಅವನೂ ಕೇಳಿದ.
ನಾನು ಸುಮ್ಮನಾದೆ

—ಪ್ರಭುದೇವ ಹಾದಿಮನಿ

ಶ್ರೀ ಚರಬಸವ

ಹೊಸ ಯುಗದಿ ಹೊಂದಿರಣ
ಚೆಲ್ಲಿರುವೆ ಎಲ್ಲೆಡೆ
'ಕಾಯಕ'ದ ಕಿರಣ
ನಿನಗಾಗಿ ಚಿಗಿತಿವೆ
ಹಸಿರು ತೋರಣ
ನೋಡುಬಾ ಓ ಚರಬಸವ ಶರಣ
ಕರುಣೆ ಸಹಿತ ನಿನ್ನ ಜ್ಞಾನ ಬಾಣ
ತಗುಲಿ ತೊಲಗಲಿ ಕಷ್ಟಗಳ ಕಣ
ನೋವು ಮರೆತು ಬಾಳುವೆ ಈ ಕ್ಷಣ
ಮಾಡು ಧರೆಯ ಸ್ವರ್ಗ ಸುಖದ ತಾಣ
ನೀ ಕೈ ಬಿಟ್ಟರೆ ನನಗುಂಟು ಮರಣ
ಎನ್ನ ಬುದ್ಧಿಯೊಳ್ ಬಿತ್ತೋ
ಬೀಜ ಸದ್ಗುಣ
ತೀರಿಸಲಾರೆ ನಾ ನಿನ್ನಯ ಋಣ
ನಿನ್ನ ಸೇವೆಗಾಗಿ ನಾ ಅರ್ಪಿಸುವೆ ಪ್ರಾಣ
ನಿನ್ನ ಕಟಾಕ್ಷವೇ ಎನಗೆ ಆಭರಣ
ಎನ್ನ ಶಿರದೊಳಿರಿಸು ನಿನ್ನ ಚರಣ
ದೀನನಾಗಿ ನಾ ಬೇಡುವೆ ಶಿವಶರಣ
ನೀನಯ್ಯ ಕಾಯಕದ ಬೀಜವ
ಆಚರಿಸಿ ತೋರಿಸಿದಾತ ಜಗದೊಳ್
ಶಹಾಪೂರ ಚರಬಸವ ಶರಣ

— ಸರ್ಪಭೂಷಣ ಹಿರೇಮಠ

ದೇವರಾಗುವುದು ಬೇಡ

ತಾಯಿ,
ನೀನು ದೇವರಾಗುವುದು ಬೇಡ
ಅವನು, ಬರೀ ಗುಡಿಯಲ್ಲಿ ಕೂಡುವ
ಮೂಕ ನಾಯಕನಾಗಿದ್ದಾನೆ.
ಈ ಹಾಳು ಪೂಜಾರಿಗಳ ಸೃಷ್ಟಿಸಿದ್ದಾನೆ.
ಪಲ್ಯಕ್ಕೆ ಎಣ್ಣೆ ಇಲ್ಲದವರಿಂದ
ಎಣ್ಣೆಸ್ನಾನ ಮಾಡುತ್ತಾನೆ.
ಧಡ್ಡಜನರ ಮೂಢನಂಬಿಕೆಗಳ
ಮುಖ್ಯಸ್ಥನಾಗಿದ್ದಾನೆ.
ಮಂದಿರ--ಮಸೀದಿಗಳ
ಜಗಳ ಹಚ್ಚಿದ್ದಾನೆ.
ತನ್ನ ಸಮೀಪ ದೀಪ ಹಚ್ಚಿಕೊಂಡು
ಸುತ್ತಲೂ ಕತ್ತಲು ಕವಿಸಿದ್ದಾನೆ
ಮನೆಯಿಲ್ಲದವರಿಂದ ಭವ್ಯ
ಗುಡಿಯನ್ನು ಕಟ್ಟಿಸಿಕೊಂಡಿದ್ದಾನೆ.
ಎಲ್ಲರಿಗೂ ಕೊಡುವಾತನೆಂದು
ತನ್ನ ಮುಂದೆಲ್ಲಾ ಪೆಟ್ಟಿಗೆ ಇಟ್ಟುಕೊಂಡಿದ್ದಾನೆ
ಆದ್ದರಿಂದ ತಾಯಿ,
ನೀನು ದೇವರಾಗುವುದು ಬೇಡ
ಏಕೆಂದರೆ,
ಆ ದೇವರಲ್ಲಿ ಏನೇನೂ ಇಲ್ಲ.

—ವಿಕ್ರಮ ವಿಸಾಜಿ

ತ್ಯಾಗ

ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ
ಮಾಡುವುದಾಗಿ ಹೇಳಿದ ಹಿರಿಯ ರಾಜಕಾರಣಿಯೊಬ್ಬ
ಮಂತ್ರಿ ಪದವಿಗಾಗಿ ಪಕ್ಷವನ್ನೇ ತ್ಯಾಗ ಮಾಡಿದ

—ಬಸವರಾಜ ಬ. ದೇಸಾಯಿ ಅಲಮೇಲ

ಎಂಥಾ ಮಳ್ಳ ಜನಾ ಅಂತಿನಿ

ಬುದ್ಧ-ಬಸವ-ಗಾಂಧಿ ಇದ್ದರಂತಲ್ಲ
ಅವರೆಲ್ಲ ಎಂಥಾ ಮಳ್ಳ ಜನಾ ಅಂತಿನಿ
ಸಾವು-ನೋವನ್ನ ಕಂಡ ಸಿದ್ಧಾರ್ಥ ಅರಮನಿ ತ್ಯಜಿಸಿ
ಅಡವಿ ಸೇರಿದನಂತ; ಇಷ್ಟೆಲ್ಲಾ-ಮಾಡಿ ಏನ್ ಸಾಧಿಸಿದನಂತ
ಕೊನೆಗೆ ಬುದ್ಧ ಅನಿಸಗೊಂಡ ನಂತ ॥ಎಂಥಾ ಮಳ್ಳ॥
ಇನ್ನ ಬಸವಣ್ಣ ಮಾನವರೆಲ್ಲರೂ ಸಮಾನರು
ಜಾತಿಗೀತಿ ಸುಳ್ಳಂತ ಹೇಳಿಕೆಂತ
ಮನಿಗುದ್ದಲಿಲೆ ಊರ ಖದ್ದಿ ಕಡದು ಮೈಮ್ಯಾಗ ಹಾಕೆಂಡು
ಕೊನಿಗೆ ತಾನೇ ತುಂಬಿದ ಹೊಳಿ ಹಾರಿಕೆಂಡನಂತ ॥ಎಂಥಾ ಮಳ್ಳ॥
ಇನ್ನ ದೇಶಪ್ರೇಮ-ಸತ್ಯ-ಅಹಿಂಸೆ ಅಂತ
ಏನೇನೊ ಬಡಬಡಸತಿದ್ದ ಗಾಂಧಿ
ಕೊನೆಗೊಮ್ಮೆ ಗುಂಡೇಟಿಗೆ ಬಲಿಯಾಗಿ ಮಹಾತ್ಮಾದನಂತ ॥ಎಂಥಾಮಳ್ಳ॥
ಖರೆ ಅಂದ್ರ ನಾವೇ ಶ್ಯಾಣ್ಯಾರಿss
ನುಡಿಯೊಳಗ ಬುದ್ಧ-ಬಸವ-ಗಾಂಧಿ ಅಂತಿರತೀವಿ
ನಡಿಯೊಳಗ ನಾವು ನಾವೇ ಆಗಿರತೀವಿ.

-ಸಿ.ಬಿ. ನಾವಿ

ಸತ್ತವರು

ಬಾಯಿದ್ದರೂ ಮೂಕರಾಗಿ; ಕಿವಿಯಿದ್ದರೂ ಕಿವುಡರಾಗಿ
ಕಣ್ಣಿದ್ದರೂ ಕುರುಡರಾಗಿ ಇದ್ದು ಸತ್ತಿದ್ದೇವೆ
ಕಣ್ಣಿಗೆ ಕಂಡದ್ದನ್ನು ನೋಡಿವರೂ ನೋಡದ ಹಾಗೇ
ಬಾಯಿಗೆ ನಾವೇ ಅರುಬಿ ತುರುಕಿಕೊಂಡು ಬದುಕಿದ್ದೇವೆ!
ಬಲುಘೋರ ದುರಂತಗಳ ಬದುಕಿನ ಮಧ್ಯೆ
ಸ್ವಾರ್ಥದ ಸೆಳೆತದಲ್ಲಿ ಸಾಗಿ ನಡೆದಿದ್ದೇವೆ; ಬದುಕಿಯೂ ಸತ್ತಿದ್ದೇವೆ

-ಅಮರೇಶ ಕುಂಬಾರ

ಕಮ್ಮಟದಲ್ಲಿ ಕಂಡ ಕನ್ಯೆಯರು

ರಾಯಚೂರಿನ
ಕಮ್ ಮಟದಲ್ಲಿ
ಕಾಣಸಿಕೊಂಡ ಪಂಚ ಕನ್ಯೆಯರು
ಪಕ್ಕಾ ಮುಂಗುಂದೆಯರು
....
ಅಂತ ನನಗನ್ನಿಸಲಿಲ್ಲ
ಜಂಬಗಾತಿಯಂತೆ ತೋರುವ
ಪ್ರಥಮಳು ವನಮಾಲಾ
ಜಂಬಗಾತಿಯಲ್ಲ ಅಂದಗಾತಿ
ತಲೆಯಿಲ್ಲದ ಬರಹ ಬರೆದಾಕಿ
ಎಲ್ಲರ ನಗಿಸಿದಾಕೆ
ಅನುಕಂಪ ಮೆಟ್ಟಿ ನಿಂತ
ಚಿಕ್ಕಮಂಗಳೂರ ಶೀಲಾ ಅಂಗವಿಕಲೆ
ಪ್ರಥಮಳ ಜತೆಗಾತಿ
ಸ್ನೇಹಪರ ಸುಮಬಾಲೆ
ಮೂರನೆ ಯಾಕೆ
ಸಾಹಿತ್ಯ-ಬದುಕು ಒಂದೇ ಆಗಬೇಕು
ಎನ್ನುವ ಹಠಗಾರ್ತಿ
"ಸರಸ್ವತಿ"ಯಾಕೆ ಆರಾಧಕಿ
ಕಮಲಾ,
ಮೂರ್ತಿ"ಯಲ್ಲ ಶಿಲ್ಪ!
ಹೂನಗೆಯ ಕಮಲಿನಿ
ಸಾಹಿತ್ಯಾಭ್ಯಾಸಿ ಮಾನಿನಿ
ಕೊನೆಯಾಕೆ
ಕಲ್ಲಿನೂರ ಖಾರಕ್ಕೆ
ಕಂಪಿಸಿದ ಕವಿಯಿತ್ರಿ
ನಿಗರ್ವಿ ತುಮಕೂರ ಭಾರ್ಗವಿ.
ಬಂದೈವರಲ್ಲಿ ಪತ್ರಕರ್ತೆಯರು
ಮೂವರು ಎಂಬುದು ಇನ್ನೊಂದು ಅಚ್ಚರಿ!
ಬಂದರು-ಕಂಡರು-ನಕ್ಕರು
ಹೊಸದಿಕ್ಕು ಕವಿಗೋಷ್ಠಿಯಲ್ಲಿ ಉಲಿದರು
ಕಾಡದ ಕವಿತೆಗಳಾಗಿ ಹೋದರು

– ಶೇಖರ ಕತ್ತಿಗೆ

ಸುಂದರ ಶಿರವಾಳ

ಶಿರವಾಳ ವೆಂಬೂರು
ಸಕಲ ದೇವರ ತವರೂರು
ಶಾಂತೇಶ ಜ್ಞಾನೇಶ
ಸಿದ್ಧಲಿಂಗೇಶ ಇವರೆಲ್ಲ
ಮತ್ತೆ ನನ್ನಯ್ಯ ನಾಗಯ್ಯ
ಇನ್ನುಳಿದ ಸುರಕೋಟಿ
ಒಂದೊಂದು ಕಡತಿ ಓಗರಿಸೆ
ರಾಶಿ ಸವಿಯಲು ಮತ್ತೆ
ಸುರರು ಉಳಿದಿರಲು
ನರರೆಂಬರೆಲ್ಲಿಹರು?
ಸಗ್ಗದಂತಿರೆ ಈ ಧರೆ
ಪಾಪಿಗಳಿಗಿಲ್ಲಿಲ್ಲ ತಾಣ!
ಸನ್ನತಿಯು, ಶಿರವಾಳ
ಮುದನೂರು ಕೆಂಭಾವಿ
ಅಣಬಿ ಹೊಸೂರು
ರಾಂಪೂರು ಕೊಲ್ಲೂರು
ಮುಂತಾದ ಚತುರ್ದಶಿಯೂರು
ಆಗಿಹವು ಸಂಸ್ಕೃತಿಯ ಬೀಡಾರ
ಪ್ರಾಕೃತ, ಸಂಸ್ಕೃತ
ಬ್ರಹ್ಮಿ ಭಾಷೆಯ ತವರೂರು
ಸಕಲ ಭಾಷೆಗಳ ಮಾತೃದೇವರ ಊರು
ಶಿಲ್ಪಕಲೆ ಸಾಹಿತ್ಯ, ಸಂಗೀತ
ಚಿತ್ರಕಲೆ, ರಾಜ್ಯ ಭಾರದ ಕಲೆಯಲ್ಲಿ
ಕರಗತ ವಾಗಿರುವ ಊರು
ಶಾತವಾಹನರ, ರಾಷ್ಟ್ರಕೂಟರ
ಚಾಲುಕ್ಯರಲ್ಲದೆ ಮತ್ತೆ ಹಲವಾರು
ರಾಜ ವೈಭೋಗ ಬೆಳಸಿದ
ನವಧಾನ್ಯ ತವರೂರು.

—ದುರ್ಗ ಜಗದೀಶ ರಾಯಚೂರು

ಪಿ. ವಿ. ನ. ಉವಾಚ

ಓ ಭಾರತೀಯರೇ
ನಿಮ್ಮ ರಕ್ಷಣೆಯ ಚಿಂತೆ
ನನಗೆ ಬಿಡಿ
ಕಾವೇರಿಯ ಬಂಧುಗಳೇ
ನಿಮ್ಮ ನೀರ ಚಿಂತೆಯು
ನನಗೆ ಬಿಡಿ

ಖಲಿಸ್ತಾನ ವಾದಿಗಳೇ
ಕಾಶ್ಮೀರ ಬಂಧುಗಳೇ
ನಿಮ್ಮ ವಿವಾದ ನನಗೆ ಬಿಡಿ
ದಯಾಮಾಡಿ
ನಿಮ್ಮೆಲ್ಲಾ ಸಮಸ್ಯೆ
ಮೂರುವರ್ಷ ಎತ್ತ ಬೇಡಿ

ಈಗಾಗಲೇ
ಒಂದು ವರ್ಷವಾಗಿದೆ
ಇನ್ನೂ ಮೂರು ವರ್ಷ
ನನಗೆ ಬಿಡಿ

ಆ ಮೇಲೆ
ನಿಮ್ಮೆಲ್ಲಾ ಸಮಸ್ಯೆ
ನಿಮಗೇನೇ ಬಿಡುತ್ತೇನೆ
ದಯಮಾಡಿ
ನನ್ನನ್ನು ನನಗೆ ಬಿಡಿ

—ಶಿವಣ್ಣ ಇಜೇರಿ ಶಹಾಪೂರ

ಎರಡು ಹನಿಗಳು

ಶರಣರ ನುಡಿ ಬೆಳಕಿಗೆ
ನಾದವನೀಡಿ
ಚೆಲುವ ಬೆಳದಿಂಗಳ
ಸೃಷ್ಟಿಸಿ ಹೋದಿರೇ ನೀವು
ಹೊದಿರೇ ನೀವು

—ಸಿದ್ಧರಾಮ ಜಂಬಲದಿನ್ನಿ

ಶಾಂತರಸ

ದಣಿದು ಬಂದವರು
ಚಳಿಗೆ ತಡಿಯದೇ ಬಂದವರು
ತಂಪಿಗಾಗಿ ಬಂದವರು
ಹೊತ್ತು ಕಳೆಯಲು ಬಂದವರು
ಇನ್ನೂ
ಯಾವುದ್ಯಾವುದಕೋ
ಬಂದವರು
ನಿನ್ನ ಮಡಲಿಗೆ
ಎಷ್ಟು ಪಡಕೊಂಡರೋ
ಅವರವರಿಗೆ ಬಿಟ್ಟು
ತನ್ನಷ್ಟಕ್ಕೆ ತಾನು
ಋತುಮಾನಗಳ ಜತೆ
ನಿಂತ ಮರ.

—ಎಮ್. ಕೃಷ್ಣ
ವಿನ್ಯಾಸ್, ಗಾಜಗಾರಪೇಟೆ ರಾಯಚೂರ

ಪತ್ರಿಕೆಗೆ ಬಂದ ಪ್ರತಿಕ್ರಿಯೆಗಳು

ಪ್ರಿಯ ಶ್ರೀ ಹೊನ್ಕಲ್, "ಹೊಸದಿಕ್ಕು" ಪತ್ರಿಕೆಯ ಹೆಸರು ಅನ್ವರ್ಥಕವಾಗಲಿ ಎಂದು ಹಾರೈಸುತ್ತೇನೆ. —ಚೆನ್ನವೀರ ಕಣವಿ (ಧಾರವಾಡ)

ಸನ್ಮಾನ್ಯ ಸಂಪಾದಕರಲ್ಲಿ, ಕನ್ನಡದ ಗಂಡು ಮೆಟ್ಟಿನ ನೆಲವಾದ ಉತ್ತರ ಕರ್ನಾಟಕದ ಸಾಂಸ್ಕೃತಿಕ-ಸಾಹಿತ್ಯಿಕ ಹಿನ್ನಲೆಗೆ ತನ್ನದೇ ಆದ ಒಂದು ವಿಶಿಷ್ಟ ಸಾರ ಇರುವದರಿಂದ ಅಲ್ಲಿನ ಸಾಹಿತ್ಯಕ ಬದುಕಿನ ತುಡಿತಕ್ಕೆ ಧ್ವನಿಯಾಗುವಂತೆ ಉತ್ಸಾಹ ತೆಗೆದುಕೊಂಡಿರುವ ಹೊಸದಿಕ್ಕು ಬೆಳೆಯಲಿ. ಸಿದ್ಧರಾಮ ಹೊನ್ಕಲ್‌ರವರ ರಂಗಣ್ಣನ ಬಸ್ಸು ಕತೆ ಕರುಳು ಚುರುಕ್ ಎನ್ನಿಸುವ ರಂಗಣ್ಣನ ಉದಾಸೀನತೆಯ ಫಲವಾಗಿ ಪತ್ನಿ ಕಮಲಮ್ಮ ತಂದೆ ಚನ್ನಮಲ್ಲಪ್ಪನ ಸಾವಿನ ದುರಂತ, ಮಲ್ಲಿಕಾ ಘಂಟಿಯವರ ಅಧ್ಯಯನಾತ್ಮಕ ಲೇಖನ, ವಾಲೀಕಾರರ ಕರ್ಣನ ಹಾಡು ಮನಸ್ಸು ತಲುಪಿತು, ಎಲ್ಲರೀತಿಯಿಂದ ಉತ್ತಮ ಸಂಚಯನದಲ್ಲಿ ಹೆಜ್ಜೆ ಇಟ್ಟಿರುವ ಹೊಸದಿಕ್ಕು ಬಂಡಾಯ ಸಾಹಿತ್ಯ ಸಂಘಟನೆ ತಲುಪಿರುವ ಎಲ್ಲಾ ಮೂಲೆ ಆಳಗಳ ಹೂರನ್ನು ಮೈಗೂಡಿಸಿ ನಡೆಯಲಿ. ಚಂದಾ ಕಳಿಸುವೆ.

— ಉತ್ತನೂರು ರಾಜಮ್ಮ ವಿ. ಶೆಟ್ಟಿ ಚಿಂತಾಮಣಿ (ಕೋಲಾರ)

'ಹೊಸದಿಕ್ಕು' ಸಂಪಾದಕ ಬಳಗಕ್ಕೆ ವಂದನೆಗಳು. ಈ ಭಾಗದಿಂದ ಸ್ನೇಹಿತರು ಪತ್ರಿಕೆ ತರುತ್ತಿದ್ದಾರೆ ಎಂದು ಹಲವರ ಮುಂದೆ ಮಾತಾಡಿದೆ. ಪತ್ರಿಕೆ ಹೇಗಿದೆ ? ಎಂಬುದು ನಾನು ಪ್ರತ್ಯೇಕ ಹೇಳುವದೇನಿದೆ. ಸಂಪಾದಕರಾದ ತಾವೂ ಹಲವಾರು ಸಾಹಿತ್ಯಿಕ ಪತ್ರಿಕೆ ನೋಡಿದವರು. ಓದಿದವರು. ಅದರಂತೆ ಅಥವಾ ಅದಕ್ಕಿಂತ ಭಿನ್ನ ತರಲು ಯೋಚಿಸಿದ್ದರೆ ಸರಿ.... ಪತ್ರಿಕೆಗೆ ಪುಟ್ಟ ಕಥೆ ಕಳಿಸಲು ಯೋಚಿಸುವೆ. ಸ್ನೇಹಿತರೆ. ರಾಯಚೂರಿಗೆ ಬಂದರೆ ಬನ್ನಿ. ಕುಂತು ಚಹ ಕುಡಿದು ಏನಾದರೂ ಯೋಚಿಸೋಣ —ಅಮರೇಶ ನುಗಡೋಣಿ ರಾಯಚೂರು.

ಪ್ರಿಯರೆ, ನಿಮ್ಮ ಉತ್ಸಾಹ ಮೆಚ್ಚಬೇಕಾದದ್ದೆ. ಚಂದಾ ಸಂಗ್ರಹ ನಿಯಮಿತವಾಗಿ ಬಂದರೆ ಪತ್ರಿಕೆಯ ಉಳಿವು ಇರುವದಾದರು ಆರ್ಥಿಕ ನಷ್ಟಕ್ಕೆ ಒಗ್ಗಿಕೊಂಡು ಮೌಲಿಕವಾದುದನ್ನು ಕೊಡುತ್ತ ಬನ್ನಿ. ಕೆಲವೇ ಸಾಹಿತ್ಯಾಸಕ್ತರಾದವರೂ ಪತ್ರಿಕೆ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಕೆಲವರನ್ನು ದುಂಬಾಲು ಬಿದ್ದಾದರೂ ಒಳ್ಳೆಯ ಲೇಖನಗಳನ್ನು ಬರೆಯಿಸಿ ಪ್ರಕಟಿಸಿ. ಕವಿತೆಗೇನೂ ಕೊರತೆ ಇಲ್ಲ ಬಿಡಿ. ಆದರೆ Quality ಯದ್ದೆ ಕೊರತೆ. ನಿಮ್ಮೆಲ್ಲ ಸಂಪಾದಕ ಮಂಡಳಿ ಮಿತ್ರರಿಗೆ ನನ್ನ ನೆನಹುಗಳು. —ಆರ್. ಜಿ. ಹಳ್ಳಿ ನಾಗರಾಜ

ಗೆಳೆಯರೆ, ೩ನೇ ಸಂಚಿಕೆ ಮತ್ತೊಮ್ಮೆ ಓದಲು ಸದಾ ಬದಿಯಲ್ಲಿ ಇಟ್ಟುಕೊಳ್ಳಬೇಕು ಎನಿಸಿದೆ. ಸಿದ್ಧರಾಮ-ಉಪ್ಪಿನರವರ ನಟಭಯಂಕರ ಹಂದಿಗನೂರು ಸಿದ್ರಾಮಪ್ಪನವರ ಕುರಿತು ಬರೆದ ಲೇಖನ ಓದುವಾಗ ಪೂರ್ತಿ ನನ ಕಂಠ ಬಿಗಿದು ಹೋಗಿ ದುಃಖ ಉಮ್ಮಳಿಸಿತು. ಪ್ರಾಮಾಣಿಕ ಮನಸ್ಸುಗಳು ಮತ್ತು ಪತ್ರಿಕೋದ್ಯಮ ಕುರಿತು ಪಮ್ಮಷಿರ ಲೇಖನ ಸತ್ಯ. ಇಲ್ಲಿ ಪತ್ರಿಕೋದ್ಯಮ ಕುಲಗೆಡಿಸಿದವರು ಇದನ್ನು ಓದಲಿ. ಪರೀಕಾರರ ಪದ, ಕುಟಿಲತೆಯನ್ನು ಹೊಂದಿದ ಮೇಲ್ವರ್ಗದವರ ವನಸ್ವಾದ 'ಕುಂತಿ'ಯ ಮೂಲಕ ತೋರಿಸಿದ ಕೈಗನ್ನಡಿಯಾಗಿದೆ (ಹಂದಿಗನೂರ ಸಿದ್ರಾಮಪ್ಪನವರ ಲೇಖನದ ಮೆಚ್ಚಿ ಹಲವಾರು ಪತ್ರ ಬಂದಿವೆ) -ವೈಲಾರಪ್ಪ ಸಾರ

ಪ್ರಿಯರೆ, ಪತ್ರಿಕೆ ವೈವಿಧ್ಯಮಯವಾಗಿ ಹೊರಬರತೊಡಗಿದ್ದು ಸಂತೋಷ-

—ಕಿರಣ ಪಾಟೀಲ.

ಸಹೃದಯ ಸೋದರ ಸಿದ್ಧರಾಮ, ಹೊಸದಿಕ್ಕು ತಲುಪಿದೆ. ಚೆನ್ನಾಗಿ ಬಂದಿದೆ. ಸದಸ್ಯಳಾಗುವೆ. –ಶ್ರೀಮತಿ ನೀಲಮ್ಮ ಕತ್ನಳ್ಳಿ.

ಮಾನ್ಯ ಸಂಪಾದಕರೆ, ಹೊಸದಿಕ್ಕು ಸಂಚಿಕೆಗಳು ತೃಪ್ತಿಕರವಾಗಿವೆ. ಕೇವಲ ಸಾಹಿತ್ಯಕ್ಕೆ ಮೀಸಲಾಗದೆ ರಾಜಕೀಯ-ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ಷೇತ್ರಕ್ಕೂ ಲಗ್ಗೆಯಿಟ್ಟು ಹೊಸದಿಕ್ಕಿನಲ್ಲಿ ಹೆಜ್ಜೆಯಿಡಿರಿ.

—ವಿಶ್ವನಾಥ ಜಿ. ಸಬರದ ಗೋಲಗೇರಿ

ಪ್ರಿಯ ಹೊನ್ನಕಲ್‌ರವರಲ್ಲಿ. 'ರಂಗಣ್ಣನ ಬಸ್ಸು' ಸಣ್ಣಕತೆ ಓದಿದ ನಂತರ ಇಲಾಖೆಯಲ್ಲಿನ ಸಣ್ಣತನದಿಂದಾಗಿ ಜನತೆಯ ಜೀವನ್ಮರಣದ ಮೇಲೆ ಎಂತಹ ಪರಿಸ್ಥಿತಿ ಎದುರಾಗುತ್ತದೆಯೆಂಬುದು ತಿಳಿಯಿತು. ನಿಮ್ಮ ಕಥೆ ಓದುತ್ತಾ ಹೋದಂತೆ ನನ್ನ ಡ್ಯೂಟಿಯಲ್ಲಿಯ ಕೆಲವರನ್ನು ನೆನಪಿಸಿಕೊಳ್ಳುವಂತೆ ಮಾಡಿದೆ. ಇದು ನನ್ನ ಹೊಗಳಿಕೆಯ ಮಾತಲ್ಲ; ಒಡಲಾಳದಿಂದ ಬಂದ ಮಾತುಗಳವು. ಒಟ್ಟಾರೆ ನಿಮ್ಮೆಲ್ಲಾ 'ಕಥೆ-ಕವನಗಳು' ನನ್ನನ್ನು ಕೂಡಾ ಇಷ್ಟು ಬರೆಯಲು ಪ್ರೋತ್ಸಾಹಿಸಿದೆ. ಶ್ರೀ ಪುರ್ಲೆಯವರಿಗೆ, ಕಣದಳ್ಳಿಯವರಿಗೆ ವಂದನೆಗಳು.

-ವೀರಪ್ಪ ಪಾಟೀಲ (ನಿರ್ವಾಹಕ-ಹಿರೆಕೊಟ್ನೆಕಲ್)

ಮುಂದಿನ ಸಂಚಿಕೆಯಲ್ಲಿ

ಡಾ॥ ಅರವಿಂದ ಮಾಲಗತ್ತಿ, ಡಾ॥ ಬಸವರಾಜ ಸಬರದ, ಅಮರೇಶ ನುಗಡೋಣಿ, ಪ್ರೊ. ಕೆ. ವಿಶ್ವನಾಥ, ಪ್ರೊ. ವಸಂತ ಕುಷ್ಟಗಿ, ಚಂದ್ರಕಾಂತ ಕರದಳ್ಳಿ, ಗಂಗಾ ರಾಜಶೇಖರ, ರೈತ ಸುತ, ರಮೇಶ ಸಗರ, ಬಿ. ಕೆ ಸರಸ್ವತಿ, ವಿಜಯಲಕ್ಷ್ಮಿ ಕೆ. ರುದ್ರಗೌಡ ಪಾಟೀಲ, ತುಮಕೂರ ಭಾರ್ಗವಿ ಮುಂತಾದವರು ಹಾಗೂ ಸಂಪಾದಕರಿಂದ ಪತ್ರಿಕೆಯ ಅಂತರಂಗದಿಂದ ನಿಮ್ಮ ಅಂತರಂಗಕ್ಕೆ ಇತ್ಯಾದಿ.

ಸಾದರ ಸ್ವೀಕಾರಕ್ಕೆ ಬಂದ ಪುಸ್ತಕಗಳು

1. ನಾರಿಹಳ್ಳದ ದಂಡೆಯಲ್ಲಿ-(ಕಥಾ ಸಂಕಲನ) ಚಂದ್ರಕಾಂತ ಪಡ್ಡು. ಲೋಹಿಯಾ ಪ್ರಕಾಶನ ಬಳ್ಳಾರಿ ಬೆಲೆ ರೂ. 15/- ಪುಟ 98.
2. ಮಣ್ಣಲ್ಲಿ ಬಿರಿದ ಅಕ್ಷರ-ಜಂಬಣ್ಣ ಅಮರಚಿಂತ (ಕವನಸಂಕಲನ) ಬಂಡಾಯ ಸಾಹಿತ್ಯ ಪ್ರಕಾಶನ ರಾಯಚೂರು ಬೆಲೆ ರೂ. 15/- ಪುಟ 69.
3. ನಿರಾಶೆ (ಕವನ ಸಂಕಲನ) ಡಿ. ಜಿ ಹಡಪದ ರಸ್ತಾಪೂರ, ಶಹಾಪೂರ.
4. ಮುಪ್ಪರಿ (ಕವನ ಸಂಕಲನ) ನಬಿ ಅಮ್ಮಾಪೂರ ಮತ್ತು ಗೆಳೆಯರು, ಶಾಂತರಸ ಪ್ರಕಾಶನ ಅಮ್ಮಾಪೂರ.
5. ಕೊರವರು (ಕವನ ಸಂಕಲನ) ಈರಣ್ಣ ಕೋಸಗಿ, ಕೋಸಗಿ ಪ್ರಕಾಶನ, ರಾಯಚೂರು ಬೆಲೆ ರೂ. 5/-.
6 ಇವಕ್ಕೆ ನೀವ್ ಏನಂತಿರಿ (ಕವನ ಸಂಕಲನ) ಸಂಪಾದಕ ರುದ್ರಗೌಡ ಪಾಟೀಲ ಜಮಖಂಡಿ ಬೆಲೆ ರೂ. 5-00.
7. ತೊಂಬತ್ತು (ಕವನ ಸಂಕಲನ) ಪ್ರಭಾಕರ ಫ. ಬಬ್ಲಿ ಪ್ರಕಾಶನ ಬಸಾಪೂರ ಜಿಲ್ಲೆ ಬೆಳಗಾಂವ.
8. ಹುಚ್ಚ ಹುಡಗನ ಹರಟೆಗಳು (ಹಾಸ್ಯ ಲೇಖನ ಸಂಕಲನ) ಪ್ರಭಾಕರ, ಫ. ಬಬ್ಲಿ ಪ್ರಕಾಶನ ಬಸಾಪೂರ, ಬೆಳಗಾಂವ.
9. ನೆರಳು (ಕವನ ಸಂಕಲನ) ಸ್ಮಿತಾ ಜಿ. ಪರಾಗ ಪ್ರಕಾಶನ ರಾಯಚೂರು ಬೆಲೆ ರೂ. 10/- ಪುಟ 64.
10. ಅರ್ಥ ವಿಪ್ಲವವರು (ಕಥಾ ಸಂಕಲನ) ಶೇಖರ ಕತ್ತಿಗೆ ನಾಲ್ಕುಬಿ ಪ್ರಕಾಶನ ಕತ್ತಿಗೆ, ಶಿವಮೊಗ್ಗ ಜಿಲ್ಲೆ ಪುಟ 134.
11. ಐದು ಸಮಾಜವಾದಿ ಕಾವ್ಯಗಳು : ಡಾ॥ ಚೆನ್ನಣ್ಣ ವಾಲೀಕಾರ ಗುಲಬರ್ಗಾ.
12. ಐದು ಸಮಾಜವಾದಿ ನಾಟಕಗಳು : ಡಾ॥ ಚೆನ್ನಣ್ಣ ವಾಲೀಕಾರ ಗುಲಬರ್ಗಾ.
13 ಉಪ್ಪಿನ ಗಂಗಾಧರಪ್ಪ (ಸ್ಮರಣ ಲೇಖನಗಳು) ಸಂಪಾದಕ ಸಿದ್ದರಾಮ ಉಪ್ಪಿನ ಶಹಾಪೂರ ಬೆಲೆ ರೂ. 15/-
14. ಶೋಷಿತರ ಕೂಗು ಪತ್ರಿಕೆ : ಸಂ. ವೀರಣ್ಣ ತಿಮ್ಮಾಜಿ (ಪಾಕ್ಷಿಕ ಪತ್ರಿಕೆ) ಬೆಲೆ ರೂ. 1-50 ಗ್ರಿನೋಬಲ್ಸ ಗುಲಬರ್ಗಾ.
15. ಜನಸ್ಪಂದನ (ವಾರ ಪತ್ರಿಕೆ) ಸಂಪಾದಕ ಈರಣ್ಣ ಕೋಸ್ಗಿ ಸಂಪುಟ ೧ ಸಂಚಿಕೆ ೧ ಬೆಲೆ ರೂ 2-00 ರಾಯಚೂರು.
16 ಕನಸುಗಳ ಜಾಡಿನಲ್ಲಿ (ಕಥಾ ಸಂಕಲನ) ಅಶೋಕ ಥೋರಾತ್ ಸೋಲಾಪೂರ (ರಾಹುಲ್ ಪ್ರಕಾಶನ ಲಜಾಣ) ಬೆಲೆ ರೂ. 10-00
17. ನೆನಪು (ಕವನ ಸಂಕಲನ) ಬಸವರಾಜ ಐನೋಳಿ, ಬೆಲೆ 8-00 ರೂ. ಐನೋಳಿ ಪ್ರಕಾಶನ ಗುಲಬರ್ಗಾ.
18. ಮಾಡು ಇಲ್ಲಿವೆ ಮಡಿ, ಇಂದಿನ ಮಹಿಳೆ, ರೈತರ ದೀಪ ಸ್ತಂಭ- ವೀರಣ್ಣ ತಿಮ್ಮಾಜಿ ಶೋಷಿತರ ಕೂಗು ಪ್ರಕಾಶನ ಗುಲಬರ್ಗಾ.

ಪತ್ರಿಕೆಯ ಹಿತೈಷಿಗಳ ಗಮನಕ್ಕೆ

ಮಾನ್ಯರೆ,

ಕ್ಷಮಿಸಿ ಈ ಸಂಚಿಕೆ 15 ದಿನ ವಿಳಂಬವಾಗಿ ತಮ್ಮ ಕೈ ಸೇರುತ್ತಿದೆ. ಮತೀಯ ಶಕ್ತಿಗಳ ಅಟ್ಟಹಾಸದಿಂದ ದೇಶವೇ ಹೊತ್ತಿ ಉರಿಯಿತು. ಈ ದುಷ್ಟ ಶಕ್ತಿಗಳನ್ನು ಪತ್ರಿಕೆ ಖಂಡಿಸುತ್ತದೆ. ಒಡೆದ ಮನಸ್ಸುಗಳನ್ನು ಹತ್ತಿರ ತರುವ ಕೆಲಸ ಮಾಡಬೇಕಾಗಿದೆ. ಸಾವಿರಾರು ಮುಗ್ಧ ಅಮಾಯಕರು ಜೀವ ಕಳೆದು ಕೊಂಡರು. ಅವರ ಅವಲಂಬಿತರ ನೋವು ನಮ್ಮದಾಗಬೇಕು. ಹಾಗಾದಾಗ ಮಾತ್ರ ಧರ್ಮ ದೇವರುಗಳಿಗಿಂತ ಮಾನವೀಯತೆಗೆ ಅರ್ಥಪೂರ್ಣತೆ ಬರುತ್ತದೆ.

ಇಷ್ಟು ದಿನ ಪತ್ರಿಕೆ ಕಲಬುರ್ಗಿಯ ಗ್ರಿನೋಬಲ್ಸನಲ್ಲಿ ಮುದ್ರಣವಾಗುತ್ತಿತ್ತು. ಪತ್ರಿಕೆಯ ಸಂಪಾದಕರಾದ ಶ್ರೀ ತಿಮ್ಮಯ್ಯ ಪುರ್ಲೆಯವರು ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ ಶಾಖೆ ಶಹಾಪೂರದ ಹಣಕಾಸಿನ ನೆರವಿನಿಂದ ಶಹಾಪೂರದಲ್ಲೆ, "ಶ್ರೀ ಪುರ್ಲೆ ಪ್ರಿಂಟರ್ಸ್" ಎಂಬ ಮುದ್ರಣಾಲಯವನ್ನು ಹೊಸವರ್ಷದಲ್ಲಿ ಆರಂಭಿಸಲಿದ್ದಾರೆ. ಈ ಪತ್ರಿಕೆ ತಮಗೆ ತಲುಪುವಷ್ಟರಲ್ಲಿ ಮುದ್ರಣಾಲಯ ಕಾರ್ಯಾರಂಭ ಮಾಡಲಿದೆ. ಹಾಗಾಗಿ ಸಾಹಿತ್ಯಾಸಕ್ತರು ಕೃತಿ ಪ್ರಕಟನೆ ಮತ್ತು ಯಾವುದೇ ರೀತಿಯ ಮುದ್ರಣ ಕೆಲಸಕ್ಕಾಗಿ "ಶ್ರೀ ಪುರ್ಲೆ ಪ್ರಿಂಟರ್ಸ್‌ಗೆ" ಸಂಪರ್ಕಿಸಬಹುದು. ಇನ್ನು ಮುಂದೆ "ಹೊಸದಿಕ್ಕು" ಶಹಾಪೂರದಲ್ಲೆ ಮುದ್ರಣವಾಗಲಿದ್ದು ತಮಗೆ ಹೆಚ್ಚು ಗುಣಾತ್ಮಕವಾಗಿ ಮತ್ತು ನಿಯಮಿತವಾಗಿ ತಲುಪಿಸುತ್ತೇವೆ.

ಚಂದಾನೀಡದವರು-ಜಾಹೀರಾತು ನೀಡಿಯೂ ಹಣ ನೀಡದವರು ಬೇಗ ಕಳಿಸಿಕೊಡಲು ಕೋರುತ್ತಾ-ಹೊಸ ವರ್ಷದ ಅಭಿನಂದನೆ ತಿಳಿಸಿ ಮುಗಿಸುತ್ತೇನೆ.

--ಚಂದ್ರಕಾಂತ ಕರದಳ್ಳಿ

ಈ ಸಂಚಿಕೆಯ ಲೇಖಕರ ವಿಳಾಸಗಳು

●॥ ಸಿದ್ಧರಾಮ ಹೊನ್ಕಲ್, "ಹೊಸದಿಕ್ಕು" ದಿಗ್ಗಿ ಬಿಲ್ಡಿಂಗ್ ಶಹಾಪೂರ-೫೮೫ ೨೨೩ [ಕಲಬುರ್ಗಿ] ಡಾ॥ ಮಲ್ಲಿಕಾ ಘಂಟಿ, ಗುಲಬರ್ಗಾ ವಿ. ವಿ. ಗುಲಬರ್ಗಾ, ಆರ್. ಜಿ. ಹಳ್ಳಿ ನಾಗರಾಜ, ಅನ್ವೇಷಣೆ, ೪೭೮: ೧೧ ನೇ ಮುಖ್ಯ ರಸ್ತೆ, ಎಂ. ಸಿ. ಬಡಾವಣೆ, ವಿಜಯನಗರ ಬೆಂಗಳೂರು-40, ಸಿದ್ಧರಾಮ ಉಪ್ಪಿನ್ ಚೇತನ್ ಪ್ರಿಂಟರ್ಸ್, ಶಹಾಪೂರ, ಶಿ. ರಾಜು. ಅರುಣ ಪ್ರಿಂಟರ್ಸ್, ಎಂ.ಜಿ.ರೋಡ ದಾವಣಗೆರೆ, ಪ್ರಭುದೇವ ಹಾದಿಮನಿ, ಸ ಪ.ಪೂರ್ವ ಕಾಲೇಜು ಕಿನ್ನಾಳ ತಾಲೂಕು ಕೊಪ್ಪಳ (ರಾಯಚೂರು), ಡಾ॥ ಜಯಶ್ರೀ ದಂಡೆ, "ಕವಿಮಾರ್ಗ" ವಿ ವಿ. ಅಂಚೆ, ಸರಸ್ವತಿಪುರ ಗುಲಬರ್ಗಾ, ಶೇಖರ ಕತ್ತಿಗೆ, ೨೨೮, ವೆಸ್ಟ ಕಾರ್ಡರೋಡ್, ೪ನೇ ಮೈನ್, ೪ನೇ ಕ್ರಾಸ್, 3ನೇ ಫೇಸ್, ಮಂಜುನಾಥ ನಗರ ಬೆಂಗಳೂರು-೧೦. ಅಮರೇಶ ಕುಂಬಾರ, ಗ್ರಂಥಪಾಲಕ, ಪಿ.ಸಿ.ಬಿ. ಕಾಲೇಜು ಲಿಂಗಸೂಗುರು [ರಾಯಚೂರು], ಪ್ರೊ. ಸಿ. ಬಿ ನಾವಿ, ವಿ ಕೆ. ನಂದಿ, ಜ್ಯು. ಕಾಲೇಜು ಆಲಮೇಲ್ [ಬಿಜಾಪೂರ], ಸರ್ಪ ಭೂಷಣ ಹಿರೇಮಠ, ಹೀಟ್ ಟ್ರೀಟ್ ಮೆಂಟ ಕಂಪನಿ, ಪೀಣ್ಯ 2ನೇ ಹಂತ ಬೆಂಗಳೂರು, ಶರಣಪ್ಪ ವಡಿಗೇರಿ ಗ್ರಂಥಪಾಲಕ ಕುಷ್ಟಗಿ ಅಂಚೆ [ರಾಯಚೂರು], ದುರ್ಗ ಜಗದೀಶ, ದುರ್ಗಾ ಏಜೆನ್ಸಿಸ್ ಮುಖ್ಯ ರಸ್ತೆ, ರಾಯಚೂರು, ಶಿವಣ್ಣ ಇಜೇರಿ ಕುಂಬಾರ ಓಣಿ ಶಹಾಪೂರ, ವಿಕ್ರಮ ವಿಸಾಜಿ ತಹಸೀಲ ಕಚೇರಿ ಹತ್ತಿರ ಭಾಲ್ಕಿ ಅಂಚೆ, ಬೀದರ ಜಿಲ್ಲೆ, ಬಸವರಾಜ ದೇಸಾಯಿ ಆಲಮೇಲ್ ಅಂಚೆ [ತಾ. ಸಿಂದಗಿ] ಬಿಜಾಪೂರ ಜಿಲ್ಲೆ, ಎಂ. ಕೃಷ್ಣ, ವಿನ್ಯಾಸ್ ಗಾಜಗಾರಪೇಟೆ ರಾಯಚೂರು, ಹನುಮೇಶ ಗುಮಗೇರಿ ತಾ. ಕುಷ್ಟಗಿ, ರಾಯಚೂರು ಜಿಲ್ಲೆ.

ಸಗರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ (ನಿ.)

ಸಗರ, ತಾ. ಶಹಾಪೂರ

ರೈತರು ಬೆಳೆದ ಎಣ್ಣೆ ಬೀಜಗಳಿಗೆ
ಯೋಗ್ಯ ಮತ್ತು ವೈಜ್ಞಾನಿಕ ಬೆಲೆ

ಉತ್ತಮ ಬೀಜ ಮತ್ತು ಗೊಬ್ಬರ ಹಾಗು ಖಾದ್ಯ
ತೈಲಗಳನ್ನು ಯೋಗ್ಯ ಬೆಲೆಯಲ್ಲಿ ಪೂರೈಕೆ
ಪ್ರಾಮಾಣಿಕ ಸೇವೆಯು ನಮ್ಮ ಗುರಿ

ಸದಾ ಸಂದರ್ಶಿಸಿರಿ

○ ○

ಬಸವರಾಜ ಎಸ್. ತುಂಬಗಿ
ಕಾರ್ಯದರ್ಶಿ
ಎ. ಬೀ. ಬೆ. ಸ. ಸಂಘ, ಸಗರ
ತಾ॥ ಶಹಾಪೂರ

ಶರಣಬಸ್ಸಪ್ಪ ಹೊನ್ಕಲ್
ಅಧ್ಯಕ್ಷರು
ಎಣ್ಣೆ ಬೀಜ ಬೆಳೆಗಾರರ
ಸಹಕಾರ ಸಂಘ [ನಿ.] ಸಗರ, ಶಹಾಪೂರ



PRINTED MATTER
BOOK-POST

ಗೆ.
ಶ್ರೀಮತಿ/~~ಶ್ರೀ~~

ಹೇಮಾ ಪಟ್ಟಣಶೆಟ್ಟಿ
[illegible]
× ಧಾರವಾಡ × ಜಿಲ್ಲೆ

ಸಂಪಾದಕರು, ಪ್ರಕಾಶಕರು : ತಿಮ್ಮಯ್ಯ ಪುರ್ಲೆ, ಶಹಾಪುರ (ಕಲಬುರ್ಗಿ)
ಮುದ್ರಕರು : ಗ್ರಿನೋಬಲ್ಸ ಪ್ರಾ. ಲಿ., ಸುಪರ ಮಾರ್ಕೆಟ್, ಗುಲಬರ್ಗಾ-೧